# ಕರ್ಮ ಸುಧಾರಣೆಯ
## ಕುರಿತು
# ಸುವರ್ಣ ಉಪದೇಶಗಳು




**ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್‌ರ**
**(ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್)**
**ಜುಮುಅ ಖುತ್‌ಬಗಳ ಬೆಳಕಿನಲ್ಲಿ**

ಪ್ರಕಾಶಕರು:
ನಝಾರತ್ ನಶ್‌ರೊ ಇಶಾಅತ್ ಖಾದಿಯಾನ್

# ಕರ್ಮ ಸುಧಾರಣೆಯ
# ಕುರಿತು
# ಸುವರ್ಣ ಉಪದೇಶಗಳು

ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್‌ರ
(ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್)
ಜುಮುಅ ಖುತ್‌ಬಗಳ ಬೆಳಕಿನಲ್ಲಿ

ಪ್ರಕಾಶಕರು:
ನಝಾರತ್ ನಶ್‌ರೊ ಇಶಾಅತ್
ಖಾದಿಯಾನ್

# KARMA SUDHARANE KURITHU SUVARNA UPADESHAGALU

Kannada rendering of

***Islahe A'amal Ke Mutalliq Zarreen Nasaih* (Urdu)**

(A Collection of 9 Friday Sermons of
Hadhrat Khalifatul Masih V dealing with the subject of Self – Reformation and Introspection)


| | |
|---|---|
| Translated by : | Inamullah |
| Revised by : | Muhammad Yusuf |
| Assisted by : | M.Ubeidullah |
| Compiled by : | Nazarat Islah - o - Irshad, Qadian |
| Type Setting : | Inamullah |
| Published by : | Nazarat Nashro - Isha'at, Qadian, Distt. Gurdaspur, Punjab -143516 |
| First Edition : | 2016 |
| Copies : | 1000 |
| Printed at : | Fazl-e-Umar Printing Press, Qadian |

| ಕ್ರ.ಸಂ. | ಪರಿವಿಡಿ | ಪು.ಸಂ. |
|---|---|---|
| 1 | ಆರಾಧನೆಯ ಯಥಾರ್ಥ ತಾತ್ಪರ್ಯ | 5 |
| 2 | ಹಝ್ರತ್ ಮಸೀಹ್ ಮೌಊದ್‌ರ(ಅ) ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಉದಾಹರಣೆಗಳು | 7 |
| 3 | ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಚರರ ತ್ಯಾಗಗಳು | 10 |
| 4 | ಹಝ್ರತ್ ಮಸೀಹ್ ಮೌಊದ್‌ರ(ಅ) ಅನುಚರರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಸಂಭವಗಳು | 15 |
| 5 | ಕರ್ಮರಂಗದಲ್ಲಿ ಸುಧಾರಣೆಯ ಆವಶ್ಯಕತೆ | 19 |
| 6 | ಕರ್ಮ ಸುಧಾರಣೆಯಲ್ಲಿ ಅಡೆಚಣೆಯ ಕಾರಣ | 26 |
| 7 | ಮೊದಲ ಕಾರಣ | 28 |
| 8 | ಎರಡನೇ ಕಾರಣ | 29 |
| 9 | ಮೂರನೇ ಕಾರಣ | 33 |
| 10 | ನಾಲ್ಕನೇ ಕಾರಣ | 33 |
| 11 | ಐದನೇ ಕಾರಣ | 35 |
| 12 | ಆರನೇ ಕಾರಣ | 36 |
| 13 | ಏಳನೇ ಕಾರಣ | 37 |
| 14 | ಎಂಟನೇ ಕಾರಣ | 38 |
| 15 | ಕರ್ಮಸುಧಾರಣೆಗೆ ಮೂರು ಸಂಗತಿಗಳ ಆವಶ್ಯಕತೆ | 40 |
| 16 | ಇಚ್ಛಾಶಕ್ತಿಯ ತಾತ್ಪರ್ಯ | 45 |
| 17 | ಅರಿವಿನ ಶಕ್ತಿ ಎಂಬುದರ ತಾತ್ಪರ್ಯ, ಕರ್ಮಶಕ್ತಿಯ ತಾತ್ಪರ್ಯ | 48 |
| 18 | ಜಮಾಅತಿನ ಮುರಬ್ಬಿ ಮತ್ತು ಉಪದೇಶಕರ ಕರ್ತವ್ಯಗಳು | 50 |
| 19 | ಕರ್ಮಸುಧಾರಣೆಗಾಗಿ ನಾಲ್ಕು ಆಶ್ರಯಗಳ ಆವಶ್ಯಕತೆ | 56 |
| 20 | ಮುಬಲ್ಲಿಗ್ ಮತ್ತು ಮುರಬ್ಬಿಗಳು ಹೃದಯಗಳ ಸುಧಾರಣೆ ಮಾಡಲಿ | 65 |
| 21 | ಪ್ರಧಾನ ಆಯುಧ ದುಆ ಆಗಿದೆ | 66 |
| 22 | ಕರ್ಮಸುಧಾರಣೆಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳು | 67 |

# ಮುನ್ನುಡಿ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ನವೆಂಬರ್ 29, 2013 ರಿಂದ ಫೆಬ್ರವರಿ 07, 2014 ವರೆಗೆ ನೀಡಿದ ಹದಿನೊಂದು ಖುತ್‌ಬಗಳಲ್ಲಿ ಒಂಬತ್ತು ಖುತ್‌ಬಗಳು ಕರ್ಮ ಸುಧಾರಣೆಯ ಆವಶ್ಯಕತೆ ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆಯಾಗಿದ್ದವು. ಹುಝೂರ್ ಅವುಗಳಲ್ಲಿ ಅಹ್ಮದಿಯರಿಗೆ, ವಿಶೇಷವಾಗಿ ಮುಬಲ್ಲಿಗ್, ಮುಅಲ್ಲಿಮ್ ಮತ್ತು ಜಮಾಅತಿನ ಹುದ್ದೇದಾರರಿಗೆ ಅವರ ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಿ ಕೊಟ್ಟಿದ್ದರು.

ಈ ಖುತ್‌ಬಗಳ ಸಾರಾಂಶವನ್ನು ಮನ್‌ಸೂಬ ಬಂದಿ ಸಮಿತಿಯ ವತಿಯಿಂದ ಪ್ರಕಾಶನಗೊಳಿಸಲಾಗುತ್ತಿದೆ. ಎಲ್ಲ ಮುಬಲ್ಲಿಗರು, ಮುಅಲ್ಲಿಮರು ಮತ್ತು ಹುದ್ದೇದಾರರು ಇವುಗಳನ್ನು ಸ್ವತಃ ಓದುವುದಲ್ಲದೆ, ಜಮಾಅತಿನವರಿಗೂ ಓದಿ ಹೇಳುವ ಮತ್ತು ಓದಿಸುವ ವ್ಯವಸ್ಥೆ ಮಾಡಬೇಕು. ಇದರ **C.D.**ಯನ್ನು ನಝ಼ಾರತ್ ನಶ್‌ರ್ ವ ಇಶಾಅತ್‌ನಿಂದ ಪಡೆದು ಕೊಂಡು ಜಮಾಅತಿನಲ್ಲಿ ಕೇಳಿಸಿ ಕೊಡುವ ವ್ಯವಸ್ಥೆ ಸಹ ಮಾಡಬೇಕು.

ಅಲ್ಲಾಹನು ನಮಗೆಲ್ಲರಿಗೂ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರ(ಅಯ್ಯದಹುಲ್ಲಾಹ್) ಈ ನಿರ್ದೇಶನಗಳ ಪ್ರಕಾರ ನಡೆಯಲು, ನಡೆಸಲು ಮತ್ತು ಜಮಾಅತಿನ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸಲು ಸೌಭಾಗ್ಯ ನೀಡಲಿ. ಆಮೀನ್.

**ನಾಝಿರ್ ನಶ್‌ರ್ ವ ಇಶಾಅತ್, ಖಾದಿಯಾನ್**

## (1)
## ಜುಮುಅ ಖುತ್‌ಬದ ಸಾರಾಂಶ (29/11/2013)

**ಆರಾಧನೆಯ ಯಥಾರ್ಥ ತಾತ್ಪರ್ಯ:**

ತಶಹ್ಹುದ್, ತಅವ್ವುಧ್ ಮತ್ತು ಸೂರಃ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್)

وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ

**"ವಮಾ ಖ಼ಲಖ್‌ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಅ್‌ಬುದೂನ್"**(51:57) ಎಂಬ ಖುರ್‌ಆನಿನ ವಚನ ಓದಿದರು. ಅನಂತರ ಮನುಷ್ಯನ ಜೀವಿತದ ಉದ್ದೇಶಗಳ ಕಡೆಗೆ ಬೆಳಕು ಬೀರುತ್ತಾ ಅವರು ಹೇಳಿದರು:

ಪ್ರತಿಯೊಂದು ಸಂಗತಿಗಳಲ್ಲಿ ಅಲ್ಲಾಹನ ಸಂತೃಪ್ತಿ ದೃಷ್ಟಿಯಲ್ಲಿ ಇರುವಾಗ ಮತ್ತು ತಮ್ಮ ಲೌಕಿಕವಾದ ಲಾಭಗಳಿಗೆ ಯಾವುದೇ ಬೆಲೆ ಕಲ್ಪಿಸದಿರುವಾಗ ಒಬ್ಬ ದಾಸ ಯಥಾರ್ಥ ದಾಸನೆಂದು ಕರೆಯಲ್ಪಡುತ್ತಾನೆ. ಈ ವಿಷಯವನ್ನು ನಾನು ಹಲವು ಬಾರಿ ಹೇಳಿ ನಿಮ್ಮ ಗಮನ ಹರಿಸುತ್ತಿರುತ್ತೇನೆ. ಇಂದು ಈ ವಿಷಯವನ್ನು ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಖುತ್‌ಬಗಳಿಂದ ಪ್ರಯೋಜನ ಪಡೆಯುತ್ತಾ ನಿಮ್ಮ ಮುಂದಿರಿಸುತ್ತೇನೆ. ಸಂಭವಗಳೊಂದಿಗೆ ವಿಷಯವನ್ನು ವಿವರಿಸುವುದು ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ವಾಡಿಕೆಯಾಗಿತ್ತು. ಇದರಿಂದ ಕೆಲವು ಮಗ್ಗಲುಗಳ ಕಾರ್ಯರೂಪ ನಮ್ಮ ಮುಂದೆ ಬರುತ್ತದೆ. **ವಮಾ ಖ಼ಲಖ್‌ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಅ್‌ಬುದೂನ್** ಎಂದರೆ ನನ್ನನ್ನು ಆರಾಧಿಸಲಿಕ್ಕೋಸ್ಕರ ಅಥವಾ ನನ್ನ ದಾಸರನ್ನಾಗಿ ಮಾಡಲಿಕ್ಕೆ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. ಈ ವಿಷಯವನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮನುಷ್ಯನ ಸೃಷ್ಟಿಯ ಮುಖ್ಯ ಉದ್ದೇಶ ಇದಾಗಿದೆ. ಆದರೆ ಮನುಷ್ಯನ ಸೃಷ್ಟಿಸುವಿಕೆಯ ಉದ್ದೇಶದಲ್ಲಿ ವಿಜಯ ಉಂಟಾಗಿದೆಯೇ? ಯಾವ ಕೆಲಸವನ್ನು ದೃಷ್ಟಿಯಲ್ಲಿಟ್ಟು ಅಲ್ಲಾಹನು ಮನುಷ್ಯಕುಲವನ್ನು ಸೃಷ್ಟಿಸಿದನೋ ಆ ಕೆಲಸವನ್ನು ಮಾಡಿಸಿದನೇ? ಎಂದು ದೊಡ್ಡ ದೊಡ್ಡ ತತ್ವಜ್ಞಾನಿಗಳು ಮತ್ತು ವಿದ್ಯಾವಂತರು ಕೇಳುತ್ತಾರೆ. ಮನುಷ್ಯನು ನಿಜವಾಗಿಯೂ ಈ ಉದ್ದೇಶವನ್ನು ಈಡೇರಿಸುತ್ತಿದ್ದಾನೆಯೇ? ಅಲ್ಲಾಹನ ದಾಸನೆಂದು ಕರೆಯಲ್ಪಡಲು ಅರ್ಹವಾದ ರೀತಿಯ ಅಭಿವೃದ್ಧಿ ಮನುಷ್ಯನು

ಮಾಡಿದ್ದಾನೆಯೇ? ಎಂದು ಅವರು ಕೇಳುತ್ತಾರೆ. ಇದರ ಉತ್ತರ 'ಇಲ್ಲ' ಎಂದಾಗಿದೆ. ಮನುಷ್ಯನ ಸೃಷ್ಟಿಕರ್ತನಾಗಿ ಯಾರಾದರೂ ಇದ್ದರೆ ಅವನಿಗೆ ಈ ಉದ್ದೇಶದಲ್ಲಿ ವಿಜಯ ಏಕೆ ಉಂಟಾಗಲಿಲ್ಲ ಎಂದು ಅವರು ಕೇಳುತ್ತಾರೆ. ಇದರ ಉತ್ತರವೇನೆಂದರೆ ಅಲ್ಲಾಹನ ಪೈಗಂಬರರು ಈ ಸವಾಲಿಗೆ ಉತ್ತರ ಕೊಡಲಿಕ್ಕೆ ಆಗಮಿಸುತ್ತಾರೆ. ಈ ಉದ್ದೇಶ ಈಡೇರಿದೆ ಎಂದು ಶತ್ರುಗಳು ಸಹ ಕಂಡು ಒಪ್ಪುವಂತಹ ರೀತಿಯ ಒಳಿತಿನ ಪ್ರವಾಹ ಅವರು ಹರಿಸುತ್ತಾರೆ. ಆ ದಿನದ ಆಗಮನಕ್ಕಾಗಿ ಸಾವಿರ ದಿನಗಳು ಕಾಯಬೇಕಾಗಿ ಬಂದರೂ ಅದು ಹೆಚ್ಚಲ್ಲ. ಅಲ್ಲಾಹನು ಸಹ ಪೈಗಂಬರರ ಕಾಲಘಟ್ಟವನ್ನು ಲೈಲತುಲ್ ಖದ್ರ್(ವಿಧಿ ನಿರ್ಣಾಯಕ ರಾತ್ರಿ) ಎಂದು ಹೆಸರಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: **"ಲೈಲತುಲ್ ಖದ್ರಿ ಖೈರುಮ್ಮಿನ್ ಅಲ್ಫಿ ಶಹ್ರ್"** (ಪವಿತ್ರ ಖುರ್ಆನ್ – 97:4) ಎಂದರೆ ಆ ನಿರ್ಣಯರಾತ್ರಿಯು ಸಾವಿರ ಮಾಸಗಳಿಂತ ಶ್ರೇಷ್ಠವಾಗಿದೆ. ಒಂದು ಶತಮಾನದ ಮನುಷ್ಯರನ್ನು ಈ ಒಂದು ರಾತ್ರಿಗಾಗಿ ಬಲಿಯರ್ಪಿಸಿದರೂ ಅದು ಪೈಗಂಬರರ ಮೂಲಕ ಲೋಕಕ್ಕೆ ಲಭಿಸುವ ಅನುಗ್ರಹಗಳ ಮುಂದೆ ತುಚ್ಛವಾದುದಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ರು[ರ] ಹೇಳುತ್ತಾರೆ: ನಾನು ಈ ವರ್ಷ ಕರ್ಮ ಸುಧಾರಣೆಗಾಗಿ ಕೆಲವು ಖುತ್‌ಬಗಳು ನೀಡಿದ್ದೆ (ಇದು 1936ರ ಮಾತಾಗಿದೆ. ಅವರು ಆಗ ಕೆಲವು ಖುತ್‌ಬಗಳನ್ನು ನೀಡಿದ್ದರು. ಹಝ್ರತ್ ಮಸೀಹ್ ಮೌಊದ್‌ರ[ಅ] ನಿಯೋಗದ ಮಹತ್ತಾದ ಉದ್ದೇಶದ ಈಡೇರುವಿಕೆಗಾಗಿ ನಮ್ಮ ತ್ಯಾಗದ ಆವಶ್ಯಕತೆ ಇದೆ ಎಂದು ಅವರು ಅವುಗಳಲ್ಲಿ ಹೇಳಿದ್ದರು. ಇದು ಕೇವಲ ಆ ಕಾಲದ ಮಾತಲ್ಲ, ಇದೊಂದು ನಿರಂತರ ಮುಂದುವರಿಯುವಂತಹ ಪ್ರಕ್ರಿಯೆಯಾಗಿದೆ. ಇಂದೂ ಎಂದೂ ಅದರ ಆವಶ್ಯಕತೆ ಇದೆ ಮತ್ತು ಇರುವುದು.) ವಿಶ್ವಾಸಾದರ್ಶದ ರೂಪದಲ್ಲಿ ನಾವು ಲೋಕದಲ್ಲಿ ನಮ್ಮ ಪ್ರಭಾವ ಬೀರಿದ್ದೇವೆ. ಆದರೆ ಕರ್ಮರಂಗದಲ್ಲಿ ಇಸ್ಲಾಮಿನ ಆಧಿಪತ್ಯ ತೋರಿಸಬೇಕಾದ ಆವಶ್ಯಕತೆ ಇದೆ. ಏಕೆಂದರೆ ಇದಿಲ್ಲದೆ ವಿರೋಧಿಗಳ ಮೇಲೆ ಯಥಾರ್ಥ ಪ್ರಭಾವ ಉಂಟಾಗಲಿಕ್ಕಿಲ್ಲ. ಕರ್ಮರಂಗದಲ್ಲಿ ಇದಕ್ಕೆ ದೊಡ್ಡ ಉದಾಹರಣೆ ಸತ್ಯಸಂಧತೆಯದ್ದಾಗಿದೆ. ಇದು ಶತ್ರುವೂ ಮನವರಿಕೆ ಮಾಡಬಹುದಾದ ಸಂಗತಿಯಾಗಿದೆ. ಶತ್ರುವೂ ಹೃದಯದ ನಿಷ್ಠೆ ಮತ್ತು ವಿಶ್ವಾಸವನ್ನು ನೋಡಲಾರನು. ಆದರೆ ಸತ್ಯಸಂಧತೆಯನ್ನು ಕಾಣಬಹುದು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್[ಅಯ್ಯದಹುಲ್ಲಾಹ್] ಹೇಳುತ್ತಾರೆ: ಖಂಡಿತವಾಗಿಯೂ ಸತ್ಯಸಂಧತೆ ಅತ್ಯಧಿಕ ಪ್ರಭಾವವನ್ನು

ಉಂಟುಮಾಡುತ್ತದೆ. ಆ ಕಾಲದಲ್ಲಿ ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ಚಿಂತಿತರಾಗುತ್ತಿದ್ದರು. ಈಗ ಸಹ ನನಗೆ ಅಹ್ಮದಿಯೇತರರ ಪತ್ರಗಳು ಬರುತ್ತವೆ, ಅದರಲ್ಲಿ ಅಹ್ಮದಿಯರ ಸತ್ಯಸಂಧತೆಯ ಮಟ್ಟದ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಇದರ ಕಾರಣ ಅವರು ಜಮಾಅತನ್ನು ಪ್ರಶಂಸಿಸುತ್ತಾರೆ. ಆದರೆ ಅಹ್ಮದಿಗಳಿಂದ ಮೋಸಗಾರಿಕೆ ಮತ್ತು ಸುಳ್ಳನ್ನು ಎದುರಿಸಬೇಕಾಗಿ ಬಂದರೆ ಅವರು ಹೀಗೆ ಬರೆಯುತ್ತಾರೆ: "ನಾವು ಜಮಾಅತಿನ ಒಳ್ಳೆಯ ಹೆಸರಿನ ಕಾರಣ ಭರವಸೆ ಇಟ್ಟಿದ್ದೆವು, ಆದರೆ ಜಮಾಅತಿನ ಇಂತಿಂತಹ ವ್ಯಕ್ತಿ ನಮಗೆ ಮೋಸ ಮಾಡಿದ್ದಾನೆ."

ಮೋಸಮಾಡುವ ಇಂತಹ ವ್ಯಕ್ತಿಗಳು ಪ್ರತ್ಯಕ್ಷದಲ್ಲಿ ತಮ್ಮ ವೈಯಕ್ತಿಕ ವಿಷಯಗಳಲ್ಲಿ ಹೀಗೆ ಹೇಳುತ್ತಾರೆ: "ಇದು ನಾವು ಮಾಡುತ್ತಿರುವ ನಮ್ಮ ಸ್ವಂತ ವ್ಯವಹಾರ ಅಥವಾ ವ್ಯಾಪಾರವಾಗಿದೆ. ಜಮಾಅತಿಗೆ ಇದರೊಂದಿಗೆ ಯಾವ ಸಂಬಂಧ?." ಆದರೆ ಕೊನೆಗೆ ಅವರು ಜಮಾಅತಿಗೆ ಸಹ ಕಳಂಕ ಮತ್ತು ಕೆಟ್ಟ ಹೆಸರು ಉಂಟು ಮಾಡುವವರಾಗುತ್ತಾರೆ.

**ಹಝ್ರತ್ ಮಸೀಹ್ ಮೌಊದ್‌ರ(ಅ) ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಉದಾಹರಣೆಗಳು:**

ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಮಸೀಹ್ ಮೌಊದ್‌ರ(ಅ) ವಾದಕ್ಕೆ ಮುಂಚಿನ ಕೌಟುಂಬಿಕ ಸೊತ್ತಿನ ಬಗ್ಗೆಗಿನ ಮೊಕದ್ದಮೆಯ ಕುರಿತು ಹೀಗೆ ವಿವರಿಸಿದ್ದಾರೆ: ಆ ಮನೆಯ ವರಾಂಡದ ಮುಂದೆ ಒಂದು ದಿಣ್ಣೆ ಇತ್ತು. ಆ ವರಾಂಡದ ಸ್ಥಳ ನಮ್ಮ ಕುಟುಂಬಕ್ಕೆ ಸೇರಿದ್ದಾಗಿತ್ತು. ಆದರೆ ಅದು ಅದರೊಟ್ಟಿಗೆ ಇದ್ದ ಮನೆಯ ಮಾಲಿಕರ ವಶದಲ್ಲಿ ಬಹುಕಾಲದಿಂದ ಇತ್ತು. ಹಝ್ರತ್ ಮಸೀಹ್ ಮೌಊದ್‌ರ(ಅ) ಹಿರಿಯ ಸಹೋದರ ಅದನ್ನು ಮರಳಿ ಪಡೆಯಲು ಮೊಕದ್ದಮೆ ಹೂಡಿದರು. ತಮ್ಮ ಹಕ್ಕೆಂದು ಗಣಿಸುವುದನ್ನು ಪಡೆಯಲು ಇಂತಹ ಮೊಕದ್ದಮೆಗಳಲ್ಲಿ ಅಸಲಿ ಮತ್ತು ನಕಲಿ ಸಾಕ್ಷ್ಯಗಳನ್ನು ಒದಗಿಸುವುದು ಲೌಕಿಕ ಜನರ ರೀತಿಯಾಗಿದೆ. ಹಝ್ರತ್ ಮಸೀಹ್ ಮೌಊದ್‌ರ(ಅ) ಹಿರಿಯ ಸಹೋದರ ಸಹ ಹೀಗೆಯೇ ಮಾಡಿದರು. ಹಲವಾರು ಸಾಕ್ಷ್ಯಗಳನ್ನು ತಂದರು. ಮನೆಯ ಮಾಲಿಕರು ಹೇಳಿದರು: "ನಮಗೆ ಯಾವುದೇ ಪುರಾವೆಯ ಆವಶ್ಯಕತೆ ಇಲ್ಲ; ಇವರ ಕಿರಿಯ ಸಹೋದರನನ್ನು ಕರೆದು ಸಾಕ್ಷ್ಯ ನುಡಿಸಿರಿ. ಅವರು ಏನು ಹೇಳಿದರೂ ನಮಗೆ ಅದು

ಸ್ವೀಕಾರಾರ್ಹವಾಗಿರುವುದು." (ಹಝ್ರತ್ ಮಸೀಹ್ ಮೌಊದ್‌ರ(ಅ) ಕುರಿತು ಅವರು ಹೀಗೆ ಹೇಳಿದರು). ಅದರಂತೆ ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ನ್ಯಾಯಲಯಕ್ಕೆ ಕರೆದು ಹೀಗೆ ಕೇಳಲಾಯಿತು: "ನೀವು ಇವರನ್ನು ಈ ಮಾರ್ಗದಿಂದ ಹೋಗಿಬರುವುದಾಗಿಯೂ ಕುಳಿತು ಕೊಳ್ಳುವುದಾಗಿಯೂ ಬಹುಕಾಲದಿಂದ ನೋಡಿದ್ದೀರ?" ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಹೌದು, ನಾನು ನೋಡಿದ್ದೇನೆ." ನ್ಯಾಯಾಲಯ ವಿರೋಧಿ ಪಕ್ಷದ ಪರವಾಗಿ ತೀರ್ಮಾನ ಹೊರಡಿಸಿತು. ಹಝ್ರತ್ ಮಸೀಹ್ ಮೌಊದ್‌ರ(ಅ) ಸಹೋದರ ಅವರ ಮೇಲೆ ತುಂಬಾ ಕೋಪಗೊಂಡರು. ಆದರೆ ಹಝ್ರತ್ ಮಸೀಹ್ ಮೌಊದ್‌ರು(ಅ) ಹೇಳಿದರು: "ಸತ್ಯ ಹೀಗಿರುವಾಗ ನಾನು ಹೇಗೆ ನಿರಾಕರಿಸಲಿ?"

ಅದೇ ರೀತಿಯಲ್ಲಿ, ಹಝ್ರತ್ ಮಸೀಹ್ ಮೌಊದ್‌ರು(ಅ) ಅಂಚೆ ಕಚೇರಿಗೆ ಮೋಸ ಮಾಡಿದರು ಎಂದು ಅವರ ವಿರುದ್ಧವಾಗಿ ಮೊಕದ್ದಮೆ ಹೂಡಲಾಯಿತು. ಯಾವುದೇ ವ್ಯಕ್ತಿ ಪಾಕೆಟಲ್ಲಿ ಯಾವುದಾದರೂ ಪತ್ರ ಇಟ್ಟರೆ ಅಂಚೆ ಕಚೇರಿಗೆ ಅವನು ಮೋಸ ಮಾಡಿ ಹಣ ಉಳಿತಾಯ ಮಾಡಿದ್ದಾನೆ ಎಂದು ಹೇಳಲ್ಪಡುವ ಕಾನೂನು ಇತ್ತು. ಇದು ಜೈಲು ಶಿಕ್ಷೆ ಲಭಿಸುವಂತಹ ದಂಡನೀಯ ಅಪರಾಧವಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಪಾಕೆಟಲ್ಲಿ ಆ ಲೇಖನವನ್ನು ಪ್ರಕಾಶನಕ್ಕಾಗಿ ಕಳುಹಿಸಿದ್ದರು. ಅದರೊಂದಿಗೆ ಲೇಖನಕ್ಕೆ ಸಂಬಂಧಿಸಿದ ಕೆಲವು ನಿರ್ದೇಶನಗಳನ್ನು ಒಳಗೊಂಡ ಒಂದು ಪತ್ರ ಸಹ ಇಟ್ಟಿದ್ದರು.  ಅವರು ಅದನ್ನು ಅದರ ಭಾಗವೆಂದೇ ಗಣಿಸಿದ್ದರು. ನಷ್ಟ ಉಂಟುಮಾಡುವ ಉದ್ದೇಶವಿದ್ದಿರಲಿಲ್ಲ. ಬಹುಶಃ ಕ್ರೈಸ್ತನಾಗಿದ್ದ ಪ್ರೆಸ್ಸಿನ ಮಾಲಿಕ ಇದರ ಬಗ್ಗೆ ದೂರು ಕೊಟ್ಟರು. ಹಝ್ರತ್ ಮಸೀಹ್ ಮೌಊದ್‌ರ(ಅ) ಮೇಲೆ ಮೊಕದ್ದಮೆ ಹೂಡಲಾಯಿತು. ವಕೀಲನು ಹೇಳಿದನು: "ಮೊಕದ್ದಮೆ ಹೂಡಿದವರ ಶತ್ರುತ್ವ ಎದ್ದು ಕಾಣುತ್ತಿದೆ ಮತ್ತು ಪುರಾವೆಗಳು ಆಧಾರರಹಿತವಾದುದಾಗಿದೆ. ಪತ್ರವನ್ನು ಇಟ್ಟಿರಲಿಲ್ಲ ಎಂದು ನೀವು ಹೇಳಿದರೆ ಏನೂ ಆಗಲಿಕ್ಕಿಲ್ಲ." ಹಝ್ರತ್ ಮಸೀಹ್ ಮೌಊದ್‌ರು(ಅ) ಹೇಳಿದರು: "ಇದು ಸಾಧ್ಯವಲ್ಲ, ನಾನು ಮಾಡಿದ್ದನ್ನು ಹೇಗೆ ನಿರಾಕರಿಸಲಿ?" ಹಾಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಮುಂದಿರಿಸಲ್ಪಟ್ಟಾಗ "ನೀವು ಒಂದು ಪತ್ರವನ್ನು ಇಟ್ಟಿದ್ದೀರ?" ಎಂದು ನ್ಯಾಯಾಲಯ ಕೇಳಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಹೌದು, ನಾನು ಇಟ್ಟಿದ್ದೆ; ಆದರೆ ಯಾರಿಗೂ ಮೋಸ ಮಾಡಲಿಕ್ಕೆ ಅಲ್ಲ; ಬದಲಾಗಿ ಪತ್ರವನ್ನು ಲೇಖನದ ಭಾಗವೆಂದೇ ಗಣಿಸಿದ್ದೆ".

ಈ ಸತ್ಯಸಂಧತೆಯಿಂದ ಉಂಟಾದ ಪ್ರಭಾವದಿಂದ ನ್ಯಾಯಾಲಯ ಹೀಗೆ ಹೇಳಿತು: "ಇಂಥದೊಂದು ಅಪರಾಧಕ್ಕೆ ಒಬ್ಬ ಸತ್ಯಸಂಧ ಮತ್ತು ಪ್ರಾಮಾಣಿಕ ವ್ಯಕಿಯನ್ನು ಶಿಕ್ಷಿಸಲಾಗದು." ಅನಂತರ ಬಿಡುಗಡೆಗೊಳಿಸಿತು.

ಹಝ್ರತ್ ಮುಸ್ಲಿಹ್ ಮೌಊದ್‌ರು(ರ) ಹೇಳುತ್ತಾರೆ: ಪ್ರವಾದಿಗಳು ಲೋಕಕ್ಕೆ ಬಂದು ನೇರಮಾರ್ಗ ಮತ್ತು ಸತ್ಯಸಂಧತೆಯನ್ನು ನೆಲೆನೆಲ್ಲಿಸುತ್ತಾರೆ ಮತ್ತು ನೋಡುವವರು ಪ್ರಭಾವಿತರಾಗುವಂತಹ ಮಾದರಿಯನ್ನು ಮುಂದಿಡುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರು ಲೋಕಕ್ಕೆ ಬಂದು ಯಾವುದೇ ತೋಪುಗಳನ್ನು ಮತ್ತು ಮೆಷೀನ್‌ಗನ್‌ಗಳನ್ನು ನಿರ್ಮಿಸಲಿಲ್ಲ, ಬ್ಯಾಂಕ್ ಜಾರಿಗೊಳಿಸಲಿಲ್ಲ, ವಾಣಿಜ್ಯ ಮತ್ತು ಕೈಗಾರಿಕಾ ಯಂತ್ರಗಳನ್ನು ನಿರ್ಮಿಸಲಿಲ್ಲ. ಹಾಗಾದರೆ ಹಝ್ರತ್ ಪೈಗಂಬರ್(ಸ) ಲೋಕಕ್ಕೆ ನೀಡಿದ ಮತ್ತು ಅವರ ಅನುಯಾಯಿಗಳಿಗೆ ಅದರ ಸಂರಕ್ಷಣೆಯ ಜವಾಬ್ದಾರಿ ಒಪ್ಪಿಸಲ್ಪಟ್ಟ ವಸ್ತು ಏನಾಗಿತ್ತು? ಅದು ಸತ್ಯದ ಚೈತನ್ಯ ಮತ್ತು ಅತ್ಯುನ್ನತ ಸದ್ಗುಣಗಳಾಗಿತ್ತು. ಇದು ಇದಕ್ಕೆ ಮುಂಚೆ ಕಣ್ಮರೆಯಾಗಿತ್ತು. ಹಝ್ರತ್ ಪೈಗಂಬರ್(ಸ) ಮೊದಲು ಅವುಗಳನ್ನು ಗಳಿಸಿದ ನಂತರ ಲೋಕಕ್ಕೆ ಕೊಟ್ಟರು. ಅವುಗಳನ್ನು ಸಂರಕ್ಷಿಸುವುದೇ ಸಹಾಬಿವರ್ಯರ, ಅವರ ಮಕ್ಕಳ ಮತ್ತು ಮೊಮ್ಮಕ್ಕಳ ಜವಾಬ್ದಾರಿಯಾಗಿತ್ತು. ಲೋಕದೆಲ್ಲೆಡೆ ಅಲ್ಲಾಹನ ವಚನವನ್ನು ತಲುಪಿಸಬೇಕೆಂದು ಹಝ್ರತ್ ಪೈಗಂಬರರಿಗೆ(ಸ) ಪ್ರಥಮ ದಿವ್ಯವಾಣಿಯ ಮೂಲಕ ಆಜ್ಞಾಪಿಸಲ್ಪಟ್ಟಾಗ, ಈ ಮಹತ್ತಾದ ಕರ್ತವ್ಯವನ್ನು ಹೇಗೆ ಈಡೇರಿಸುವುದು ಎಂದು ಯೋಚಿಸಿ ಹಝ್ರತ್ ಪೈಗಂಬರ್(ಸ) ಸ್ವಲ್ಪ ಗಾಬರಿಗೊಂಡರು. ಹಝ್ರತ್ ಖದೀಜರ(ರ) ಬಳಿ ಬಂದರು. ಅತ್ಯಂತ ತೀಕ್ಷ್ಣವಾದ ಅನುಭವಗಳಿಂದ ಹಝ್ರತ್ ಪೈಗಂಬರರಿಗೆ(ಸ) ಆ ಸಂದರ್ಭದಲ್ಲಿ ಚಳಿಯ ಅನುಭವವಾಗುತ್ತಿತ್ತು. ಮನೆಗೆ ಪ್ರವೇಶಿಸಿ ತನ್ನನ್ನು ಹೊದಿಕೆಯಿಂದ ಹೊದಿಸಲು ಹಝ್ರತ್ ಪೈಗಂಬರ್(ಸ) ಹೇಳಿದರು. ನಿಮಗೆ ಏನಾಯಿತು ಎಂದು ಹಝ್ರತ್ ಖದೀಜ(ರ) ಕೇಳಿದರು? ಹಝ್ರತ್ ಪೈಗಂಬರ್(ಸ) ನಡೆದ ಎಲ್ಲ ಸಂಗತಿಯನ್ನು ಹೇಳಿದರು. ಹಝ್ರತ್ ಖದೀಜ(ರ) ಉತ್ತರಿಸಿದರು: **(ಕಲ್ಲಾ ವಲ್ಲಾಹಿ ಲಾ ಯುಖ್‌ಝೀಕಲ್ಲಾಹು ಅಬದಾ)** "ಅಲ್ಲಾಹನಾಣೆ, ಖಂಡಿತವಾಗಿಯೂ ಅಲ್ಲಾಹನು ನಿಮ್ಮನ್ನು ಎಂದಿಗೂ ಅವಮಾನಿಸಲಿಕ್ಕಿಲ್ಲ. ಏಕೆಂದರೆ ನಿಮ್ಮಲ್ಲಿ ಇಂತಿಂತಹ ಸದ್ಗುಣಗಳಿವೆ. (ಅವರು ಹೇಳಿದ ಸದ್ಗುಣಗಳಲ್ಲಿ ಒಂದು ಇದಾಗಿತ್ತು): ಲೋಕದಿಂದ ಅಪ್ರತ್ಯಕ್ಷವಾದ ನೈತಿಕಗುಣಗಳನ್ನು ನೀವು ನಿಮ್ಮೊಳಗೆ ಪುನಃ ಉಂಟು ಮಾಡಿದ್ದೀರಿ.

ಮನುಷ್ಯಕುಲದ ಕಳೆದುಹೋದ ಸೊತ್ತನ್ನು ಪುನಃ ಹುಡುಕಿ ತಂದಿದ್ದೀರಿ. ಹೀಗಿರುವಾಗ ಅಲ್ಲಾಹನು ನಿಮ್ಮಂತಹ ವ್ಯಕ್ತಿಯನ್ನು ಹೇಗೆ ವ್ಯರ್ಥಗೊಳಿಸುವನು?" ಒಟ್ಟಿನಲ್ಲಿ ಪ್ರವಾದಿಗಳ ನಿಯೋಗದ ಉದ್ದೇಶ ಇದೇ ಆಗಿರುತ್ತದೆ ಮತ್ತು ಸತ್ಯವಿಶ್ವಾಸಿಗಳಿಗೆ ಈ ಅಮಾನತನ್ನು ಅರ್ಪಿಸಲಾಗಿರುತ್ತದೆ. ಇದನ್ನು ಸಂರಕ್ಷಿಸುವುದು ಅವರ ಕರ್ತವ್ಯವಾಗಿರುತ್ತದೆ. ಪ್ರೀತಿಯ ಕಾರಣ ಪ್ರವಾದಿಗಳ ಅಸ್ತಿತ್ವ ಸತ್ಯವಿಶ್ವಾಸಿಗಳಿಗೆ ಇಷ್ಟಕರವಾಗಿರುತ್ತದೆ. ಆದರೆ ಯಥಾರ್ಥದಲ್ಲಿ ಯಾವ ಪ್ರಕಾಶವನ್ನು ಲೋಕಕ್ಕೆ ತಲುಪಿಸಲು ಅಲ್ಲಾಹನು ಪ್ರವಾದಿಗಳನ್ನು ನಿಯೋಜಿಸುತ್ತಾನೋ ಆ ಪ್ರಕಾಶವೇ ಪ್ರವಾದಿಗಳ ಮಹಿಮೆಗೆ ಕಾರಣವಾಗಿರುತ್ತದೆ. ಅವರು ತರುವ ಆ ಸಂದೇಶವೇ ಅವರನ್ನು ಹಿರಿದಾಗಿಸುತ್ತದೆ. ಒಟ್ಟಿನಲ್ಲಿ ಅನುಯಾಯಿಗಳು ಪ್ರವಾದಿಗಳ ಅಸ್ತಿತ್ವದ ಸಂರಕ್ಷಣೆಗಾಗಿ ತಮ್ಮ ಜೀವವನ್ನು ತ್ಯಾಗ ಮಾಡುತ್ತಿರುವಾಗ, ಆ ಸಂದೇಶದ ಸಂರಕ್ಷಣೆಗಾಗಿ ಏನೆಲ್ಲ ಮಾಡಲು ತಯಾರಾಗಲಿಕ್ಕಿಲ್ಲ!

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಚರರ ತ್ಯಾಗಗಳು:

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಜೀವದ ಸಂರಕ್ಷಣೆಗಾಗಿ ಸಹಾಬಿವರ್ಯರು ತ್ಯಾಗಗಳನ್ನು ಮಾಡಿದ ಘಟನೆಗಳನ್ನು ಓದುವಾಗ ಶರೀರ ರೋಮಾಂಚನಗೊಳ್ಳುತ್ತದೆ. ಅವರ ಪ್ರೇಮವನ್ನು ನೋಡಿ ಇಂದು ಸಹ ಪ್ರೇಮದ ಅಲೆಗಳು ಏಳುತ್ತದೆ. ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರರ(ಸ) ಸಮೀಪ ಕೇವಲ ಒಬ್ಬ ಸಹಾಬಿ ಬಾಕಿ ಉಳಿದ ಸಂದರ್ಭ ಬಂದಿತ್ತು. ಶತ್ರುಗಳು ಗೊತ್ತುಗುರಿ ಇಲ್ಲದೆ ಬಾಣ ಮತ್ತು ಕಲ್ಲುಗಳನ್ನು ಎಸೆಯುತ್ತಿದ್ದರು. ಆ ಸಹಾಬಿ ತನ್ನ ಕೈಯನ್ನು ಹಝ್ರತ್ ಪೈಗಂಬರರ(ಸ) ಅನುಗ್ರಹೀತ ಮುಖದ ಕಡೆಗೆ ಮಾಡಿದರು. ಎಂದೆಂದಿಗೂ ನಿರುಪಯುಕ್ತ ಆಗುವಷ್ಟು ಮಟ್ಟಿಗೆ ಅವರ ಕೈಗೆ ಬಾಣ ಮತ್ತು ಕಲ್ಲುಗಳು ತಗುಲಿದ್ದವು. "ಇದೇನಾಗಿತ್ತು" ಎಂದು ಯಾರೋ ಆ ಸಹಾಬಿಯನ್ನು ಕೇಳಿದ್ದರು. ಅವರು ಹೇಳಿದರು: "ಎಂದೆಂದಿಗೂ ಉಪಯೋಗಶೂನ್ಯ ಆಗುವಷ್ಟು ಮಟ್ಟಿಗೆ ಅದಕ್ಕೆ ಬಾಣ ಮತ್ತು ಕಲ್ಲುಗಳು ತಗುಲಿದ್ದವು." ಅ ವ್ಯಕ್ತಿ ಪುನಃ ಕೇಳಿದರು: "ನಿಮ್ಮ ನಾಲಗೆಯಿಂದ 'ಉಫ್' ಎಂಬ ಶಬ್ದ ಹೊರಡುತ್ತಿರಲಿಲ್ಲವೇ?' ಆಗ ಆ ಸಹಾಬಿ ಬಹಳ ಉತ್ತಮ ರೀತಿಯಲ್ಲಿ ಹೀಗೆ ಉತ್ತರಿಸಿದರು: "ಉಫ್ ಎಂದು ಹೇಳಲು ಬಯಸುತ್ತಿದ್ದೆ, ಆದರೆ ನಾನು ಅಂತಹ ಶಬ್ದ ಹೊರಡಲು ಬಿಡುತ್ತಿರಲಿಲ್ಲ. ಏಕೆಂದರೆ ಉಫ್

ಎಂದು ಹೇಳುತ್ತಿದ್ದರೆ ಕೈ ಅಲುಗಾಡಿ ಯಾವುದಾದರೂ ಬಾಣ ಹಝ್ರತ್ ಪೈಗಂಬರರ(ಸ) ಮೇಲೆ ತಗುಲುವ ಸಾಧ್ಯತೆ ಇತ್ತು." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೀವು ಈ ತ್ಯಾಗದ ಕುರಿತು ಅಂದಾಜು ಮಾಡಿ ಯೋಚಿಸಿರಿ. ಇಂದು ಯಾರದಾದರೂ ಬೆರಳಿಗೆ ಗಾಯವಾದರೆ ಎಷ್ಟೊಂದು ಬೊಬ್ಬೆ ಹಾಕುತ್ತಾನೆ. ಆದರೆ ಆ ಸಹಾಬಿಯ ಕೈ ಎಂದೆಂದಿಗೂ ನಿಷ್ಕ್ರಿಯ ಆಗುವಷ್ಟು ಮಟ್ಟಿಗೆ ಅದಕ್ಕೆ ಬಾಣ ತಗುಲಿತ್ತು.

ಮತ್ತೊಂದು ಸಹಾಬಿಯ ಸಂಭವವನ್ನು ಅವರು ವಿವರಿಸುತ್ತಾರೆ. ಇದು ಸಹ ಉಹದ್ ಯುದ್ಧದ ಸಂದರ್ಭವಾಗಿತ್ತು. ಉಹದ್ ಯುದ್ಧದಲ್ಲಿ ಕೆಲವು ಸಹಾಬಿಗಳು ಹಿಂದೆ ಸರಿಯಲು ನಿರ್ಬಂಧಿತರಾದ ನಂತರ ಪುನಃ ಒಟ್ಟುಗೂಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಸಹಾಬಿಯರಲ್ಲಿ ಯಾರೆಲ್ಲ ಶಹೀದಾಗಿದ್ದಾರೆ ಮತ್ತು ಯಾರೆಲ್ಲ ಗಾಯಗೊಂಡಿದ್ದಾರೆ ಎಂದು ನೋಡಿರಿ." ಆಗ ಕೆಲವು ಸಹಾಬಿವರ್ಯರು ಮೈದಾನವನ್ನು ಪರಿಶೀಲಿಸಲು ಹೋದರು. ಒಬ್ಬ ಅನ್ಸಾರಿ ಸಹಾಬಿ ಮೈದಾನದಲ್ಲಿ ಗಾಯಗೊಂಡಿರುವುದಾಗಿ ಒಬ್ಬ ಸಹಾಬಿ ಕಂಡರು. ಅವರು ಆ ಸಹಾಬಿಯ ಸಮೀಪ ತಲುಪಿದಾಗ ಅವರ ತೋಳು ಮತ್ತು ಕಾಲುಗಳು ತುಂಡಾಗಿರುವುದಾಗಿಯೂ ಅವರು ಜೀವದ ಕೊನೆ ಗಳಿಗೆಯಲ್ಲಿರುವುದಾಗಿಯೂ ತಿಳಿದುಬಂತು. ಆಗ ಆ ಸಹಾಬಿ ಅವರ ಸಮೀಪಕ್ಕೆ ಹೋಗಿ ಕೇಳಿದರು: "ನಿಮ್ಮ ಬಂಧುಮಿತ್ರಾದಿಗಳಿಗೆ ಏನಾದರೂ ಸಂದೇಶ ತಲುಪಿಸಲಿಕ್ಕಿದ್ದರೆ ಹೇಳಿರಿ, ನಾನು ಅವರಿಗೆ ಮುಟ್ಟಿಸುತ್ತೇನೆ." ಆ ಗಾಯಗೊಂಡ ಸಹಾಬಿ ಹೇಳಿದರು: "ಯಾರಾದರೂ ಸಮೀಪದಿಂದ ಹಾದು ಹೋಗುವುದಾದರೆ ಅವರ ಕೈಯಲ್ಲಿ ಸಂದೇಶ ತಲುಪಿಸಬೇಕೆಂದು ಕಾಯುತ್ತಿದ್ದೆ. ಆದ್ದರಿಂದ ನೀನು ನನ್ನ ಸ್ನೇಹಿತರಿಗೆ, ನನ್ನ ಮನೆಯವರಿಗೆ, ಪತ್ನಿ ಮತ್ತು ಮಕ್ಕಳಿಗೆ ಹೀಗೆ ಸಂದೇಶ ತಲುಪಿಸು: 'ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಒಂದು ಅಮೂಲ್ಯವಾದ ಆಸ್ತಿಯಾಗಿದ್ದಾರೆ (ಅಮಾನತ್). ನಾವು ಜೀವಂತವಾಗಿ ಇರುವ ತನಕ ನಾವು ನಮ್ಮ ಜೀವದೊಂದಿಗೆ ಅದನ್ನು ಸಂರಕ್ಷಿಸಿದೆವು. ಬಂಧು ಮಿತ್ರಾದಿಗಳು ನಮಗಿಂತ ಉತ್ತಮ ರೀತಿಯಲ್ಲಿ ಈ ಬೆಲೆಬಾಳುವ ಅಮಾನತನ್ನು ಸಂರಕ್ಷಿಸುವರು ಎಂದು ನಾವೀಗ ವಿದಾಯ ಹೇಳುತ್ತಿರುವಾಗ ಆಶಿಸುತ್ತೇವೆ.' ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯೋಚಿಸಿರಿ, ಹೆಂಡತಿ ಮಕ್ಕಳಿಗೆ ಸಂದೇಶ ತಲುಪಿಸಲು ಈಗ ಬೇರೆ ಸಮಯವಿಲ್ಲವೆಂದು ಅರಿವಿರುವ ಇಂತಹ ಸಂದರ್ಭದಲ್ಲಿ, ವ್ಯಕ್ತಿಯೂ ಆಸ್ತಿ ಮತ್ತು ಕ್ರಯ ವಿಕ್ರಯಗಳ ಬಗ್ಗೆ ಹೇಳಬೇಕೆಂದು ಯೋಚಿಸುವಂತಹ ಸಂದರ್ಭದಲ್ಲಿ, ಹಿಂದೆ

ಬಿಟ್ಟು ಹೋಗುತ್ತಿರುವವರ ಹಿತದ ಬಗ್ಗೆ ಜನರು ಚಿಂತಿತರಾಗುವಂತಹ ಸಂದರ್ಭದಲ್ಲಿ ಕೂಡ ಆ ಸಹಾಬಿಗೆ ತಾನು ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಸಂರಕ್ಷಿಸುತ್ತಾ ಜೀವತ್ಯಾಗ ಮಾಡುತ್ತಿದ್ದೇನೆ ಎಂಬ ಯೋಚನೆ ಬಂದು ತನ್ನ ಬಂಧು ಮಿತ್ರರಿಗೆ ಹೀಗೆ ಸಂದೇಶ ನೀಡುತ್ತಾರೆ: "ನೀವು ಸಹ ಇದರಲ್ಲಿ ನೆಲೆನಿಲ್ಲುವಿರಿ ಮತ್ತು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಜೀವದ ಮುಂದೆ ತಮ್ಮ ಜೀವಗಳ ಪರಿವೆ ಮಾಡಲಾರಿರಿ ಎಂದು ನಿಮ್ಮಿಂದ ಸಹ ಭರವಸೆ ಹೊಂದಿದ್ದೇನೆ."

ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹಾಬಿವರ್ಯರು ಮಾಡಿದ ತ್ಯಾಗಗಳಿಗೆ ಉದಾಹರಣೆಯಾಗಿ ನಾನು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ವಫಾತಿನ ಬಗ್ಗೆಗಿನ ಸಂಭವ ಮುಂದಿರಿಸುತ್ತೇನೆ:

ನೋಡಿರಿ ಹಝ್‌ರತ್ ಅಬೂಬಕರರಿಗೆ(ರ) ಹಝ್‌ರತ್ ಮುಹಮ್ಮದ್ ಪೈಗಂಬರರೊಂದಿಗೆ(ಸ) ಎಷ್ಟೊಂದು ಪ್ರೀತಿಯಿತ್ತು. ಅವರಿಗೆ ಹಝ್‌ರತ್ ಪೈಗಂಬರ್(ಸ) ಮರಣ ಹೊಂದಿದ್ದಾರೆ ಎಂದು ಗೊತ್ತಾದಾಗ ಅವರು ಅನಿಯಂತ್ರಿತವಾಗಿ ಹಝ್‌ರತ್ ಪೈಗಂಬರರ(ಸ) ಅನುಗ್ರಹೀತ ಶರೀರವನ್ನು ಚುಂಬಿಸಿದರು, ಕಣ್ಣೀರು ಹರಿಯಿತು. ಆದರೆ ಮತ್ತೊಂದು ಕಡೆ ಹಝ್‌ರತ್ ಪೈಗಂಬರರು(ಸ) ತಂದ ಸತ್ಯದೊಂದಿಗೆ ಅವರಿಗೆ ಎಷ್ಟು ಪ್ರೇಮವಿತ್ತೆಂದರೆ ಧೈರ್ಯಶಾಲಿಯಾದ ಹಝ್‌ರತ್ ಉಮರ್(ರ) ಖಡ್ಗವೆತ್ತಿ ನಿಂತು "ಯಾರು ಹಝ್‌ರತ್ ಪೈಗಂಬರರು(ಸ) ಮರಣ ಹೊಂದಿದ್ದಾರೆ ಎಂದು ಹೇಳುತ್ತಾನೋ ಅವನನ್ನು ಕೊಲ್ಲುವೆನು" ಎಂದು ಹೇಳುತ್ತಿರುವಾಗ ಮತ್ತು ಅನೇಕ ಸಹಾಬಿವರ್ಯರು ಅವರೊಂದಿಗೆ ಸಹಮತ ಹೊಂದಿರುವಾಗ ಸಹ ಹಝ್‌ರತ್ ಅಬೂಬಕರ್(ರ) ನಿರ್ಭೀತರಾಗಿ ಹೇಳುತ್ತಾರೆ: "ಯಾವನು ಹಝ್‌ರತ್ ಮುಹಮ್ಮದ್(ಸ) ಜೀವಂತವಿದ್ದಾರೆ ಎಂದು ಹೇಳುತ್ತಾನೋ ಅವನು ಹಝ್‌ರತ್ ಮುಹಮ್ಮದ್‌ರನ್ನು(ಸ) ದೇವನು ಎಂದು ಗಣಿಸುವವನಂತೆ ಆಗಿರುವನು. ಹಝ್‌ರತ್ ಮುಹಮ್ಮದ್(ಸ) ಮರಣ ಹೊಂದಿರುವರು ಆದರೆ ಅವರು ಆರಾಧಿಸುತ್ತಿದ್ದ ದೇವನು ಜೀವಂತವಿರುವನು." ಇದು ಕೇಳಿದಾಕ್ಷಣ ಖಡ್ಗಗಳನ್ನೆತ್ತಿ ನಿಂತಿದ್ದ ಸಹಾಬಿವರ್ಯರು ತಲೆ ತಗ್ಗಿಸಿದರು ಮತ್ತು ಹಝ್‌ರತ್ ಮುಹಮ್ಮದ್(ಸ) ನಿಜವಾಗಿಯೂ ಮರಣ ಹೊಂದಿದ್ದಾರೆ ಎಂದು ಸಮ್ಮತಿಸಿದರು. ಹಝ್‌ರತ್ ಮುಹಮ್ಮದ್(ಸ) ಸಹಾಬಿವರ್ಯರ ಹೃದಯಗಳಲ್ಲಿ ಉಂಟು ಮಾಡಿದ್ದ ಸತ್ಯದ ಪ್ರಭಾವ ಇದಾಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಅಬೂಬಕರರಿಗೆ[ರ] ಹಝ್ರತ್ ಮುಹಮ್ಮದ್‌ರೊಂದಿಗೆ[ಸ] ಇದ್ದ ಅದ್ವಿತೀಯ ಪ್ರೇಮದ ಉದಾಹರಣೆ ಕೆಳಗಿನ ಸಂಭವದಿಂದ ಸ್ಪಷ್ಟವಾಗುವುದು.

ಕೆಲವು ವಿರೋಧಿಗಳ ಕುಚೇಷ್ಟೆಗಳಿಗೆ ಶಿಕ್ಷೆ ಕೊಡಲು ಒಂದು ಸೈನ್ಯವನ್ನು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಮರಣಕ್ಕೆ ಮುಂಚೆ ತಯಾರು ಮಾಡಿದ್ದರು. ಆ ಸೈನ್ಯ ಹೊರಡುವ ಮುಂಚೆಯೇ ಹಝ್ರತ್ ಮುಹಮ್ಮದ್[ಸ] ಮರಣವನ್ನಪ್ಪಿದರು. ಅವರ ಮರಣದ ನಂತರ ಹಝ್ರತ್ ಅಬೂಬಕರ್[ರ] ಖಲೀಫರಾಗಿ ಚುನಾಯಿತರಾದರು. ನಾಲ್ಕು ಕಡೆಯಿಂದಲೂ ಅರಬ್‌ನಾಡಿನಲ್ಲಿ ದಂಗೆಯ ವಾರ್ತೆಗಳು ಬರುತ್ತಿದ್ದವು. ಮಕ್ಕ, ಮದೀನ ಹಾಗೂ ಬೇರೊಂದು ಗ್ರಾಮದಲ್ಲಿ ಮಾತ್ರ ಸಾಮೂಹಿಕ ನಮಾಝ್ ನಡೆಯುತ್ತಿತ್ತು. ಜನರು ನಮಾಝ್ ಅನುಷ್ಠಿಸುವುದನ್ನು ಉಪೇಕ್ಷಿಸಿದ್ದರು ಮತ್ತು ಜನರು ಝಕಾತ್ ನೀಡುವುದಿಲ್ಲ ಎಂದು ಹೇಳಲು ತೊಡಗಿದ್ದರು. ಆದ್ದರಿಂದ ಹಲವು ಸಹಾಬಿವರ್ಯರು ಒಮ್ಮತವಾದ ಅಭಿಪ್ರಾಯದೊಂದಿಗೆ ಈ ಸೈನ್ಯದ ರವಾನೆಯನ್ನು ಮುಂದೂಡಲು ಹಝ್ರತ್ ಅಬೂಬಕರ್‌ರನ್ನು[ರ] ಅಪೇಕ್ಷಿಸಿದರು. ವೃದ್ಧರು ಮತ್ತು ಮಕ್ಕಳು ಮಾತ್ರ ಮದೀನದಲ್ಲಿ ಉಳಿದರೆ ಬಂಡಾಯಗಾರರನ್ನು ಮದೀನದ ಈ ವೃದ್ಧರು ಹೇಗೆ ಎದುರಿಸುವರು ಎಂಬ ಚಿಂತೆಯಿಂದ ಸೈನ್ಯವನ್ನು ತಡೆಯಲು ಸಹಾಬಿವರ್ಯರು ಹಝ್ರತ್ ಉಮರ್‌ರನ್ನು[ರ] ಹಝ್ರತ್ ಅಬೂಬಕ್ಕರ್[ರ] ಬಳಿಗೆ ಕಳುಹಿಸಿದರು. ಆದರೆ ಹಝ್ರತ್ ಅಬೂಬಕರ್[ರ] ಹೀಗೆ ಉತ್ತರಿಸಿದರು: ಹಝ್ರತ್ ಮುಹಮ್ಮದ್ ಪೈಗಂಬರ್[ಸ] ರವಾನಿಸಿದ ಸೈನ್ಯವನ್ನು ತಡೆಯುವ ಶಕ್ತಿ ಅಬೂಖಹಫರ ಮಗನಿಗೆ ಇದೆಯೇ? ಅಲ್ಲಾಹನಾಣೆ, ಬಂಡಾಯಗಾರರು ಮದೀನದಲ್ಲಿ ಪ್ರವೇಶಿಸಿದರೂ ನಾಯಿಗಳು ನಮ್ಮ ಸ್ತ್ರೀಯರ ಮೃತದೇಹವನ್ನು ಎಳೆದು ತಿರುಗಾಡಿದರೂ ಆ ಸೈನ್ಯ ಖಂಡಿತ ಹೋಗುವುದು. ಹಝ್ರತ್ ಅಬೂಬಕರರಿಗೆ[ರ] ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೇಲೆ ಎಷ್ಟು ಪ್ರೇಮವಿತ್ತು ಎಂದು ಇದರಿಂದ ತಿಳಿದು ಬರುತ್ತದೆ. ಆದರೆ ಅವರು ಸಿದ್ದೀಕಿಯತ್‌ನ (ಸತ್ಯಸಂಧತೆಯ ಅತ್ಯುನ್ನತ ಪದವಿ) ಸ್ಥಾನದಲ್ಲಿ ಇದ್ದರು. ಆದ್ದರಿಂದ ಹಝ್ರತ್ ಪೈಗಂಬರರು[ಸ] ತಂದ ಅಧ್ಯಾಪನೆಯ ಮಹಿಮೆ ಅದಕ್ಕಿಂತ (ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೇಲಿನ ಪ್ರೇಮಕ್ಕಿಂತ) ಮೇಲಾಗಿದೆ ಎಂದು ತಿಳಿದಿದ್ದರು. ಒಟ್ಟಿನಲ್ಲಿ ಈ ಜನರು ಅಲ್ಲಾಹನು ಕಳುಹಿಸಿದ ಬೋಧನೆಯನ್ನು ಸ್ವೀಕರಿಸಿ ಅದನ್ನು ನೆಲೆನಿಲ್ಲಿಸಿದರು. ಅದನ್ನು ಲವಲೇಶವೂ

ಬದಲಾಯಿಸಲಾಗಿಲ್ಲ ಎಂದು ಶತ್ರುಗಳು ಕೂಡ ಸಮ್ಮತಿಸುತ್ತಾರೆ. ಪವಿತ್ರ ಖುರ್‌ಆನಿನ ಒಂದು ಚುಕ್ಕಿ ಸಹ ಬದಲಾಗಿಲ್ಲ ಎಂದು ಕ್ರೈಸ್ತರು, ಹೈಂದವರು, ಯಹೂದಿಗಳು ಮತ್ತಿತರ ಎಲ್ಲ ಕೋಮುಗಳು ಸಮ್ಮತಿಸುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್‌ರ(ಅ) ಕಾಲದಲ್ಲಿ ಇಂತಹ ಒಂದು ಜಮಾಅತ್ ಇತ್ತು. ಆದರೆ ಮುಂದಿನ ಪೀಳಿಗೆಗಳಲ್ಲಿ ಇಂತಹ ಆವೇಶವಿರುವುದೇ ಎಂಬುದಾಗಿದೆ ಸವಾಲು. ಒಂದು ಒಳ್ಳೆಯ ವಸ್ತು ತನಗೆ ಸಿಗಲಿ; ಆದರೆ ತನ್ನ ಮಕ್ಕಳು ಅದರಿಂದ ವಂಚಿತರಾಗಲಿ ಎಂದು ವಿವೇಕಿಯಾದ ಯಾರಾದರೂ ಇಚ್ಛಿಸುವನೇ? ಹೀಗಿರುವಾಗ ಹಝ್ರತ್ ಮಸೀಹ್ ಮೌಊದ್‌ರ(ಅ) ಅಧ್ಯಾಪನೆಯ ಬೆಲೆ ತಿಳಿದಿರುವ ವ್ಯಕ್ತಿ ತನ್ನ ವಾರಿಸುದಾರರಿಗೆ ಅದು ಸಿಗದಿರಲಿ ಎಂದೂ ಆದರೆ ತನ್ನ ಜಮೀನು ಮತ್ತು ಮನೆಗಳು ಅವರಿಗೆ ಸಿಗಲಿ ಎಂದು ಇಚ್ಛಿಸುವನು ಎಂದು ನೀವು ಯೋಚಿಸುವುದಾದರೂ ಹೇಗೆ?

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಧರ್ಮವನ್ನು ಅನುಗ್ರಹವನ್ನಾಗಿ ಮಾಡಿದ್ದಾನೆ. ಆದರೆ ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುವುದಾಗಿ ವಾದಿಸುವವರಲ್ಲಿ ತಮ್ಮ ಮಕ್ಕಳನ್ನು ದೀನಿನಿಂದ ದೂರವಿರಿಸುವವರು ಮತ್ತು ಅವರು ಕುಚೇಷ್ಟೆಗಳನ್ನು ಮಾಡಿದರೆ ಅವರಿಗೆ ಸಹಾಯ ಮಾಡುವ ಜನರೂ ಇದ್ದಾರೆ. ಅಹ್ಮದಿಯತ್ ಮತ್ತು ವಿಶ್ವಾಸವನ್ನು ಎತ್ತಿ ಹಿಡಿಯುವವರಾಗುವುದು ದೂರದ ವಿಷಯ, ಸಭ್ಯತೆ ಮತ್ತು ಮನುಷ್ಯತ್ವ ಸಹ ಕಿರುಚುವಂತಹ ಕೆಲವು ಅಪರಾಧಗಳನ್ನು ಅವರು (ಆ ಮಕ್ಕಳು) ಮಾಡಿರುತ್ತಾರೆ. ಆದರೆ ಇಂತಹ ಅಪರಾಧಿಗಳ ಹೆತ್ತವರು, ಸಹೋದರರು, ಸಂಬಂಧಿಕರು ಮಾತ್ರವಲ್ಲ ಗೆಳೆಯರು ಸಹ ಅವರಿಗೆ ಸಹಾಯ ಮಾಡುತ್ತಾರೆ. ಹೀಗೆ ಮಾಡುವುದರಿಂದ ವಿಶ್ವಾಸ ಹೇಗೆ ಬಾಕಿಯಾಗಿ ಉಳಿಯುವುದು ಎಂದು ಯೋಚಿಸುವುದಿಲ್ಲ. ಇಂತಹ ವ್ಯಕ್ತಿಯ ದೀನ್ ಆಕಾಶಕ್ಕೆ ಹಾರಿ ಹೋಗುವುದು. ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ನೋಡಿರಿ. ಒಂದು ಸಲ ಕೆಲವು ಸಹಾಬಿವರ್ಯರು ಹಝ್ರತ್ ಪೈಗಂಬರರ(ಸ) ಬಳಿ ಓರ್ವ ಅಪರಾಧಿಯ ಬಗ್ಗೆ ಶಿಫಾರಸ್ಸು ಮಾಡಿದರು. ಹಝ್ರತ್ ಪೈಗಂಬರರು(ಸ) ಹೇಳಿದರು: "ಅಲ್ಲಾಹನಾಣೆ, ನನ್ನ ಮಗಳು ಫಾತಿಮಾ ಕಳ್ಳತನ ಮಾಡಿದರೂ ಅವಳು ಕೂಡ ಶಿಕ್ಷೆಯಿಂದ ಪಾರಾಗಲಾರಳು." ಆದ್ದರಿಂದ ತಖ್ವಾ (ದೇವಭಯ) ಮತ್ತು ಪರಿಶುದ್ಧತೆ ಎಂತಹ ಅನುಗ್ರಹವೆಂದರೆ, ಅದನ್ನು ಪಡೆಯಲು ಮನುಷ್ಯನು ಯಾವುದೇ ತ್ಯಾಗದಿಂದ ದೂರವಿರಬಾರದು. ಹಝ್ರತ್ ಮಸೀಹ್ ಮೌಊದ್‌ರಿಂದ(ಅ)

ನಮಗೆ ಲಭಿಸಿದ ಸಂಪತ್ತು ಉನ್ನತ ನೈತಿಕ ಗುಣವೇ ಆಗಿದೆ. ನಮ್ಮ ಮಕ್ಕಳನ್ನು ಅದರ ವಾರಿಸುದಾರರನ್ನಾಗಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅಸಡ್ಡೆಯ ಕಾರಣ ಇದರಲ್ಲಿ ಏನಾದರೂ ಕೊರತೆ ಉಂಟಾದರೆ ಪಾಪಕರ್ಮಗಳಲ್ಲಿ ಅನ್ಯೋನ್ಯ ಸಹಕರಿಸದೆ ಇರುವುದು ಸತ್ಯವಿಶ್ವಾಸಿಯಾದವನ ಕರ್ತವ್ಯವಾಗಿದೆ. ಮಾತ್ರವಲ್ಲ ಅಪರಾಧ ಮಾಡಿದ ವ್ಯಕ್ತಿಯಿಂದ ಕೂಡಲೇ ಬಿಟ್ಟು ನಿಲ್ಲಬೇಕು. ಹೀಗೆ ಮಾಡುವುದು ಅಸಾಧ್ಯವೆಂದು ಯಾರೂ ಹೇಳಲಾರದಂತಹ ಉದಾಹರಣೆಗಳನ್ನು ಸತ್ಯವಿಶ್ವಾಸಿಗಳಿಂದ ಅಲ್ಲಾಹನು ನಮಗೆ ತೋರಿಸಿ ಕೊಟ್ಟಿದ್ದಾನೆ.

## ಹಝ್ರತ್ ಮಸೀಹ್ ಮೌಊದ್‌ರ(ಅ) ಅನುಚರರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯ ಸಂಭವಗಳು:

ಹಝ್ರತ್ ಮಸೀಹ್ ಮೌಊದ್‌ರ(ಅ) ಓರ್ವ ಸಹಾಬಿಯ ಉದಾಹರಣೆ ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮರ್ಹೂಮ್ ಸಯ್ಯದ್ ಹಾಮಿದ್ ಶಾಹ್ ಸಾಹಿಬ್ ಬಹಳ ನಿಷ್ಠಾವಂತರಾದ ಅಹ್ಮದಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್‌ರು(ಅ) ಅವರನ್ನು ತಮ್ಮ ಹನ್ನೆರಡು ಹವಾರಿಗಳಲ್ಲಿ ಒಬ್ಬರೆಂದು ಹೇಳುತ್ತಿದ್ದರು. ಒಂದು ಸಲ ಅವರ ಮಗನ ಕೈಯಿಂದ ಒಬ್ಬ ವ್ಯಕ್ತಿಯ ಕೊಲೆಯಾಯಿತು. ಆದರೆ ಜನಸಾಮಾನ್ಯರ ಅನುಕಂಪ ಆ ಮಗನ ಮೇಲಿದ್ದ ಸ್ಥಿತಿಯಲ್ಲಿ ಈ ಕೊಲೆ ನಡೆದಿತ್ತು. ಈ ಕೊಲೆ ನಡೆದು ಸಹ ಜನರು ಆ ಸಹಾಬಿ ಮತ್ತು ಅವರ ಮಗನ ಮೇಲೆ ಅನುಕಂಪ ತೋರಿಸುತ್ತಿದ್ದರು. ಏಕೆಂದರೆ ಕೊಲ್ಲಲ್ಪಟ್ಟವನ ಅತಿರೇಕದ ಕಾರಣದಿಂದ ಜಗಳ ಉಂಟಾಗಿ ಅವರ ಮಗನು ಅವನನ್ನು ಮುಷ್ಟಿಯಿಂದ ಹೊಡೆದ ಕಾರಣ ಅವನು ಸಾವನ್ನಪ್ಪಿದ್ದ. ಇದು ಮೂಸಾರ(ಅ) ಕಾಲದಲ್ಲಿ ನಡೆದ ಸಂಭವದಂತೆ ಆಗಿತ್ತು. ಸಿಯಾಲ್‌ಕೋಟಿನ ಡೆಪ್ಯೂಟಿ ಕಮೀಷನರ್ ಬ್ರಿಟಿಷಾಗಿದ್ದರು. ಇವರು ಅಪರಾಧ ಸಾಬೀತಾದರೂ ಇಲ್ಲದಿದ್ದರೂ ಜನರ ಹೃದಯಗಳಲ್ಲಿ ಭಯ ಸೃಷ್ಟಿಸಲು ಖಂಡಿತ ಶಿಕ್ಷೆ ನೀಡುವವರಲ್ಲಿ ಸೇರಿದ ಅಧಿಕಾರಿಯಾಗಿದ್ದರು. ಅವರು ಹೀಗೆ ಯೋಚಿಸಿದರು: "ಮೀರ್ ಹಾಮಿದ್ ಶಾಹ್ ಸಾಹಿಬರು ನನ್ನ ಆಫೀಸಿನ ಸೂಪರಿಂಟೆಂಡೆಂಟ್ ಆಗಿರುವರು. ನಾನು ಅವರ ಮಗನನ್ನು ಶಿಕ್ಷಿಸಿದರೆ ನನ್ನ ನೀತಿ – ನ್ಯಾಯ ಹೊಗಳಲ್ಪಡುವುದು." ಆದ್ದರಿಂದ ಅವರು ಶಾಹ್ ಸಾಹಿಬರನ್ನು ಕರೆದು ಅವರ ಮಗನು ನಿಜವಾಗಿಯೂ ಕೊಲೆ

ಮಾಡಿದ್ದಾನೆಯೇ ಎಂದು ಕೇಳಿದರು. ಶಾಹ್ ಸಾಹಿಬರು ಹೇಳಿದರು: "ನಾನು ಅಲ್ಲಿ ಇದ್ದಿರಲಿಲ್ಲ, ಆದರೆ ಅವನು ಕೊಲೆ ಮಾಡಿರುವನು ಎಂದು ಕೇಳಿದ್ದೇನೆ." ಅವರು ಹೇಳಿದರು: ನಾವು ಪಕ್ಷಪಾತ ಮಾಡುವವರಲ್ಲ ಎಂದು ಜನರಿಗೆ ಗೊತ್ತಾಗಲಿಕ್ಕಾಗಿ ಅವನನ್ನು ಕರೆದು ತಪ್ಪು ಒಪ್ಪಿಕೊಳ್ಳಲು ಹೇಳಿರಿ. ಶಾಹ್ ಸಾಹಿಬರು ಮಗನನ್ನು ಕರೆದು "ನೀನು ಆ ವ್ಯಕ್ತಿಯನ್ನು ಕೊಂದಿದ್ದೀಯಾ?" ಎಂದು ಕೇಳಿದರು. ಅವನು "ಹೌದು, ಕೊಂದಿದ್ದೇನೆ" ಎಂದು ಹೇಳಿದನು. ಶಾಹ್ ಸಾಹಿಬರು ನಿಜ ಸಂಗತಿಯನ್ನು ಸಮ್ಮತಿಸಲು ಮಗನಿಗೆ ಹೇಳಿದರು. ಹದಿವಯಸ್ಸಿನ ಮಗನನ್ನು ನೇಣಿಗೇರಿಸಲು ಏಕೆ ಇಚ್ಛೆಸುತ್ತೀರಿ ಎಂದು ಜನರು ಕೇಳಿದರು. "ಇಹಲೋಕದ ಶಿಕ್ಷೆಗಿಂತ ಪರಲೋಕದ ಶಿಕ್ಷೆ ಅತಿ ಕಠಿಣವಾದುದಾಗಿದೆ" ಎಂದು ಹೇಳುತ್ತಾ ತನ್ನ ತಪ್ಪನ್ನು ಒಪ್ಪಿಕೊಳ್ಳಲು ಶಾಹ್ ಸಾಹಿಬರು ಮಗನನ್ನು ಉಪದೇಶಿಸಿದರು. ಅವನು ತಪ್ಪನ್ನು ಸಮ್ಮತಿಸಿದನು. ಆದರೆ ಅಲ್ಲಾಹನ ವಿಧಿ ಬೇರೆಯಾಗಿತ್ತು. ಆ ಹುಡುಗ ಕ್ರಿಕೆಟ್ ಆಟಗಾರನಾಗಿದ್ದನು. ಈ ಮೊಕದ್ದಮೆ ಬಗ್ಗೆ ನೋಡಬೇಕಿದ್ದ ಮ್ಯಾಜಿಸ್ಟ್ರೇಟ್ ಸಹ ಕ್ರಿಕೆಟ್ ಆಟಗಾರನಾಗಿದ್ದರು. ಅವರಿಗೆ ಕ್ರಿಕೆಟ್ ಕ್ಲಬ್‌ನಲ್ಲಿ ಸಂಗತಿಯ ನಿಜಸ್ಥಿತಿಯ ಅರಿವಾಯಿತು. ಮ್ಯಾಜಿಸ್ಟ್ರೇಟ್‌ಗೆ ಯಾವುದಾದರೂ ಸಂಗತಿಯ ಬಗ್ಗೆ ದೃಢ ನಂಬಿಕೆ ಉಂಟಾದರೆ ಆರೋಪಿಯನ್ನು ಪ್ರಶ್ನಿಸಬೇಕಾಗಿಲ್ಲ ಎಂಬ ಕಾನೂನಿತ್ತು. ಹುಡುಗನ ನಿರಪರಾಧಿತ್ವ ಸ್ಥಾಪಿತವಾಗುವ ರೀತಿಯಲ್ಲಿ ಅವರು ಸ್ವತಃ ಪೊಲೀಸರ ಸಾಕ್ಷ್ಯಗಳ ವಿಚಾರಣೆ ಮಾಡಿದರು. ಅವರು ಈ ಕಾರಣದಿಂದ ಏನೂ ಪ್ರಶ್ನಿಸದೆ ಅವನನ್ನು ಬಿಡುಗಡೆ ಮಾಡಿದರು. ಒಟ್ಟಿನಲ್ಲಿ ಸತ್ಯಸಂಧತೆಯ ಕಾರಣ ಅವನು ಈ ಶಿಕ್ಷೆಯಿಂದ ಪಾರಾದನು.

ಹಝ್ರತ್ ಮುಸ್ಲಿಹ್ ಮೌಊದ್[(ರ)] ಹೇಳುತ್ತಾರೆ: ಇದೇ ರೀತಿಯ ಒಂದು ಮೊಕದ್ದಮೆ ಚೌಧರಿ ಝಫರುಲ್ಲಾಹ್ ಖಾನ್ ಸಾಹಿಬರ ಸಹೋದರರ ಮೇಲೆ ನಡೆದಿತ್ತು. ಚೌಧರಿ ಸಾಹಿಬರು ಆಗ ಲಂಡನ್‌ನಲ್ಲಿ ಇದ್ದರು. ಅವರು ತಮ್ಮ ಸಹೋದರನಿಗೆ ಹೀಗೆ ಪತ್ರ ಬರೆದರು: "ಇದು ಈಮಾನಿನ (ವಿಶ್ವಾಸ) ಪರೀಕ್ಷೆಯ ಸಮಯವಾಗಿದೆ. ನಿನ್ನಿಂದ ತಪ್ಪು ಉಂಟಾಗಿದ್ದರೆ ನಾನು ನಿನ್ನ ಹಿರಿಯ ಸಹೋದರ ಎಂಬ ನೆಲೆಯಲ್ಲಿ ಉಪದೇಶಿಸುತ್ತಿದ್ದೇನೆ. ಇಹಲೋಕದ ಶಿಕ್ಷೆಗಿಂತ ಪರಲೋಕದ ಶಿಕ್ಷೆ ಅತಿ ಕಠಿಣವಾದುದಾಗಿದೆ. ಆದ್ದರಿಂದ ಇದನ್ನು ಸಹಿಸಿಕೊಂಡು ಸತ್ಯವನ್ನು ಹೇಳು."

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಸಿಯಾಲ್‌ಕೋಟ್ ನಿವಾಸಿಯಾದ ನಮ್ಮ ಓರ್ವ ಸ್ನೇಹಿತ ಅಹ್ಮದಿಯಾದ ನಂತರ ಲಂಚ ಪಡೆಯುವುದು ಇಸ್ಲಾಮೀ ಅಧ್ಯಾಪನೆಗೆ ವಿರುದ್ಧ ಎಂದು ಗೊತ್ತಾದಾಗ ತಾನು ಇದಕ್ಕೆ ಮುಂಚೆ ಲಂಚ ಪಡೆದ ಎಲ್ಲರ ಮನೆಗೆ ಹೋಗಿ ಅವನ್ನು ಮರಳಿಸಿದರು. ಇದರಿಂದ ಅವರು ಸಾಲಗಾರರಾದರು. ಆದರೆ ಅವರು ಇದರ ಪರಿವೆ ಮಾಡಲಿಲ್ಲ. ಒಟ್ಟಿನಲ್ಲಿ, ನಮ್ಮ ಜಮಾಅತಿನಲ್ಲಿ ಸಹಾಬಿಯರ ಮಾದರಿ ಎಂದು ಹೇಳಬಹುದಾದ ಎಲ್ಲ ರೀತಿಯ ಸತ್ಕರ್ಮಗಳ ಮಾದರಿಗಳು ಕಾಣಬಹುದಾಗಿದೆ. ಆದರೆ ನಾವು ಇದರಲ್ಲಿ ಸಂತೃಪ್ತರಾಗಬಾರದು. ಜಮಾಅತಿನ ಎಲ್ಲರೂ ಹೀಗೆ ಆಗಲು ಪ್ರಯತ್ನಿಸಬೇಕು.

ಒಟ್ಟಿನಲ್ಲಿ, ಗಮನ ಹರಿಸಲಾಗುವಾಗ ಅದನ್ನು ಶ್ರದ್ಧೆಯಿಂದ ಕೇಳಿದ ನಂತರ ಅದನ್ನು ಜೀವಿತಕ್ರಮದ ಭಾಗವನ್ನಾಗಿ ಮಾಡಬೇಕು. ಜಮಾಅತಿನ ಅಭಿವೃದ್ಧಿಯ ರಹಸ್ಯ ಮತ್ತು ಮನುಷ್ಯನನ್ನು ನಿಜವಾದ ದಾಸನನ್ನಾಗಿ ಮಾಡುವುದು ಇದೇ ಆಗಿದೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ಕಳುಹಿಸಿ ಜಮಾಅತಿನ ಮೇಲೆ ಬಹಳ ದೊಡ್ಡ ಜವಾಬ್ದಾರಿಯನ್ನು ಇಟ್ಟಿರುವನು ಎಂದು ಜಮಾಅತಿನ ವ್ಯಕ್ತಿಗಳು ತಿಳಿಯಬೇಕಾದ ಆವಶ್ಯಕತೆ ಇದೆ. ಮನುಷ್ಯನಲ್ಲಿ ಪರ್ವತಕ್ಕೆ ಸಮಾನವಾದ ದೌರ್ಬಲ್ಯಗಳು ಇದ್ದರೂ ಅವನು ಅದನ್ನು ಬಿಟ್ಟುಬಿಡಲು ನಿರ್ಧರಿಸಿದರೆ, ಖಂಡಿತ ಅದು ಕಷ್ಟಕರವಲ್ಲ.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ತಮ್ಮ ತಮ್ಮ ಮಕ್ಕಳ ಮತ್ತು ಜಮಾಅತಿನ ಇತರ ಯುವಕರ ಸುಧಾರಣೆ ಮಾಡಿರಿ. ತಮ್ಮ ಸುಧಾರಣೆ ಮಾಡಿರಿ. ಸುಳ್ಳು, ಕಳ್ಳತನ, ಮೋಸಗಾರಿಕೆ, ವಂಚನೆ, ದ್ರೋಹ, ದುರ್ವತನೆ, ಪರದೂಷಣೆ ಇತ್ಯಾದಿ ಕೆಟ್ಟ ಸ್ವಭಾವಗಳನ್ನು ಉಪೇಕ್ಷಿಸಿರಿ. ನಿಮ್ಮೊಂದಿಗೆ ವ್ಯವಹರಿಸುವವರಿಗೆ ನೀವು ಒಳ್ಳೆಯವರೆಂದು ಅರಿಯಲಿ. ಚೆನ್ನಾಗಿ ನೆನಪಿಡಿರಿ, ಹಝ್ರತ್ ಮಸೀಹ್ ಮೌಊದ್‌ರ[ಅ] ಮೂಲಕ ನಮಗೆ ಈಗ ಲಭಿಸಿರುವ ಅನುಗ್ರಹ ಪುನಃ ಬರಲು ಸಾವಿರದ ಮುನ್ನೂರು ವರ್ಷಗಳು ತಗುಲಿದೆ. ನಾವು ಇದಕ್ಕೆ ಬೆಲೆ ಕೊಡದೆ ಪುನಃ ಸಾವಿರದ ಮುನ್ನೂರು ವರ್ಷಗಳ ಕಾಲ ಇದು ದೂರ ಹೋದರೆ, ಅಲ್ಲಿಯ ವರೆಗೆ ಆಗಮಿಸುವ ಎಲ್ಲ ಪೀಳಿಗೆಗಳ ಶಾಪಗಳು ನಮ್ಮ ಮೇಲೆ ಎರಗುವುದು. ಆದ್ದರಿಂದ ನೀವು ನಿಮ್ಮ ಎಲ್ಲ ಒಳಿತುಗಳನ್ನು ತಮ್ಮ ಮಕ್ಕಳಿಗೆ ಕೊಡಿರಿ. ಅವರು ಮುಂದಿನವರಿಗೆ ಕೊಡಲಿ, ಅವರು ಅವರ ಮಕ್ಕಳಿಗೆ ಕೊಡಲಿ.

ಸಾವಿರ ವರ್ಷಗಳ ಕಾಲ ಇದರ ಪ್ರತಿಫಲ ಸಿಗುವಂತಹ ರೀತಿಯಲ್ಲಿ ಈ ಅಮಾನತ್ ದೀರ್ಘಕಾಲ ಸಂರಕ್ಷಿಸಲ್ಪಪಡಲಿ. ಏಕೆಂದರೆ ಯಾವುದಾದರೂ ವ್ಯಕ್ತಿಯ ಮೂಲಕ ನೆಲೆನಿಲ್ಲುವ ಒಳಿತು, ಅದು ನೆಲೆನಿಲ್ಲುವ ತನಕ ಮತ್ತು ಎಷ್ಟು ಜನರು ಅದನ್ನು ಕೈಗೊಳ್ಳುತ್ತಾರೋ ಅವರ ಎಲ್ಲರ ಪ್ರತಿಫಲಗಳನ್ನು ಆ ವ್ಯಕ್ತಿಯ ಹೆಸರಿನಲ್ಲಿ ಬರೆಯಲಾಗುವುದು. ಒಟ್ಟಿನಲ್ಲಿ ಲಭ್ಯವಾಗುವ ಪ್ರತಿಫಲ ಸಹ ದೊಡ್ಡದು ಮತ್ತು ಅಮಾನತ್ ಸಹ ಅದರ ಪದವಿಯಲ್ಲಿ ದೊಡ್ಡದಾಗಿದೆ. ಈ ಕಡೆ ನಾವು ಗಮನಹರಿಸಬೇಕಾಗಿದೆ.

*

## (2)

## ಜುಮುಅ ಖುತ್‌ಬದ ಸಾರಾಂಶ (6/12/2013)

**ಕರ್ಮರಂಗದಲ್ಲಿ ಸುಧಾರಣೆಯ ಆವಶ್ಯಕತೆ:**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ] ನಮ್ಮೊಳಗೆ ಉಂಟು ಮಾಡಲು ಇಚ್ಛಿಸುವ ಕರ್ಮರಂಗದಲ್ಲಿನ ಬದಲಾವಣೆಯ ಸ್ಥಿತಿ ಹೇಗಿದೆ ಎಂದು ನೋಡುವಾಗ ನಾವು ಚಿಂತಿತರಾಗುತ್ತೇವೆ. ನಮ್ಮಲ್ಲಿ ಪ್ರತಿಯೊಬ್ಬರು ಸಮಾಜದ ಪ್ರತಿಯೊಂದು ಕೆಡುಕನ್ನು ಎದುರಿಸಿ ಅದನ್ನು ಸೋಲಿಸುತ್ತಿದ್ದೇವೆಯೇ? ನಮ್ಮಲ್ಲಿ ಪ್ರತಿಯೊಬ್ಬರ ಪ್ರತಿಯೊಂದು ಕರ್ಮವನ್ನು ನೋಡಿ ಅವನೊಂದಿಗೆ ಸಂಬಂಧವಿರಿಸುವ, ಅವನ ವಲಯ ಮತ್ತು ಸುತ್ತುಮುತ್ತಲೂ ಇರುವವನು ಪ್ರಭಾವಿತನಾಗುತ್ತಿದ್ದಾನೆಯೇ? ಅಥವಾ ನಾವೇ ಸಮಾಜದ ಪ್ರಭಾವದಿಂದ ಪ್ರಭಾವಿತರಾಗಿ ನಮ್ಮ ಅಧ್ಯಾಪನೆ ಮತ್ತು ನಡವಳಿಕೆಗಳನ್ನು ಮರೆಯುತ್ತಿದ್ದೇವೆಯೇ? ನಮ್ಮಲ್ಲಿ ಪ್ರತಿಯೊಬ್ಬರು ಹಝ್ರತ್ ಮಸೀಹ್ ಮೌಊದ್[ಅ] ನಮಗೆ ಕಲಿಸಿದ ರೀತಿಯಲ್ಲಿ ಕರ್ಮ ಸುಧಾರಣೆ ಮಾಡಲು ಅತ್ಯಧಿಕವಾದ ಪ್ರಯತ್ನ ಮಾಡುತ್ತಿದ್ದೇವೆಯೇ? ನಮ್ಮಿಂದ ಆವಶ್ಯಪಡುವ ಸತ್ಯಸಂಧತೆಯ, ಎಂದರೆ ಸುಳ್ಳು ಮತ್ತು ಮೋಸ ನಮ್ಮ ಸಮೀಪ ಕೂಡ ಬರದ ರೀತಿಯ ಸತ್ಯಸಂಧತೆಯ ಮಟ್ಟವನ್ನು ನೆಲೆನಿಲ್ಲಿಸಿದ್ದೇವೆಯೇ? ನಾವು ನಮ್ಮ ಲೌಕಿಕ ವ್ಯವಹಾರದೊಂದಿಗೆ ಸಂಬಂಧವಿರಿಸಿಕೊಂಡು ಪರಲೋಕದ ಬಗ್ಗೆ ಸಹ ಗಮನ ಹರಿಸುತ್ತಿದ್ದೇವೆಯೇ? ನಾವು ನಿಜವಾಗಿಯೂ ದೀನಿಗೆ ಲೌಕಿಕತೆಯ ಮೇಲೆ ಆದ್ಯತೆ ನೀಡುತ್ತಿದ್ದೇವೆಯೇ? ನಾವು ಪ್ರತಿಯೊಂದು ಕೆಡುಕು ಮತ್ತು ದುರ್ನಡತೆಯಿಂದ ಅತ್ಯಂತ ಎಚ್ಚರಿಕೆಯಿಂದ ದೂರವಿರಲು ಪ್ರಯತ್ನಿಸುತ್ತಿದ್ದೇವೆಯೇ? ನಾವು ಇತರರ ಹಕ್ಕನ್ನು ಕಸಿಯುವುದರಿಂದ ಮತ್ತು ಅಕ್ರಮ ಸ್ವಾಧೀನದಿಂದ ದೂರವಿರುತ್ತೇವೆಯೇ? ನಾವು ಐದು ಸಮಯದ ನಮಾಝನ್ನು ತಪ್ಪದೆ ಅನುಷ್ಠಿಸುತ್ತಿದ್ದೇವೆಯೇ? ನಾವು ಯಾವಾಗಲೂ ಪ್ರಾರ್ಥನೆಯಲ್ಲಿ ನಿರತರಾಗಿ ಅಲ್ಲಾಹನನ್ನು ವಿನಯದಿಂದ ಸ್ಮರಿಸುತ್ತೇವೆಯೇ? ನಾವು ನಮ್ಮ ಮೇಲೆ ಕೆಟ್ಟ ಪ್ರಭಾವ ಬೀರುವ ಗೆಳೆಯ ಮತ್ತು ಸಂಗಡಿಗನನ್ನು ಬಿಟ್ಟುಬಿಡುತ್ತೇವೆಯೇ? ನಾವು ತಂದೆ - ತಾಯಂದಿರನ್ನು ಆದರಿಸಿ ಮತ್ತು ಅವರ ಸೇವೆಮಾಡಿ ಒಳ್ಳೆಯ ಕಾರ್ಯಗಳಲ್ಲಿ ಅವರ ಮಾತುಗಳನ್ನು

ಅನುಸರಿಸುತ್ತೇವೆಯೇ?, ನಾವು ನಮ್ಮ ಪತ್ನಿ ಮತ್ತು ಅವಳ ಬಂಧುಗಳೊಂದಿಗೆ ಸೌಮ್ಯವಾಗಿ ಮತ್ತು ಉತ್ತಮ ರೀತಿಯಲ್ಲಿ ವರ್ತಿಸುತ್ತೇವೆಯೇ?, ನಾವು ನಮ್ಮ ನೆರೆಹೊರೆಯವರಿಗೆ ಸಣ್ಣ ಸಣ್ಣ ಉಪಕಾರಗಳನ್ನು ಮಾಡುವುದರಿಂದ ದೂರವಿರುತ್ತೇವೆಯೇ?, ನಾವು ನಮಗೆ ತಪ್ಪು ಮಾಡಿದವರ ತಪ್ಪನ್ನು ಕ್ಷಮಿಸುತ್ತೇವೆಯೇ?, ನಮ್ಮ ಹೃದಯಗಳು ಇತರರ ಮೇಲಿನ ಎಲ್ಲ ವಿಧಗಳ ಅಸೂಯೆ ಮತ್ತು ದ್ವೇಷದಿಂದ ಮುಕ್ತವೇ? ಎಲ್ಲ ಗಂಡಂದಿರು ಮತ್ತು ಎಲ್ಲ ಹೆಂಡತಿಯರು ಪರಸ್ಪರರ ಹಕ್ಕನ್ನು ನಿಭಾಯಿಸುತ್ತಿದ್ದಾರೆಯೇ? ಬೈಅತ್ ನಿಬಂಧನೆಗಳನ್ನು ಮುಂದಿರಿಸಿ ನಾವು ನಮ್ಮ ಸ್ಥಿತಿಗತಿಗಳ ಕಡೆಗೆ ಗಮನ ಹರಿಸುತ್ತೇವೆಯೇ? ನಮ್ಮ ಸಭೆಗಳು ಇತರರನ್ನು ದೂಷಿಸುವುದರಿಂದಲೂ ಚಾಡಿ ಹೇಳುವುದರಿಂದಲೂ ಮುಕ್ತವೇ? ನಮ್ಮ ಹೆಚ್ಚಿನ ಸಭೆಗಳು ಅಲ್ಲಾಹನನ್ನೂ ಅವನ ಪೈಗಂಬರ್ ಹಝ್ರತ್ ಮುಹಮ್ಮದ್‌ರನ್ನು[ಸ] ಸ್ಮರಿಸುವಂತಹದ್ದೇ?

ಇವುಗಳ ಉತ್ತರ ಅಲ್ಲವೆಂದಾದರೆ, ನಾವು ಹಝ್ರತ್ ಮಸೀಹ್ ಮೌಊದ್‌ರ[ಅ] ಅಧ್ಯಾಪನೆಗಳಿಂದ ದೂರವಿದ್ದೇವೆ ಹಾಗೂ ನಾವು ನಮ್ಮ ಜೀವನಕ್ರಮದ ಬಗ್ಗೆ ಚಿಂತಿತರಾಗಬೇಕಾಗಿದೆ. ಇವುಗಳ ಉತ್ತರ ಹೌದು ಎಂದು ಹೇಳುವವರು ಭಾಗ್ಯವಂತರು. ಅವರು ತಮ್ಮ ಕರ್ಮದ ಸ್ಥಿತಿಗತಿಗಳ ಬಗ್ಗೆ ಗಮನಹರಿಸಿ ಬೈಅತಿನ ಹಕ್ಕನ್ನು ಈಡೇರಿಸುವವರಾಗಿದ್ದಾರೆ.

ಆದರೆ ಸತ್ಯದ ಕಣ್ಣಿನಿಂದ ನೋಡುವುದಾದರೆ, ಕೆಲವು ಸಂದರ್ಭಗಳಲ್ಲಿ ಸಮಾಜದ ಹಸ್ತಕ್ಷೇಪದಿಂದ ಪ್ರಭಾವಿತರಾಗಿ ಈ ಸಂಗತಿಗಳನ್ನು ಅಥವಾ ಇವುಗಳಲ್ಲಿ ಹಲವು ಸಂಗತಿಗಳನ್ನು ಗಮನಿಸದೆ ಸಮಾಜದ ಕೆಡುಕುಗಳು ಪುನಃ ಪುನಃ ನಮ್ಮೊಳಗೆ ಪ್ರವೇಶಿಸುತ್ತಿವೆ ಹಾಗೂ ಹಲವು ಸಂದರ್ಭಗಳಲ್ಲಿ ನಾವು ನಿಸ್ಸಹಾಯಕರಾಗುತ್ತೇವೆ ಎಂಬ ಉತ್ತರ ಕಂಡು ಬರುತ್ತದೆ. ನಮ್ಮ ವಿಶ್ವಾಸಾದರ್ಶಗಳು ಸುದೃಢವಾದುದಾಗಿದೆ ಮತ್ತು ಯಾರಿಗೂ ಅವುಗಳಿಂದ ನಮ್ಮನ್ನು ಹಿಂತಿರುಗಿಸಲು ಮತ್ತು ದೂರಸರಿಸಲು ಸಾಧ್ಯವಲ್ಲವೆಂದು ನಮ್ಮಲ್ಲಿ 99.99% ಜನರು ವಾದಿಸುತ್ತಾರೆ. ಆದರೆ ಕರ್ಮ ಪರವಾದ ದೌರ್ಬಲ್ಯಗಳು ಸಮಾಜದ ಶಕ್ತವಾದ ಹಲ್ಲೆಗಳ ಪ್ರವಾಹದಲ್ಲಿ ಸಿಕ್ಕಿಕೊಳ್ಳುವಾಗ ವಿಶ್ವಾಸಾದರ್ಶಗಳ ಬೇರುಗಳನ್ನೂ ಅಲುಗಾಡಿಸಲು ಶುರುಮಾಡುತ್ತವೆ ಎಂದು ನಾವು ಯಾವಾಗಲೂ ನೆನಪಿಡಬೇಕು. ಶೈತಾನ್ ಮೆಲ್ಲಮೆಲ್ಲನೆ ಹಲ್ಲೆ ಮಾಡುತ್ತಾನೆ. ಜಮಾಅತಿನ ವ್ಯವಸ್ಥೆಯಿಂದ ವಿದೂರತೆ ಶುರುವಾಗುತ್ತದೆ. ಅನಂತರ ಒಂದು ಹೆಜ್ಜೆ ಮುಂದೆ ಹೋಗಿ ಖಿಲಾಫತಿನಿಂದಲೂ ವಿದೂರತೆ ಉಂಟಾಗಲು ಶುರುವಾಗುತ್ತದೆ.

ಒಟ್ಟಿನಲ್ಲಿ ಒಂದು ದೌರ್ಬಲ್ಯ ಮತ್ತೊಂದು ದೌರ್ಬಲ್ಯವನ್ನು ಎಬ್ಬಿಸಿ ಕೊನೆಗೆ ಎಲ್ಲವೂ ನಾಶವಾಗುತ್ತವೆ ಎಂದು ನೆನಪಿಡಬೇಕು. ಅಹ್ಮದಿಯತಿನ ಸೌಂದರ್ಯ ಜಮಾಅತಿನ ವ್ಯವಸ್ಥೆ ಮತ್ತು ಖಿಲಾಫತಿನ ವ್ಯವಸ್ಥೆಯ ಹಾರದಲ್ಲಿ ಪೋಣಿಸಬೇಕಾಗಿದೆ ಎಂದು ನಾವು ತಿಳಿದಿದ್ದೇವೆ. ನಮ್ಮ ವಿಶ್ವಾಸಾದರ್ಶದ ಶಕ್ತಿಯೂ ಕರ್ಮಪರವಾದ ಶಕ್ತಿಯೂ ಇದೇ ಆಗಿದೆ. ಆದ್ದರಿಂದ ಮರಳುವಿಕೆಯ ಮಾರ್ಗ ಕಂಡುಹಿಡಿಯುವುದು ಕಷ್ಟವಾಗುವಷ್ಟು ದೂರ ಯಾವುದೇ ಅಹ್ಮದಿ ಹೋಗುವ ಮುಂಚೆಯೇ ಕಾಲದ ಖಲೀಫರು ಯಾವಾಗಲೂ ದೌರ್ಬಲ್ಯಗಳನ್ನು ಬೊಟ್ಟುಮಾಡಿ ಜಮಾಅತಿನ ಗಮನ ಹರಿಸುತ್ತಾ ಇರುತ್ತಾರೆ. ಇಸ್ತಿಗ್‌ಫಾರ್ ಮಾಡುತ್ತಾ (ಪಶ್ಚಾತಾಪ ಪಡುತ್ತಾ) ತಮ್ಮ ಕರ್ಮಪರವಾದ ಬಲಹೀನತೆಗಳ ಮೇಲೆ ಗಮನಹರಿಸಿ ಅವುಗಳನ್ನು ದೂರಮಾಡಲು ಪ್ರಯತ್ನಿಸಿರಿ. ಅಲ್ಲಾಹನು ನಿಮ್ಮ ಮೇಲೆ ಮಾಡಿದ ಔದಾರ್ಯಗಳನ್ನು ಸ್ಮರಿಸಿರಿ.

ಸಮಾಜದ ಕೆಡುಕುಗಳಿಗೆ ಕಡಿವಾಣವಿಲ್ಲದಿರುವಿಕೆ ಮತ್ತು ಅದರ ಹರಡುವಿಕೆಯಾಗಿದೆ ಇಂದಿನ ಕರ್ಮರಂಗದಲ್ಲಿನ ಅಪಾಯ. ಅದರೊಂದಿಗೆ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯದ ಹೆಸರಲ್ಲಿ ಕೆಲವು ಕೆಡುಕುಗಳಿಗೆ ಕಾನೂನಿನ ಸಂರಕ್ಷಣೆ ಸಹ ನೀಡಲಾಗುತ್ತದೆ. ಹಿಂದಿನ ಕಾಲದಲ್ಲಿ ಕೆಡುಕುಗಳು ಪರಿಮಿತವಾಗಿದ್ದವು. ಪ್ರಾದೇಶಿಕ ಕೆಡುಕುಗಳು ಪ್ರಾದೇಶಿಕವಾಗಿಯೇ, ಪಟ್ಟಣದ ಕೆಡುಕುಗಳು ಪಟ್ಟಣದಲ್ಲಿ ಹಾಗೂ ದೇಶದ ಕೆಡುಕುಗಳು ದೇಶದಲ್ಲಿಯೇ ಉಳಿದಿದ್ದವು. ಹೆಚ್ಚೆಂದರೆ ಸಮೀಪದ ನೆರೆಹೊರೆಯವರು ಅದರಿಂದ ಪ್ರಭಾವಿತರಾಗುತ್ತಿದ್ದರು. ಆದರೆ ಇಂದು ಯಾತ್ರೆಯ ಅನುಕೂಲತೆಗಳು, ಟಿ.ವಿ., ಇಂಟರ್‌ನೆಟ್ ಮತ್ತು ವಿವಿಧ ಮಾಧ್ಯಮಗಳು ಪ್ರತಿಯೊಂದು ವೈಯಕ್ತಿಕ ಮತ್ತು ಪ್ರಾದೇಶಿಕ ಕೆಡುಕುಗಳನ್ನು ಅಂತರ್‌ರಾಷ್ಟ್ರೀಯ ಕೆಡುಕುಗಳನ್ನಾಗಿ ಮಾಡಿವೆ. ಇಂಟರ್‌ನೆಟ್ ಮೂಲಕ ಸಾವಿರಾರು ಮೈಲು ದೂರಕ್ಕೆ ಸಂಪರ್ಕ ಸ್ಥಾಪಿಸಿ ಅಶ್ಲೀಲತೆಗಳನ್ನು ಮತ್ತು ಕೆಡುಕುಗಳನ್ನು ಹರಡಲಾಗುತ್ತದೆ. ತರುಣಿಯರನ್ನು ಪುಸಲಾಯಿಸಿ ಅವರ ಕರ್ಮಪರವಾದ ಬಲಹೀನತೆಯೊಂದಿಗೆ ಅವರನ್ನು ಧರ್ಮದಿಂದಲೇ ದೂರಸರಿಸಲಾಗುತ್ತದೆ.

ಪಾಕಿಸ್ತಾನ ಮತ್ತು ಇತರ ಕೆಲವು ದೇಶಗಳಲ್ಲಿ ಹುಡುಗಿಯರಿಗೆ ವಿವಾಹದ ಪ್ರಲೋಭನೆ ಕೊಟ್ಟು ವೇಶ್ಯೆರನ್ನಾಗಿ ಮಾಡಲಾಗುತ್ತದೆ. ಈ ಗುಂಪು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇಂತಹ ಕೆಲಸಗಳನ್ನು ಮಾಡುತ್ತಿವೆ. ಈ ಭಯಾನಕವಾದ ಅವಸ್ಥೆ ಖಂಡಿತವಾಗಿಯೂ ಬೆರಗುಗೊಳಿಸುವಂತದ್ದಾಗಿದೆ.

ಇದೇ ರೀತಿಯಲ್ಲಿ ಯುವಕರನ್ನು ವಿವಿಧ ರೀತಿಯಲ್ಲಿ ಕರ್ಮಪರವಾಗಿಯೂ ವಿಶ್ವಾಸಪರವಾಗಿಯೂ ಸಂಪೂರ್ಣವಾಗಿ ದುರ್ಬಲಗೊಳಿಸಲಾಗುತ್ತದೆ. ಈ ಮಾಲಿನ್ಯಗಳಿಂದ ಪ್ರತಿಯೊಬ್ಬ ಅಹ್ಮದಿಯನ್ನು ಸಂರಕ್ಷಿಸಲು ಅಲ್ಲಾಹನೊಂದಿಗೆ ಪ್ರಾರ್ಥಿಸುವುದರೊಂದಿಗೆ ಪ್ರತಿಯೊಬ್ಬ ಅಹ್ಮದಿಯೂ ಅಲ್ಲಾಹನೊಂದಿಗೆ ಸಹಾಯ ಬೇಡುತ್ತಾ ಈ ಕೊಳಕಿನಿಂದ ರಕ್ಷಣೆಹೊಂದಲು ಒಂದು ಜಿಹಾದ್ (ತೀವ್ರ ಪ್ರಯತ್ನ) ಮಾಡುವ ಆವಶ್ಯಕತೆ ಇದೆ. ಆಧುನಿಕ ತಂತ್ರಜ್ಞಾನಗಳಿಂದ ಮತ್ತು ಸೌಕರ್ಯಗಳಿಂದ ಪ್ರಯೋಜನ ಪಡೆಯುವುದು ನಿಷಿದ್ಧವಲ್ಲ. ಆದರೆ ಅಹ್ಮದಿಯಾದವನು ಆಧುನಿಕ ಸವಲತ್ತುಗಳಿಂದ ಫಲ ಪಡೆದುಕೊಂಡು ಸನ್ಮಾರ್ಗದ ಪ್ರಚಾರಣೆಯನ್ನು ಪೂರ್ತಿಗೊಳಿಸಲು ಹಝ್ರತ್ ಮಸೀಹ್ ಮೌಊದ್‌ರ[ಅ] ಸಹಾಯಕನಾಗಬೇಕು. ಅಶ್ಲೀಲತೆ, ಅಧಾರ್ಮಿಕತೆ ಮತ್ತು ಅವಿಶ್ವಾಸಗಳಿಂದ ಪ್ರಭಾವಿತನಾಗಿ ತನ್ನನ್ನು ತಾನೇ ಶತ್ರುಗಳ ಕೈಗೆ ಒಪ್ಪಿಸಬಾರದು.

ಇದು ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕಾದ ಮತ್ತು ಚಿಂತಿಸಬೇಕಾದ ಸಮಯವಾಗಿದೆ. ಮುಂದಿನ ಪೀಳಿಗೆ ಲೋಕದ ಈ ಕಲಹ ಮತ್ತು ಹಲ್ಲೆಗಳಿಂದ ಸುರಕ್ಷಿತರಾಗಲು ನಮ್ಮ ಹಿರಿಯರು ಸಹ ತಮ್ಮ ಮಾದರಿಗಳನ್ನು ಸ್ಥಾಪಿಸಬೇಕಾಗಿದೆ. ಯುವಕರೂ ಗರಿಷ್ಠ ಮಟ್ಟದ ಪ್ರಯತ್ನಮಾಡುತ್ತಾ ಮತ್ತು ಅಲ್ಲಾಹನಿಂದ ಸಹಾಯ ಯಾಚಿಸುತ್ತಾ ತಮ್ಮನ್ನು ತಾವೇ ಶತ್ರುಗಳ ಹಲ್ಲೆಗಳಿಂದ ರಕ್ಷಿಸಬೇಕು. ಗೊತ್ತಾಗದ ರೀತಿಯಲ್ಲಿ ಹಲ್ಲೆ ಮಾಡುವ, ಮನೊರಂಜನೆ ಮತ್ತು ವಿನೋದದ ಹೆಸರಲ್ಲಿ ನಮ್ಮ ಮನೆಗಳಿಗೆ ನುಗ್ಗಿ ನಮ್ಮ ಜಮಾಅತಿನ ಯುವಕರನ್ನು ಮತ್ತು ಬಲಹೀನರನ್ನು ಪ್ರಭಾವಿತರನ್ನಾಗಿ ಮಾಡುವ, ಅವರಲ್ಲಿ ಕೊರತೆಗಳನ್ನು ಉಂಟುಮಾಡಲು ಪ್ರಯತ್ನಿಸುವ ಶತ್ರುವಿನಿಂದ ರಕ್ಷಣೆ ಹೊಂದಬೇಕಾಗಿದೆ.

ನಿಸ್ಸಂಶಯವಾಗಿಯೂ ನಾನು ಹೇಳಿದಂತೆ, ಅಹ್ಮದಿಯಾ ಜಮಾಅತಿನ ಖಲೀಫರು ಕರ್ಮರಂಗದಲ್ಲಿ ಬದಲಾವಣೆ ಉಂಟು ಮಾಡುವುದರ ಕಡೆಗೆ ನಮ್ಮ ಗಮನಹರಿಸುತ್ತಿದ್ದರು. ಈ ಕೊರತೆಗಳನ್ನು ದೂರಮಾಡುವುದರ ಬಗ್ಗೆ ಖುತ್‌ಬ ಇತ್ಯಾದಿಗಳ ಮೂಲಕ ಹಿಂದಿನ ಖಲೀಫರೂ ಅದೇ ರೀತಿ ನಾನೂ ಗಮನಹರಿಸುತ್ತಾ ಇರುತ್ತೇನೆ. ಎಲ್ಲ ವಿಭಾಗಗಳ ಮತ್ತು ಎಲ್ಲ ವಯಸ್ಸಿನ ಅಹ್ಮದಿಯರನ್ನು ಶತ್ರುಗಳ ಈ ಹಲ್ಲೆಗಳಿಂದ ರಕ್ಷಿಸಲು ಪ್ರಯತ್ನಿಸಲಿಕ್ಕಾಗಿ ಈ ನಿರ್ದೇಶನಗಳ ಬೆಳಕಲ್ಲಿ ಶಾಖಾ ಸಂಘಟನೆಗಳೂ ಜಮಾಅತಿನ ವ್ಯವಸ್ಥೆಯೂ ಪ್ರೋಗ್ರಾಮ್ ಮಾಡುತ್ತಾರೆ. ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ಕರ್ಮಸುಧಾರಣೆಯ ಕಡೆಗೆ ಸ್ವತಃ

ಶ್ರದ್ಧೆವಹಿಸಿದರೆ, ದೀನಿನ ಶತ್ರುಗಳ ಹಲ್ಲೆಗಳನ್ನು ಪರಾಜಿತಗೊಳಿಸಲು ನಿಂತು, ಅದರೊಂದಿಗೆ ದೀನಿನ ಶತ್ರುಗಳನ್ನು ಸುಧಾರಣೆ ಮಾಡಲು ದೃಢ ನಿರ್ಧಾರ ಮಾಡುವುದಾದರೆ, ಎಂದರೆ ಪ್ರತಿರೋಧ ಮಾತ್ರವಲ್ಲ, ಅವರ ಸುಧಾರಣೆ ಸಹ ಮಾಡಿದರೆ ಮತ್ತು ಈ ಉದ್ದೇಶವನ್ನು ಪಡೆಯಲು ಅಲ್ಲಾಹನೊಂದಿಗೆ ತಮ್ಮ ವಿಶೇಷವಾದ ಒಂದು ಸಂಬಂಧ ಉಂಟುಮಾಡಿದರೆ, ನಾವು ಶತ್ರುಗಳ ಹಲ್ಲೆಗಳನ್ನು ಪರಾಜಿತಗೊಳಿಸುವುದರೊಂದಿಗೆ ಅವರ ಸುಧಾರಣೆ ಸಹ ಮಾಡಿ ಅವರ ಇಹಲೋಕ ಮತ್ತು ಪರಲೋಕದ ಕಾರ್ಯಗಳನ್ನು ಸರಿಪಡಿಸುವವರಾಗುವೆವು. ನಮ್ಮ ಸಂತಾನಗಳನ್ನು ಕೆಟ್ಟ ಪ್ರಭಾವಗಳ ಕೆಳಗೆ ತರಲು ಪ್ರಯತ್ನಿಸುವ ಪಿತೂರಿಯನ್ನು ಕೊನೆಗೊಳಿಸುವವರಾಗುವೆವು. ಇದರ ಮೂಲಕ ನಾವು ನಮ್ಮ ಸಂತಾನಗಳನ್ನು ಸಂರಕ್ಷಿಸುವವರಾಗುವೆವು. ನಾವು ಬಲಹೀನರ ವಿಶ್ವಾಸದ ರಕ್ಷಕರಾಗುವೆವು. ಅನಂತರ ಕರ್ಮ ಸುಧಾರಣೆಯ ಈ ದೀಪ ಒಂದರ ನಂತರ ಮತ್ತೊಂದನ್ನು ಬೆಳಗಿಸುತ್ತಾ ಹೋಗಿ, ಈ ಪರಂಪರೆ ಅಂತ್ಯದಿನದ ವರೆಗೆ ಹೋಗುವುದು. ನಮ್ಮ ಕರ್ಮ ಸುಧಾರಣೆಯಿಂದ ತಬ್‌ಲೀಗಿನ ಮಾರ್ಗ ಹೆಚ್ಚು ಹೆಚ್ಚಾಗಿ ತೆರೆಯುತ್ತಾ ಹೋಗುವುದು. ಆಧುನಿಕ ತಂತ್ರಜ್ಞಾನಗಳು ಕೆಡುಕುಗಳನ್ನು ಹರಡುವುದರ ಬದಲಿಗೆ ಪ್ರತಿಯೊಂದು ದೇಶ ಮತ್ತು ಪ್ರತಿಯೊಂದು ಭಾಗದಲ್ಲಿ ಅಲ್ಲಾಹನ ಹೆಸರನ್ನು ಹರಡುವ ಮಾರ್ಗವಾಗುವುವು.

ನಿಜಸ್ಥಿತಿಯಿಂದ ದೃಷ್ಟಿಗಳನ್ನು ತಪ್ಪಿಸಲಾಗದು ಎಂದು ನಾವು ಯಾವಾಗಲೂ ನೆನಪಿಡಬೇಕು. ಏಕೆಂದರೆ ಪ್ರಗತಿ ಹೊಂದುವ ಸಮುದಾಯಗಳು, ಲೋಕದ ಸುಧಾರಣೆ ಮಾಡುವ ಸಮುದಾಯಗಳು, ಲೋಕದಲ್ಲಿ ಬದಲಾವಣೆ ತರುವ ಕೋಮುಗಳು ತಮ್ಮ ತಮ್ಮ ದೌರ್ಬಲ್ಯಗಳ ಮೇಲೆ ಗಮನವಿಡುತ್ತವೆ. ಕಣ್ಣು ಮುಚ್ಚಿ ಎಲ್ಲವೂ ಸರಿಯಾಗಿಯೇ ಇವೆ ಎಂದು ಹೇಳುವುದಾದರೆ, ಅದು ನಮ್ಮ ಕೆಲಸಗಳಲ್ಲಿ ತಡೆಯುಂಟು ಮಾಡುವುದು. ಹೇಗಿದ್ದರೂ ವಾಸ್ತವಿಕತೆಗಳ ಮೇಲೆ ದೃಷ್ಟಿಯಿಡಬೇಕು. 50% ಜನರ ಸುಧಾರಣೆಯಾಗಿದೆ ಎಂಬುದರಲ್ಲಿ ಅಥವಾ ನಿರ್ದಿಷ್ಟ ಶೇಕಡ ಜನರ ಸುಧಾರಣೆಯಾಗಿದೆ ಎಂಬುದರಲ್ಲಿ ನಾವು ಸಂತೃಪ್ತರಾಗಬಾರದು. ಲೋಕದಲ್ಲಿ ಪರಿವರ್ತನೆ ಉಂಟುಮಾಡಲು ಶೇಕಡ ನೂರರ ಗುರಿ ಇರಿಸಬೇಕು.

ಕರ್ಮಸುಧಾರಣೆಯಲ್ಲಿ ನಾವು ಶೇಕಡ ನೂರರಷ್ಟು ಯಶಸ್ಸು ಗಳಿಸಿದರೆ ನಮ್ಮ ಜಗಳಗಳೂ ಕಲಹಗಳೂ ಮೊಕದ್ದಮೆಗಳೂ ಇತರರಿಗೆ ಸಾಂಪತ್ತಿಕ ಹಾನಿ ಉಂಟುಮಾಡುವ ಶ್ರಮಗಳೂ ಸಂಪತ್ತಿನ ದುರಾಸೆ, ಟಿ.ವಿ., ಮತ್ತಿತರ ಮಾಧ್ಯಮಗಳ ಮೂಲಕ ಅಸಭ್ಯವಾದ ಕಾರ್ಯಕ್ರಮಗಳನ್ನು

ವೀಕ್ಷಿಸುವುದು, ಪರಸ್ಪರರೊಂದಿಗಿನ ಗೌರವಾದರದಲ್ಲಿ ಕೊರತೆಗಳು, ಪರಸ್ಪರರನ್ನು ಅಪಮಾನಿಸಲು ಪ್ರಯತ್ನಿಸುವುದು ಮುಂತಾದ ಎಲ್ಲ ಕೆಡುಕುಗಳು ಕೊನೆಗೊಳ್ಳುವುವು. ಇಹಲೋಕದಲ್ಲಿ ಸ್ವರ್ಗವನ್ನು ತೋರಿಸುವಂತಹ ಪ್ರೀತಿ, ಪ್ರೇಮ, ಸಾಹೋದರ್ಯದ ವಾತಾವರಣ ಉಂಟಾಗುವುದು. ಇವುಗಳೆಲ್ಲ ನಮ್ಮ ಮುಂದೆ ಸಾಮಾನ್ಯವಾಗಿ ಬರುವಂತಹ ಕೆಡುಕುಗಳಾಗಿವೆ. ಜಮಾಅತಿನ ಒಳಗೂ ಇಂತಹ ಕೆಲವು ಸಂಗತಿಗಳು ಬರುತ್ತಿರುತ್ತವೆ. ಆದ್ದರಿಂದ ನಾನು ಇದರ ಬಗ್ಗೆ ಪ್ರಸ್ತಾಪಿಸಿದೆ. ನಮಗೆ ಜವಾಬ್ದಾರಿಗಳ ತಿಳಿವು ಉಂಟಾದರೆ, ದೀನಿನ ಸೇವೆಯ ಉನ್ನತವಾದ ಉದ್ದೇಶವನ್ನು ಅಲ್ಲಾಹನ ಅನುಗ್ರಹವೆಂದು ಮನವರಿಕೆ ಮಾಡಿ ಮಾಡುವವರಾಗುವೆವು. "ನಾವು ದೀನಿನ ಸೇವೆಯನ್ನು ಅಲ್ಲಾಹನ ಅನುಗ್ರಹವೆಂದು ತಿಳಿದೇ ಮಾಡುತ್ತಿದೇವೆ" ಎಂದು ಯಾರಾದರೂ ನನ್ನ ಮಾತುಗಳನ್ನು ಕೇಳಿ ಹೇಳಬಹುದು. ಆದರೆ ಶೇಕಡ ನೂರರಷ್ಟು ಹುದ್ದೇದಾರರು ಹೀಗೆ ಮನವರಿಕೆ ಮಾಡುತ್ತಿಲ್ಲ. ಹುದ್ದೇದಾರರಲ್ಲಿ ಮನೋಸ್ಥೈರ್ಯ ಮತ್ತು ಸಹನಶಕ್ತಿ ಇಲ್ಲವೆಂದು ನನಗೆ ಬರುವ ಕೆಲವು ವರದಿಗಳಿಂದ ತಿಳಿದುಬರುತ್ತಿದೆ. ಯಾರಾದರೂ ಉಚ್ಚ ಸ್ವರದಲ್ಲಿ ಏನಾದರೂ ಹೇಳಿದರೆ ತಮ್ಮ ಅಹಂಕಾರ ಮತ್ತು ದುರಭಿಮಾನ ಹೊರಗೆ ಬರುತ್ತದೆ. ಕೆಲವರು ದುರಭಿಮಾನ ಪ್ರಕಟಿಸುತ್ತಾರೆ. ಒಟ್ಟಿನಲ್ಲಿ, ಯಾವುದೇ ಕೆಲಸವನ್ನು ಅಲ್ಲಾಹನ ಅನುಗ್ರಹವೆಂದು ತಿಳಿದು ಮಾಡುವವನು ಅಲ್ಲಾಹನ ಸಂತೃಪ್ತಿಗಾಗಿ ಎಲ್ಲವನ್ನು ಸಹಿಸುತ್ತಾನೆ. **"ಅಲ್ ಇಜ್ಜತು ಲಿಲ್ಲಾಹ್"** "ಎಲ್ಲ ಶಕ್ತಿ – ಗೌರವಗಳು ಅಲ್ಲಾಹನಿಗೆ ಸೇರುತ್ತದೆ" ಎಂಬ ಪದಗಳು ದುರಭಿಮಾನದ ಬದಲಾಗಿ, ಅವನನ್ನು ವಿನಯ ಮತ್ತು ನಮ್ರತೆ ತೋರಿಸಲು ನಿರ್ಬಂಧಿಸುತ್ತದೆ.

**"ನಾನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅಧ್ಯಾಪನೆಗಳನ್ನು ಪುನರುಜ್ಜೀವನಗೊಳಿಸಲು ಬಂದಿರುವೆನು"** ಎಂದು ಹಝ್ರತ್ ಮಸೀಹ್ ಮೌಊದ್(ಅ) ನಮಗೆ ತಿಳಿಸಿದ್ದಾರೆ. ಹಝ್ರತ್ ಪೈಗಂಬರರು(ಸ) ನಮಗೆ ತೋರಿಸಿದ ಮಾದರಿಯ ಬಗ್ಗೆ ಅವರ ಗುಲಾಮನು ಸಹ ಹೀಗೆ ಹೇಳುತ್ತಾನೆ: "ಹಝ್ರತ್ ಪೈಗಂಬರ್(ಸ) ನನ್ನೊಂದಿಗೆ ಎಂದೂ ಕಠಿಣ ಪದಗಳನ್ನು ಪ್ರಯೋಗಿಸಿಲ್ಲ. ಎಂದೂ ಕಠಿಣವಾಗಿ ಮಾತಾಡಿರಲಿಲ್ಲ." ಹಝ್ರತ್ ಪೈಗಂಬರರ(ಸ) ವೈಭವದ ಕಾರಣದಿಂದ ಒಬ್ಬ ವ್ಯಕ್ತಿ ನಡುಗಿದಾಗ ಹಝ್ರತ್ ಪೈಗಂಬರರು(ಸ) ಹೇಳಿದರು: "ಹೆದರಬೇಡ, ನಾನು ಕ್ರೂರಿಯಾದ

ರಾಜನೇನಲ್ಲ. ನಾನು ಒಣ ಮಾಂಸ ತಿನ್ನುತ್ತಿದ್ದ ಓರ್ವ ಸ್ತ್ರೀಯ ಮಗನಾಗಿರುವೆನು”.

ಪ್ರತಿಯೊಬ್ಬ ಹುದ್ದೇದಾರನೂ ಪ್ರತಿಯೊಬ್ಬ ಜಮಾಅತಿನ ಸೇವಕನೂ ಪ್ರತಿಯೊಬ್ಬ ಅಹ್ಮದಿಯೂ ತನ್ನ ಜೀವಿತದಲ್ಲಿ ಪ್ರಕಟಿಸಬೇಕಾದ ಮಾದರಿ ಇದಾಗಿದೆ. ಯಾವುದಾದರೂ ಹುದ್ದೆ ಅಥವಾ ಸೇವೆ ಮಾಡುವ ಸಂದರ್ಭ ಸಿಗುವುದಾದರೆ, **“ನಾನು ದರಿದ್ರನೂ ನಿಸ್ಸಹಾಯಕನೂ ಅಪರಿಣತನೂ ಅಜ್ಞಾತನೂ ಆಗಿದ್ದೆ.”** ಎಂಬ ಹಝ್ರತ್ ಮಸೀಹ್ ಮೌಊದ್‌ರ[ಅ] ಹೇಳಿಕೆಯನ್ನು ಯಾವಾಗಲೂ ಮುಂದಿರಿಸಬೇಕು.

ನಾವು ನಮ್ಮ ಅವಸ್ಥೆಯಲ್ಲಿ ವಿನಯ, ನಮ್ರತೆ ಮತ್ತು ನಿಸ್ಸಹಾಯಕತೆಯನ್ನು ಪ್ರಕಟಿಸುವಾಗಲೇ ಸೇವೆಯ ಹಕ್ಕನ್ನು ಈಡೇರಿಸಿ ದೇವಸನ್ನಿಧಿಯಲ್ಲಿ ಪ್ರವೇಶಿಸುವ ಪ್ರತೀಕ್ಷೆ ಹೊಂದಿದವರಾಗುವೆವು. ಹೀಗೆ ಅಲ್ಲವೆಂದಾದರೆ, ನಾವು ವಾದದ ಮಟ್ಟಿಗೆ ಕಾಲಘಟ್ಟದ ಇಮಾಮನ್ನು ಅನುಸರಿಸುವವರಾಗುವೆವು. ಆದರೆ ಸತ್ಯದಲ್ಲಿ ನಮ್ಮ ಜೀವಿತ ರೀತಿಯಿಂದ ಈ ವಾದವನ್ನು ಗೇಲಿ ಮಾಡುವವರಾಗುವೆವು. ಅನ್ಯರ ಶತ್ರುತ್ವ ನಮಗೆ ಹಾನಿಯುಂಟು ಮಾಡುವ ಬದಲಾಗಿ, ನಮ್ಮ ಅಂತರಂಗದ ಕಾಪಟ್ಯ ನಮ್ಮನ್ನು ಅವಮಾನಿಸುತ್ತಿರಬಹುದು. ಅದರೊಂದಿಗೆ ಅಲ್ಲಾಹನ ಅತೃಪ್ತಿಯೂ ಇರುವುದು.

ವಿಶೇಷವಾಗಿ ಜಮಾಅತಿನ ಸೇವೆ ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿ ತನ್ನ ವಿಶ್ಲೇಷಣೆ ನಡೆಸಬೇಕು. ಅದೇ ರೀತಿ ಪ್ರತಿಯೊಬ್ಬ ಅಹ್ಮದಿ ತನ್ನ ಅವಲೋಕನ ನಡೆಸಬೇಕು. ಏಕೆಂದರೆ ಬೈಅತಿನ ಉದ್ದೇಶ ಕೇವಲ ಬಾಯಿಮಾತಿನ ವಾದಗಳಿಂದ ಅಥವಾ ಅಂಗೀಕಾರದಿಂದ ಈಡೇರುವುದಿಲ್ಲ. ಕರ್ಮದ ಶಕ್ತಿ ಪ್ರಕಾಶಿಸುವ ತನಕ ಯಾವುದೇ ಪ್ರಯೋಜನವಿಲ್ಲ.

*

## (3)

## ಜುಮುಅ ಖುತ್‌ಬದ ಸಾರಾಂಶ (13/12/2013)

### ಕರ್ಮ ಸುಧಾರಣೆಯಲ್ಲಿ ಅಡೆಚಣೆಯ ಕಾರಣ:

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳುತ್ತಾರೆ: ಯಾವುದೇ ಸಂಗತಿಯ ಕೊರತೆಯ ಕಾರಣಗಳು ಗೊತ್ತಾದರೆ ಮಾತ್ರ ಅದರ ಸುಧಾರಣೆ ಮತ್ತು ಸುಧಾರಣೆಯ ಪ್ರಯತ್ನದ ವಿವಿಧ ಮಾರ್ಗಗಳನ್ನು ಸ್ವೀಕರಿಸಬಹುದಾಗಿದೆ. ಆಗ ಕಾರಣಗಳನ್ನು ಕೊನೆಗೊಳಿಸುವ ಪ್ರಯತ್ನ ಮಾಡಬಹುದಾಗಿದೆ. ಕಾರಣಗಳು ಕೊನೆಗೊಳ್ಳದಿದ್ದರೆ ತಾತ್ಕಾಲಿಕ ಸುಧಾರಣೆಯ ಬಳಿಕ ಪುನಃ ಕೆಡುಕು ಮರಳುವುದು. ಈ ದೃಷ್ಟಿಯಿಂದ ನಾನು ಚಿಂತಿಸಿ, ಹೆಚ್ಚಾಗಿ ಓದಿದಾಗ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಒಂದು ವಿಶ್ಲೇಷಣೆ ನನಗೆ ಸಿಕ್ಕಿತು. ಪ್ರಶ್ನಿಸಲು ಸಾಧ್ಯತೆಯಿರುವ ಸವಾಲುಗಳನ್ನು ತೆಗೆದು ಅದಕ್ಕೆ ಪರಿಹಾರವನ್ನು ಉದಾಹರಣೆಗಳ ಮೂಲಕ ಹೇಳುವುದು ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಲಿಖಿತ ಮತ್ತು ಭಾಷಣಗಳ ವಿಶೇಷತೆಯಾಗಿತ್ತು. ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ಉಲ್ಲೇಖಗಳ ಬೆಳಕಲ್ಲಿ, ಪರಿಹಾರ ಹೇಳುವಂತಹ ಅವರ ರೀತಿಯನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಅವರ ಖುತ್‌ಬಗಳಿಂದ ಪ್ರಯೋಜನ ಪಡೆಯುತ್ತಾ ಅದರ ಬೆಳಕಲ್ಲಿ ಆ ಕಾರಣಗಳನ್ನು ಸಹ ನಿಮ್ಮ ಮುಂದಿರಿಸಲು ನಾನು ಯೋಚಿಸಿದೆ.

ಕರ್ಮಸುಧಾರಣೆಯಲ್ಲಿ ತಡೆ ಉಂಟುಮಾಡುವ ಸಂಗತಿಗಳಲ್ಲಿ ಮೊದಲ ಸಂಗತಿ, ಕೆಲವು ಪಾಪಗಳು ದೊಡ್ಡವು ಮತ್ತು ಕೆಲವು ಪಾಪಗಳು ಸಣ್ಣವು ಎಂಬ ಜನರ ಅನಿಸಿಕೆಯಾಗಿದೆ. ಜನರು ಸ್ವತಃ ಅಥವಾ ಕೆಲವು ಪಂಡಿತರ ಮಾತುಗಳಿಗೆ ಓಗೊಟ್ಟು, ಅದರಿಂದ ಪ್ರಭಾವಿತರಾಗಿ, ಕೆಲವು ಪಾಪಗಳು ದೊಡ್ಡವು ಮತ್ತು ಕೆಲವು ಪಾಪಗಳು ಸಣ್ಣವು ಎಂದು ತೀರ್ಮಾನಿಸಿದ್ದಾರೆ. ಕರ್ಮ ಸುಧಾರಣೆಯಲ್ಲಿ ತಡೆ ಉಂಟುಮಾಡುವ ಸಂಗತಿ ಇದೇ ಆಗಿದೆ. ಇದರಿಂದ ಮನುಷ್ಯನು ಪಾಪ ಮಾಡಲು ಧೈರ್ಯಪಡುತ್ತಾನೆ, ದಿಟ್ಟತನ ಉಂಟಾಗುತ್ತದೆ ಮತ್ತು ಪಾಪಗಳ ತೀವ್ರತೆಯನ್ನು ಅರಿಯುವುದಿಲ್ಲ. ಸಣ್ಣ ಪಾಪ ಮಾಡುವುದು ತಪ್ಪಲ್ಲ ಅಥವಾ ಅದಕ್ಕೆ ಅಷ್ಟೇನೂ ಶಿಕ್ಷೆಯಿಲ್ಲ ಎಂದು ಭಾವಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಒಬ್ಬ ವ್ಯಕ್ತಿ ರೋಗಗ್ರಸ್ತನಾದರೆ, ಅವನ ರೋಗ ಸಣ್ಣದಾಗಲಿ ದೊಡ್ಡದಾಗಲಿ ಅದಕ್ಕೆ ಮಾತ್ರೆ ಸೇವಿಸದಿದ್ದರೆ, ಚಿಕಿತ್ಸೆ ಮಾಡಲು ಶ್ರಮಿಸದಿದ್ದರೆ, ಅವನು ರೋಗಮುಕ್ತನಾಗಲಿಕ್ಕಿಲ್ಲ. ಒಂದು ಸಣ್ಣ ಕಪ್ಪು ಕಲೆ ಮುಖದಲ್ಲಿ ಉಂಟಾದರೆ, ಅದು ಜಾಸ್ತಿಯಾಗಿ ಮುಖವನ್ನೆಲ್ಲ ಕಪ್ಪು ಮಾಡುವುದೇ ಎಂಬ ಚಿಂತೆ ಉಂಟಾಗುತ್ತದೆ. ಅದೇ ರೀತಿಯಲ್ಲಿ ಪಾಪದ ಒಂದು ಕಪ್ಪು ಕಲೆ ಹೃದಯದಲ್ಲಿ ಇರುತ್ತದೆ. ಸಣ್ಣ ಪಾಪಗಳು (ಸಗಾಯಿರ್) ಅಶ್ರದ್ಧೆಯಿಂದ ದೊಡ್ಡ ಪಾಪಗಳಾಗುತ್ತವೆ. **ಸಗಾಯಿರ್** ಎಂಬುದು ಮುಖವನ್ನೆಲ್ಲ ಕಪ್ಪಾಗಿಸುವ ಸಣ್ಣ ಪಾಪದ ಕಲೆಯಾಗಿದೆ.

ಯಾವುದೇ ಪಾಪವನ್ನು ಮನುಷ್ಯ ಸಣ್ಣದೆಂದು ಭಾವಿಸಬಾರದು. ಏಕೆಂದರೆ ಇದು ಸಣ್ಣ ಪಾಪವೆಂದು ಭಾವಿಸುವಾಗ ರೋಗದ ಬೀಜ ನಾಶವಾಗದೆ, ಸಂದರ್ಭಾನುಸಾರ ಸಣ್ಣ ಪಾಪಗಳೂ ದೊಡ್ಡದಾಗುತ್ತವೆ. ಈ ದೃಷ್ಟಿಯಿಂದ ನಾವು ನಮ್ಮನ್ನು ಪರೀಕ್ಷಿಸಬೇಕು. ಅಲ್ಲಾಹನು ಪ್ರತಿಯೊಂದು ಸಣ್ಣ ಮತ್ತು ದೊಡ್ಡ ಪಾಪದ ಬಗ್ಗೆ ಕೇಳುವನು ಮತ್ತು ಶಿಕ್ಷೆಯನ್ನು ಕಾದಿರಿಸಿ ಇಟ್ಟಿರುವನು.

ನೋಡಿರಿ, ಕೆಟ್ಟ ಕೆಲಸಕ್ಕಾಗಿ ಹಣ ಖರ್ಚುಮಾಡುವುದು ನಿಷೇಧಿಸಲ್ಪಟ್ಟ ಕೆಡುಕಾಗಿದೆ. ಇಂದು ಜೂಜಾಟ ಯಂತ್ರಗಳಿವೆ, ವಿವಿಧ ರೀತಿಯ ಜೂಜಾಟಗಳಿವೆ. ಹಲವು ಜನರು ಲೋಟರಿಗಳ ಆಸಕ್ತಿಯುಳ್ಳವರಾಗಿರುವರು. ಜೂಜಾಟ ಯಂತ್ರಗಳ ಬಳಿಗೆ ಹೋಗಿ ಜೂಜಾಡುತ್ತಾರೆ. ಆದರೆ ಅವರು ಸುಳ್ಳು ಹೇಳುವುದಿಲ್ಲ, ಜನಸಾಮಾನ್ಯರ ಮೇಲೆ ದೌರ್ಜನ್ಯವೆಸಗುವುದಿಲ್ಲ, ಕೊಲೆ ಮಾಡುವುದಿಲ್ಲ. ಕಾರಣವೇನೆಂದರೆ, ಈ ಜನರು ಈ ಕೆಡುಕುಗಳನ್ನು ಮಹಾಪಾಪವೆಂದು ಗ್ರಹಿಸುತ್ತಾರೆ. ಆದರೆ ಜೂಜಾಟ ಮತ್ತು ಕೆಟ್ಟ ಕೆಲಸಗಳಿಗೆ ಹಣ ಖರ್ಚು ಮಾಡುವುದನ್ನೂ ವ್ಯರ್ಥಮಾಡುವುದನ್ನೂ ತಪ್ಪೆಂದು ಗಣಿಸುವುದಿಲ್ಲ. ಆದ್ದರಿಂದ ಅಂತಹ ವ್ಯಕ್ತಿಯೂ ತಪ್ಪಾದ ರೀತಿಯಲ್ಲಿ ಹಣ ಖರ್ಚುಮಾಡುವುದನ್ನು ಮಹಾ ಪಾಪವೆಂದು ಗಣಿಸಬೇಕು. ಏಕೆಂದರೆ ಅವನು ಇತರ ಕೆಡುಕುಗಳನ್ನು ಮೊದಲೇ ಪಾಪವೆಂದು ತಿಳಿದಿದ್ದಾನೆ.

ಅದೇ ರೀತಿಯಲ್ಲಿ, ಓರ್ವ ಸ್ತ್ರೀ ತನ್ನ ಉಡುಗೆಯನ್ನು ಸಭ್ಯವಾಗಿ ಧರಿಸದಿರುವುದನ್ನು ನಾವು ಕಾಣುತ್ತೇವೆ. ಮನೆಯಿಂದ ಹೊರಡುವಾಗ ಪರ್ದಾ ಧರಿಸುವುದರ ಬಗ್ಗೆ ಅಸಡ್ಡೆ ತೋರಿಸುತ್ತಾಳೆ, ಅಹ್ಮದೀ ಮುಸ್ಲಿಮ್ ಎಂದು ಕರೆಯಲ್ಪಟ್ಟೂ ತಲೆಮರೆಸದೆ, ಹಿಜಾಬ್ ಧರಿಸದೆ ಸುತ್ತಾಡುತ್ತಾಳೆ.

ಬಿಗಿಯಾದ ಮತ್ತು ಪ್ರದರ್ಶನಾತ್ಮಕ ವಸ್ತ್ರ ಧರಿಸುತ್ತಾಳೆ. ಆದರೆ ಧನತ್ಯಾಗ ಮಾಡಲು ಹೇಳಿದರೆ, ಯಾವುದಾದರೂ ಚ್ಯಾರಿಟಿಗಾದರೆ, ವಿಶಾಲ ಮನಸ್ಸೊಂದಿಗೆ ಖರ್ಚು ಮಾಡುವಳು. ಸುಳ್ಳು ಹೇಳುವುದನ್ನು ದ್ವೇಷಿಸುವಳು, ಅವಳ ಮುಂದೆ ಯಾರಾದರೂ ಸುಳ್ಳು ಹೇಳುವುದನ್ನು ಸಹಿಸುವುದಿಲ್ಲ. ಇಂಥವರು ಚಂದಾ ಕೊಡುವುದರಲ್ಲಿ ಮುಂದೆ ಬರುವುದು ಅಥವಾ ಸುಳ್ಳನ್ನು ದ್ವೇಷಿಸುವುದು ಶ್ರೇಷ್ಠವಾದ ಒಳಿತಲ್ಲ. ಬದಲಾಗಿ ವಸ್ತ್ರವನ್ನು ಲಜ್ಜೆಯುಳ್ಳದ್ದಾಗಿ ಮಾಡುವುದು ಮತ್ತು ಪರ್ದಾದ ಕಡೆ ಶ್ರದ್ಧೆವಹಿಸುವುದಾಗಿದೆ ಶ್ರೇಷ್ಠವಾದ ಒಳಿತು. ಯಾವುದನ್ನು ಸಣ್ಣ ಒಳಿತೆಂದು ಗಣಿಸಿ ಲಕ್ಷಿಸುವುದಿಲ್ಲವೋ ಅದು ಒಂದು ಕಾಲದಲ್ಲಿ ಅವಳನ್ನು ದೊಡ್ಡ ಕೆಡುಕಿನ ಕಡೆಗೆ ಕೊಂಡೊಯ್ಯುವುದು. ಒಟ್ಟಿನಲ್ಲಿ ಪ್ರತಿಯೊಂದು ಒಳಿತು ಮತ್ತು ಕೆಡುಕಿನ ಮಟ್ಟ ಪ್ರತಿಯೊಬ್ಬ ವ್ಯಕ್ತಿಯ ಅವಸ್ಥೆಯ ಪ್ರಕಾರವಾಗಿದೆ. ವಿವಿಧ ಅವಸ್ಥೆಯಲ್ಲಿ ವಿವಿಧ ಕೃತ್ಯಗಳು, ಒಳಿತು ಮತ್ತು ಕೆಡುಕಿನ ಸ್ವರೂಪವನ್ನು ಬದಲಾಯಿಸುತ್ತದೆ.

ಕೆಲವು ಕೆಡುಕುಗಳು ದೊಡ್ಡವು, ಕೆಲವು ಸಣ್ಣವು, ಕೆಲವು ಒಳಿತುಗಳು ದೊಡ್ಡವು, ಕೆಲವು ಸಣ್ಣವು ಎಂಬ ಭಾವನೆ ಇರುವವರೆಗೆ ಮನುಷ್ಯನು ಕೆಡುಕಿನಿಂದ ರಕ್ಷೆ ಹೊಂದಲು ಸಾಧ್ಯವಿಲ್ಲ. ಮಾತ್ರವಲ್ಲ ಒಳಿತುಗಳನ್ನು ಮಾಡಲು ಪ್ರಾಪ್ತನೂ ಆಗಲಾರನು. ಮನುಷ್ಯನಿಗೆ ಉಪೇಕ್ಷಿಸಲು ಸಾಧ್ಯವಾಗದ, ಕಷ್ಟತೆಗಳನ್ನು ಎದುರಿಸಬೇಕಾಗಿ ಬರುವ, ಅವನ ಸ್ವಭಾವದಲ್ಲಿ ಹುದುಗಿ ಹೋಗಿರುವ ಕೆಡುಕುಗಳೇ ದೊಡ್ಡವು ಎಂದು ಯಾವಾಗಲೂ ಅರಿತಿರಬೇಕು. ಅದೇ ರೀತಿಯಲ್ಲಿ, ಮನುಷ್ಯನಿಗೆ ಮಾಡಲು ಕಷ್ಟವಾಗುವ ಒಳಿತುಗಳೇ ದೊಡ್ಡ ಒಳಿತುಗಳು. ಎಂದರೆ ಹಲವು ಕೆಡುಕುಗಳು ಒಬ್ಬರಿಗೆ ದೊಡ್ಡದಾಗಿರುವುವು, ಮತ್ತೊಬ್ಬರಿಗೆ ಸಣ್ಣದಾಗಿರುವುವು. ಹಲವು ಒಳಿತುಗಳು ಒಬ್ಬರಿಗೆ ದೊಡ್ಡದಾಗಿರುವುವು, ಮತ್ತೊಬ್ಬರಿಗೆ ಚಿಕ್ಕದಾಗಿರುವುವು.

**ಮೊದಲ ಕಾರಣ:**

ನಾವು ನಮ್ಮ ಸುಧಾರಣೆ ಮಾಡಬೇಕಾದರೆ, ಮೊತ್ತಮೊದಲಾಗಿ ಇಂತಹ ಚಿಂತೆಗಳನ್ನು ಮನಸ್ಸಿನಿಂದ ಹೊರಹಾಕಬೇಕು. ಉದಾಹರಣೆಗೆ, ವ್ಯಭಿಚಾರ ಒಂದು ಮಹಾಪಾಪವಾಗಿದೆ, ಕೊಲೆ ಮಾಡುವುದು ಒಂದು ಮಹಾ ಅಪರಾಧವಾಗಿದೆ, ಕಳ್ಳತನ ಮಾಡುವುದು ಒಂದು ದೊಡ್ಡ ತಪ್ಪಾಗಿದೆ, ಪರದೂಷಣೆ ಒಂದು ದೊಡ್ಡ ಕೆಡುಕಾಗಿದೆ, ಇವುಗಳ ಹೊರತು ಬಾಕಿಯಿರುವ ಎಲ್ಲ ಪಾಪಗಳು ಸಣ್ಣವು ಎಂಬ ಭಾವನೆಯನ್ನು

ಹೃದಯದಿಂದ ಕಿತ್ತೆಸೆಯಬೇಕು. ಅದೇ ರೀತಿ ಉಪವಾಸ ವ್ರತ ದೊಡ್ಡದಾದ ಒಳಿತು, ಝಕಾತ್ ಕೊಡುವುದು ದೊಡ್ಡದಾದ ಒಳಿತು, ಹಜ್ಜ್ ತೀರ್ಥಾಟನೆಗೆ ಹೋಗುವುದು ಮಹಾಪುಣ್ಯ ಕಾರ್ಯವಾಗಿದೆ; ಇವುಗಳ ಹೊರತು, ಉಳಿದ ಎಲ್ಲ ಒಳಿತುಗಳು ಸಣ್ಣವು ಎಂಬ ಸಾಧಾರಣ ಮುಸ್ಲಿಮರ ಭಾವನೆಯನ್ನು ಹೃದಯದಿಂದ ಕಿತ್ತೆಸೆಯಬೇಕು. ಈ ಭಾವನೆಯನ್ನು ಹೃದಯದಿಂದ ತೆಗೆಯದಿದ್ದರೆ ನಮ್ಮ ಕರ್ಮಗಳು ಬಲಹೀನವಾಗುವುವು. **"ಪವಿತ್ರ ಖುರ್‌ಆನಿನ ಏಳು ನೂರು ಆಜ್ಞೆಗಳನ್ನು ಪಾಲಿಸದಿರುವವನು ಮೋಕ್ಷದ ಬಾಗಿಲನ್ನು ತನ್ನ ಮೇಲೆ ಮುಚ್ಚುತ್ತಾನೆ"** ಎಂಬ ಹಝ್ರತ್ ಮಸೀಹ್ ಮೌಊದ್‌ರ[ಅ] ಹೇಳಿಕೆಯನ್ನು ಮುಂದಿರಿಸುವಾಗ ಮಾತ್ರ ನಮ್ಮ ಕರ್ಮಗಳು ಬಲಶಾಲಿಯಾಗುವುವು. ಇತರರ ಹಾಗೆ ಕೆಲವು ಒಳಿತುಗಳು ದೊಡ್ಡವು ಮತ್ತೆಲ್ಲವೂ ಚಿಕ್ಕವು ಎಂದು ಭಾವಿಸಬಾರದು. ಇತರ ಮುಸ್ಲಿಮರು ಈ ಸಂಗತಿಯಲ್ಲಿ, ಎಷ್ಟರವರೆಗೆ ಮಿತಿಮೀರಿದ್ದಾರೆ ಎಂದರೆ, ಉದಾಹರಣೆಗೆ ಅವರು ಉಪವಾಸ ವ್ರತ ದೊಡ್ಡ ಒಳಿತೆಂದು ಭಾವಿಸುತ್ತಾರೆ. ಆದರೆ ಸಾಮೂಹಿಕ ನಮಾಝಿಗೆ ಯಾವುದೇ ಬೆಲೆ ಕೊಡುವುದಿಲ್ಲ. ಉಪವಾಸ ವ್ರತ ಕಡ್ಡಾಯವೆಂದು ಹೇಳಿ ಅದನ್ನು ಸರಿಯಾಗಿ ಪಾಲಿಸುತ್ತಾರೆ. ಯಾರ ಮೇಲೆ ಝಕಾತ್ ಕಡ್ಡಾಯವಾಗಿದೆಯೋ ಅವನು ಅದನ್ನು ಕೊಡದಿರಲು ಪ್ರಯತ್ನಿಸಬಹುದು, ಆದರೆ ಉಪವಾಸ ವ್ರತವನ್ನು ಖಂಡಿತ ಅನುಷ್ಠಿಸುತ್ತಾನೆ. ಏಕೆಂದರೆ ಉಪವಾಸ ವ್ರತ ಅನುಷ್ಠಿಸದಿರುವುದು ಅವನ ಪ್ರಕಾರ ದೊಡ್ಡ ಪಾಪವಾಗಿದೆ.

ನಾವು ನಮ್ಮ ಕರ್ಮಸುಧಾರಣೆ ಮಾಡಬೇಕಾದರೆ, ಪ್ರತಿಯೊಂದು ಒಳಿತನ್ನು ಮಾಡಬೇಕು ಮತ್ತು ಪ್ರತಿಯೊಂದು ಕೆಡುಕಿನಿಂದ ರಕ್ಷೆ ಹೊಂದಲು ಪ್ರಯತ್ನಿಸಬೇಕು ಎಂಬ ಸಂಗತಿಯನ್ನು ಯಾವಾಗಲೂ ಗಮನದಲ್ಲಿಡಬೇಕು.

**ಎರಡನೇ ಕಾರಣ:**

ಕರ್ಮಸುಧಾರಣೆಯಲ್ಲಿ ತಡೆಯುಂಟಾಗಲು ಎರಡನೇ ಕಾರಣ ಸುತ್ತುಮುತ್ತಲಿನ ಸ್ಥಿತಿ ಮತ್ತು ನಕಲು ಮಾಡುವ (ಅನುಕರಣೆಯ) ಅಭ್ಯಾಸ. ಅಲ್ಲಾಹನು ಮನುಷ್ಯನ ಸಹಜಗುಣದಲ್ಲಿ ನಕಲು ಮಾಡುವ ಗುಣವನ್ನು ಇಟ್ಟಿರುವನು. ಹುಟ್ಟುಗುಣವಾದ್ದರಿಂದ ಚಿಕ್ಕಂದಿನಿಂದ ಇದು ಪ್ರಕಟವಾಗುತ್ತದೆ. ಅನುಕರಣೆಯ ಗುಣ ಖಂಡಿತವಾಗಿಯೂ ನಮ್ಮ ಒಳ್ಳೆಯದಕ್ಕಾಗಿದೆ. ಆದರೆ ಅದರ ದುರುಪಯೋಗ ಮನುಷ್ಯನನ್ನು ನಾಶಮಾಡುತ್ತದೆ ಅಥವಾ ನಾಶದ

ಕಡೆಗೆ ಎಳೆಯುತ್ತದೆ. ನಕಲು ಮಾಡುವ ಗುಣ ಮತ್ತು ಪರಿಸರದ ಪ್ರಭಾವದಿಂದಲೇ ಮನುಷ್ಯನು ತನ್ನ ತಂದೆ – ತಾಯಿಂದ ಭಾಷೆಯನ್ನೂ ಒಳ್ಳೆಯ ಸಂಗತಿಗಳನ್ನೂ ಬಾಕಿ ಕೆಲಸಗಳನ್ನೂ ಕಲಿಯುತ್ತಾನೆ. ಒಳ್ಳೆಯ ಸಂಗತಿಗಳನ್ನು ಕಲಿತು ಮಕ್ಕಳು ಉನ್ನತ ನೈತಿಕಗುಣ ಉಳ್ಳವರಾಗುತ್ತಾರೆ. ತಂದೆ – ತಾಯಂದಿರು ಒಳ್ಳೆಯವರೂ ನಮಾಝ್ ನಿರ್ವಹಿಸುವವರೂ ಪವಿತ್ರ ಖುರ್ಆನ್ ಪಾರಾಯಣ ಮಾಡುವವರೂ ಪರಸ್ಪರ ಪ್ರೀತಿ – ಪ್ರೇಮದಿಂದ ಇರುವವರೂ ಸುಳ್ಳನ್ನೂ ಇಷ್ಟಪಡದವರೂ ಆಗಿದ್ದರೆ, ಮಕ್ಕಳು ಸಹ ಅವರ ಪ್ರಭಾವದಿಂದ ಒಳಿತುಗಳನ್ನು ಮಾಡುವವರಾಗುವರು. ಆದರೆ ಸುಳ್ಳು, ಜಗಳ, ಕಲಹ, ಮನೆಯಲ್ಲಿ ಇತರರನ್ನು ಅಪಹಾಸ್ಯ ಮಾಡುವ ಮಾತುಗಳು, ಜಮಾಅತಿನ ಘನತೆಗೆ ಬೆಲೆಕೊಡದಿರುವುದು ಮುಂತಾದ ಕೆಡುಕುಗಳನ್ನು ಮಗು ನೋಡುವಾಗ, ಅವನ ನಕಲು ಮಾಡುವ ಗುಣದ ಕಾರಣ ಅಥವಾ ಸುತ್ತುಮುತ್ತಲಿನ ಪ್ರಭಾವದಿಂದ ಅವುಗಳನ್ನೇ ಕಲಿಯುತ್ತಾನೆ. ಹೊರಗೆ ಹೋಗುವಾಗ, ಸುತ್ತುಮುತ್ತಲು ಮತ್ತು ಗೆಳೆಯರಿಂದ ನೋಡುವುದನ್ನೆಲ್ಲ ಕಲಿಯಲು ಪ್ರಯತ್ನಿಸುತ್ತಾನೆ. ಆದ್ದರಿಂದ ಮಕ್ಕಳ ಹೊರಗಿನ ವಾತಾವರಣ ಮತ್ತು ಮನೆಯಲ್ಲಿ ಮಕ್ಕಳು ನೋಡುವ ಟಿ.ವಿ. ಕಾರ್ಯಕ್ರಗಳು ಮತ್ತು ಇಂಟರ್‌ನೆಟ್ ಉಪಯೋಗವನ್ನು ಸಹ ಗಮನಿಸಬೇಕು.

ಮಕ್ಕಳ ತರಬೇತಿಯ ಪ್ರಾಯ ಬಹಳ ಚಿಕ್ಕಂದಿನಿಂದಲೇ ಆಗಿದೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇದನ್ನು ಯಾವಾಗಲೂ ನೆನಪಿಡಬೇಕು. ಮಗು ದೊಡ್ಡವನಾಗುವಾಗ ತರಬೇತಿ ಶುರುವಾಗುವುದು ಎಂದು ಭಾವಿಸಬಾರದು. ಎರಡು ಮೂರು ವಯಸ್ಸು ಸಹ ಮಕ್ಕಳ ತರಬೇತಿಯ ಪ್ರಾಯವಾಗಿದೆ. ನಾನು ಹೇಳಿದಂತೆ ಮಗು ಮನೆಯಲ್ಲಿ ತಂದೆ ತಾಯಿಂದ ಮತ್ತು ಹಿರಿಯರಿಂದ ಕಲಿಯುತ್ತಾನೆ. ಅವರನ್ನು ನೋಡಿ ನಕಲು ಮಾಡುತ್ತಾರೆ. ಈಗ ಹುಡುಗ ಸಣ್ಣವನು ಎಂದೂ ಅವನಿಗೆ ಏನು ಗೊತ್ತು ಎಂದೂ ಯಾವತ್ತೂ ಭಾವಿಸಬಾರದು. ಅವನಿಗೆ ಪ್ರತಿಯೊಂದು ಸಂಗತಿ ಗೊತ್ತಿರುತ್ತದೆ. ಮಗು ತಂದೆ ತಾಯಿಯ ಪ್ರತಿಯೊಂದು ಚಲನವನ್ನು ನೋಡುತ್ತಿರುತ್ತಾನೆ ಮತ್ತು ಅವನರಿಯದೇ ಅವುಗಳು ಅವನ ಮನಸ್ಸಲ್ಲಿ ಗಟ್ಟಿಗೊಳ್ಳುತ್ತವೆ. ಒಂದು ಕಾಲದ ನಂತರ ಅವುಗಳನ್ನು ಅನುಕರಿಸಲು ಶುರು ಮಾಡುತ್ತಾನೆ. ಹುಡುಗಿಯರು ತಾಯಂದಿರನ್ನು ಅನುಕರಿಸಿ ತಮ್ಮ ಆಟಗಳಲ್ಲಿ ತಮ್ಮ ತಾಯಂದಿರು ಧರಿಸುವಂತಹ ವಸ್ತ್ರ ಧರಿಸಲು ಪ್ರಯತ್ನಿಸುತ್ತಾರೆ. ಅವರನ್ನು ನಕಲು ಮಾಡುತ್ತಾರೆ. ಹುಡುಗರು ತಂದೆಯರ ನಕಲು

ಮಾಡುತ್ತಾರೆ. ತಂದೆ – ತಾಯಂದಿರಲ್ಲಿ ಏನೆಲ್ಲ ಒಳಿತುಗಳು ಮತ್ತು ಕೆಡುಕುಗಳು ಇವೆಯೋ ಅವುಗಳನ್ನು ನಕಲು ಮಾಡುವರು.

ಅವರು ದೊಡ್ಡವರಾದ ನಂತರ ಇವು ಕೆಡುಕುಗಳು ಇವು ಒಳಿತುಗಳು ಎಂದು ಅವರಿಗೆ ಕಲಿಸಲಾಗುತ್ತದೆ. ಉದಾ: ಸುಳ್ಳಾಡುವುದು ತಪ್ಪು, ವಾಗ್ದಾನ ಈಡೇರಿಸುವುದು ಒಳಿತು ಎಂದೆಲ್ಲ ಕಲಿಸಲಾಗುತ್ತದೆ. ಆದರೆ ತಂದೆ – ತಾಯಂದಿರ ಸತ್ಯಸಂಧತೆಯ ಉನ್ನತ ಮಟ್ಟವನ್ನು ಕಾಣದ, ಮನೆಯ ಹಿರಿಯರು ವಾಗ್ದಾನ ಈಡೇರಿಸುವುದನ್ನು ಕಾಣದ ಒಬ್ಬ ಹುಡುಗ, ಪಾಠವೆಂಬ ನೆಲೆಯಲ್ಲಿ, ಸುಳ್ಳು ಹೇಳುವುದು ತಪ್ಪೆಂದೂ ವಾಗ್ದಾನ ಈಡೇರಿಸುವುದು ಒಳಿತೆಂದೂ ಕಲಿಯುವನು, ಆದರೆ ಕರ್ಮಪರವಾಗಿ ಅವುಗಳಂತೆ ನಡೆಯಲಿಕ್ಕಿಲ್ಲ. ಏಕೆಂದರೆ ತನ್ನ ಮನೆಯಲ್ಲಿ ಆ ಪಾಠಗಳಿಗೆ ವಿರುದ್ಧವಾದ ಚಲನವಲನಗಳನ್ನು ಕಂಡಿರುತ್ತಾನೆ. ಮಕ್ಕಳ ಅಭ್ಯಾಸಗಳು ಚಿಕ್ಕಂದಿನಿಂದಲೇ ಗಟ್ಟಿಗೊಳ್ಳುತ್ತವೆ. ಆದ್ದರಿಂದ ಅವರು ದೊಡ್ಡವರಾಗಿ ಅವುಗಳನ್ನು ಅಂಗೀಕರಿಸಲಿಕಿಲ್ಲ. ತಾಯಿ ನಮಾಝ್ ಅನುಷ್ಠಿಸುವುದರಲ್ಲಿ ಆಲಸ್ಯ ತೋರಿಸುತ್ತಿದ್ದೂ ತಂದೆ ಮನೆಗೆ ಬಂದು ನಮಾಝಿನ ಬಗ್ಗೆ ಕೇಳುವಾಗ, ತಾಯಿಯು ‘ಈಗ ಅನುಷ್ಠಿಸಿಲ್ಲ, ಅನುಷ್ಠಿಸುತ್ತೇನೆ’ ಎಂದು ಹೇಳುವುದನ್ನು ಮಗು ಕೇಳುವಾಗ, ‘ಇದು ಬಹಳ ಒಳ್ಳೆಯ ಉತ್ತರವಾಗಿದೆ. ನನ್ನೊಂದಿಗೆ ಯಾರಾದರೂ ನಮಾಝ್ ಅನುಷ್ಠಿಸುವುದರ ಬಗ್ಗೆ ಕೇಳಿದರೆ ನಾನು ಸಹ ಇದೇ ಉತ್ತರ ಕೊಡುವೆನು’ ಎಂದು ಯೋಚಿಸುತ್ತಾನೆ. ಅದೇ ರೀತಿ ತಾಯಿಯು ‘ಅನುಷ್ಠಿಸಲು ಮರೆತೆ’ ಅಥವಾ ‘ಅನುಷ್ಠಿಸಿದ್ದೇನೆ’ ಎಂದು ಸುಳ್ಳು ಹೇಳಿದರೆ, ಮನೆಯಲ್ಲಿ ತಾಯಿಯೊಂದಿಗೆ ದಿನಪೂರ್ತಿ ಇದ್ದ ಕಾರಣ ತಾಯಿ ನಮಾಝ್ ಅನುಷ್ಠಿಸಿರಲಿಲ್ಲ ಎಂದು ಮಗುವಿಗೆ ಗೊತ್ತಿರುತ್ತದೆ. ಮಗು ಈ ಉತ್ತರವನ್ನು ಮನಸ್ಸಲ್ಲಿ ಇರಿಸುತ್ತಾನೆ. ಅದೇ ರೀತಿ ತಂದೆಯ ತಪ್ಪಾದ ಮಾತುಗಳನ್ನೂ ಸರಿಯಲ್ಲದ ಉತ್ತರಗಳನ್ನೂ ಮಗು ಮನಸ್ಸಲ್ಲಿ ಇರಿಸುತ್ತಾನೆ. ಆದ್ದರಿಂದ ತಂದೆ – ತಾಯಂದಿರು ಮಕ್ಕಳಿಗೆ ಸರಿಯಲ್ಲದ ತರಬೇತಿ ನೀಡುವುದಾದರೆ ಅಥವಾ ತಪ್ಪಾದ ಕೃತ್ಯಗಳನ್ನು ಮಾಡುವುದಾದರೆ, ಅವರು ಮಕ್ಕಳನ್ನು ತಪ್ಪು ದಾರಿಗೆ ಕೊಂಡೊಯ್ಯುತ್ತಿದ್ದಾರೆ. ತಮ್ಮ ವರ್ತನೆಗಳ ಮೂಲಕ ಅವರಿಗೆ ತಪ್ಪಾದ ಶಿಕ್ಷಣ ನೀಡುತ್ತಿದ್ದಾರೆ. ಮಗು ದೊಡ್ಡವನಾದ ನಂತರ ಇವುಗಳನ್ನೇ ಮಾಡುವನು ಮತ್ತು ಇಂತಹ ಉತ್ತರಗಳನ್ನೇ ಕೊಡುವನು.

ಅದೇ ರೀತಿಯಲ್ಲಿ, ನೆರೆಹೊರೆಯವರ, ತಂದೆ – ತಾಯಿಯ, ಸ್ನೇಹಿತರ ತಪ್ಪಾದ ವರ್ತನೆಗಳು ಮಗುವಿನ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಭವಿಷ್ಯದಲ್ಲಿ ಕರ್ಮಸುಧಾರಣೆಯ ಮಟ್ಟ ಉನ್ನತಗೊಳ್ಳಲಿಕ್ಕಾಗಿ, ತಮ್ಮ ಸಂತತಿಗಳ, ಮಕ್ಕಳ ಯಥಾರ್ಥವಾದ ಕರ್ಮ ಸುಧಾರಣೆ ಮಾಡಬೇಕಾದರೆ, ತಂದೆ – ತಾಯಂದಿರು ತಮ್ಮ ಸ್ಥಿತಿಯ ಕಡೆಗೆ ಗಮನವಿಡಬೇಕಾಗುವುದು. ಕರ್ಮ ಪರವಾಗಿ ಸರಿಯಿರುವವರೊಡನೆ ತಮ್ಮ ಗೆಳೆತನ ಬೆಳೆಸ ಬೇಕಾಗುವುದು.

*

## (4)

## ಜುಮುಅ ಖುತ್‌ಬದ ಸಾರಾಂಶ (20/12/2013)

**ಮೂರನೇ ಕಾರಣ:**

ಕರ್ಮ ಸುಧಾರಣೆಯಲ್ಲಿ ಅಡಚಣೆ ಉಂಟಾಗಲು ಮೂರನೇ ಕಾರಣ, ತಕ್ಷಣದ ಅಥವಾ ಸಮೀಪ ಕಾಲದ ಕಾರ್ಯಗಳನ್ನು ದೃಷ್ಟಿಯಲ್ಲಿಡುವುದಾಗಿದೆ. ಆದರೆ ವಿಶ್ವಾಸದ ಕಾರ್ಯಗಳು ದೂರದ ಕಾರ್ಯಗಳಾಗಿವೆ. ಇವುಗಳು ಹೆಚ್ಚಾಗಿ ನಂತರದ ಜೀವಿತಕ್ಕೆ ಸಂಬಂಧಪಟ್ಟದ್ದಾಗಿವೆ. ನಾನು ಹೇಳಿದಂತೆ ಕರ್ಮಪರವಾದ ಸಂಗತಿಗಳು ಶೀಘ್ರಗತಿಯದ್ದಾಗಿರುತ್ತವೆ. ಇವುಗಳಿಗೆ ವಿಶ್ವಾಸಾದರ್ಶದೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ಮೇಲ್ನೋಟಕ್ಕೆ ಮನುಷ್ಯನಿಗೆ ತೋರುತ್ತದೆ. ಕೆಟ್ಟ ಕೆಲಸ ಮಾಡಿದರೆ ಅಲ್ಲಾಹನ ಏಕತ್ವದ ಬಗ್ಗೆಗಿನ ವಿಶ್ವಾಸಕ್ಕೆ ಯಾವುದೇ ಅಡ್ಡಿಯುಂಟಾಗದು ಎಂದು ಮನುಷ್ಯನು ಯೋಚಿಸುತ್ತಾನೆ. ಉದಾಹರಣೆಗೆ, ಚಿನ್ನದಲ್ಲಿ ಕಲಬೆರಕೆ ಮಾಡುವುದರಿಂದ ದೇವನ ಬಗ್ಗೆಗಿನ ತನ್ನ ವಿಶ್ವಾಸಕ್ಕೆ ಯಾವುದೇ ಅಡ್ಡಿಯುಂಟಾಗದು, ಆದರೆ ಅದರಿಂದ ತನ್ನ ಸಂಪಾದನೆ ಜಾಸ್ತಿಯಾಗುವುದು ಎಂದು ಅಕ್ಕಸಾಲಿಗ ಭಾವಿಸುತ್ತಾನೆ.

**ನಾಲ್ಕನೇ ಕಾರಣ:**

ಕರ್ಮಕ್ಕೆ ಅಭ್ಯಾಸದೊಂದಿಗೆ ಸಂಬಂಧವಿರುತ್ತದೆ ಎಂಬುದು ಕರ್ಮ ಸುಧಾರಣೆಯಲ್ಲಿ ಅಡಚನೆಯುಂಟಾಗಲು ನಾಲ್ಕನೇ ಕಾರಣವಾಗಿದೆ. ಅಭ್ಯಾಸಗಳ ಕಾರಣ ದೌರ್ಬಲ್ಯಗಳು ಉಂಟಾಗುತ್ತವೆ. ವಿಶೇಷವಾಗಿ ಧರ್ಮಕ್ಕೆ ಬೆಂಬಲವಾಗಿ ಸರ್ಕಾರ ನಿಲ್ಲದಿದ್ದರೆ ದೌರ್ಬಲ್ಯಗಳು ಉಂಟಾಗುತ್ತವೆ. ಆದರೆ ಇಸ್ಲಾಮಿನಲ್ಲಿ ನೈತಿಕ ಅಧಃಪತನವೆಂದು ಹೇಳಲ್ಪಡುವ ಮತ್ತು ಸುಧಾರಣೆ ಮಾಡಬೇಕೆಂದು ಇಸ್ಲಾಮ್ ಹೇಳುವ ಸಂಗತಿಗಳು, ಇಸ್ಲಾಮೀ ರಾಷ್ಟ್ರಗಳಲ್ಲಿ ಸಹ ನ್ಯಾಯದ ಕೊರತೆ ಮತ್ತು ಕಾಪಟ್ಯದ ಕಾರಣ ಶೋಚನೀಯವಾಗಿದೆ. ಅದೇ ರೀತಿ ಸುಧಾರಣೆ ಮಾಡಬೇಕಾದ ಕೆಲವು ಸಂಗತಿಗಳನ್ನು ಅನಿಸ್ಲಾಮಿಕ ರಾಷ್ಟ್ರಗಳು ದುಷ್ಕರ್ಮ ಮತ್ತು ನೈತಿಕ ಅಧಃಪತನವೆಂದು ಭಾವಿಸುವುದಿಲ್ಲ. ಆದ್ದರಿಂದ ಕೆಲವು ಸಂಗತಿಗಳ ಕರ್ಮ ಸುಧಾರಣೆ ಆಗುವುದಿಲ್ಲ.

ಒಟ್ಟಿನಲ್ಲಿ ಕರ್ಮ ಸುಧಾರಣೆಯಲ್ಲಿ ಸರ್ಕಾರದ ಒಂದು ಪಾತ್ರವಿದೆ. ಕರ್ಮ ಸುಧಾರಣೆ ಕುರಿತು ಎಲ್ಲಿ ಧರ್ಮ ಮತ್ತು ಸರ್ಕಾರದ ಅಭಿಪ್ರಾಯ ಒಂದಾಗಿರುತ್ತದೋ ಮತ್ತು ಎಲ್ಲಿ ಕರ್ಮಸುಧಾರಣೆ ಅದರ ಪ್ರಕಾರ ವಾಗಿರುತ್ತದೋ ಅಲ್ಲಿ ಅಭ್ಯಾಸಗಳನ್ನು ಕಾನೂನಿನ ಮೂಲಕ ಕೊನೆಗೊಳಿಸಬಹುದಾಗಿದೆ. ಆದರೆ ಸರ್ಕಾರದ ಕಾನೂನು ಕರ್ಮಸುಧಾರಣೆಗೆ ಸಹಾಯಕವಲ್ಲದ ಪ್ರದೇಶದಲ್ಲಿ ಅಭ್ಯಾಸಗಳನ್ನು ಬದಲಾಯಿಸಲಾಗದು. ಅಲ್ಲಿ ಕರ್ಮಪರವಾದ ಬಲಹೀನತೆಗಳು ಸಮಾಜದ ಒಣಗದ ಹುಣ್ಣಾಗಿ ಬಿಡುತ್ತದೆ. ಸ್ವಾತಂತ್ರ್ಯದ ಹೆಸರಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹಲವು ತರಹದ ಕರ್ಮಪರವಾದ ದೌರ್ಬಲ್ಯವನ್ನು ಲೋಕದ ಎಲ್ಲ ಕಡೆ ಹರಡಲಾಗುತ್ತಿದೆ. ಇಂತಹ ವಾತಾವರಣದಲ್ಲಿ ಇರುವವರು, ವಾತಾವರಣದ ಭಾಗವಾದ್ದರಿಂದ ನಿರಂತರ ಇಂತಹ ಸಂಗತಿಗಳನ್ನು ನೋಡಿ ಕೆಲವು ಕರ್ಮಪರವಾದ ಬಲಹೀನತೆಗಳ ಅಭ್ಯಾಸ ಹೊಂದುತ್ತಾರೆ. ಮಕ್ಕಳ, ಯುವಕರ ಮತ್ತು ಯುವತಿಯರಲ್ಲಿ ಸಹ ಉದ್ದೇಶಪೂರ್ವಕವಲ್ಲದೇ, ಈ ಬಲಹೀನತೆಗಳು ಮನೆಮಾಡಿಕೊಳ್ಳುತ್ತಿವೆ. ಅಭ್ಯಾಸಗಳು ಗಟ್ಟಿಗೊಂಡ ನಂತರ ಅವುಗಳನ್ನು ಉಪೇಕ್ಷಿಸುವುದು ಸುಲಭವಲ್ಲ. ಉದಾಹರಣೆಗೆ, ಮಾದಕ ವಸ್ತುಗಳ ಸೇವನೆಯ ಚಟವನ್ನು ಉಪೇಕ್ಷಿಸುವುದು ಕಷ್ಟಕರವಾದುದಾಗಿದೆ. ಒಬ್ಬ ವ್ಯಕ್ತಿ ತ್ರಿತ್ವದ ವಿಶ್ವಾಸವನ್ನು ತ್ಯಾಗ ಮಾಡಿ ಏಕದೇವ ವಿಶ್ವಾಸಿಯಾಗಬಹುದು. ಏಕದೇವ ವಿಶ್ವಾಸಿಯಾದ ಮರುದಿನ ಏಕದೇವನ ಸ್ಥಾನದಲ್ಲಿ ಮೂರು ದೇವರ ಚಿಂತೆ ಖಂಡಿತ ಬರಲಿಕ್ಕಿಲ್ಲ. ಆದರೆ ಮಾದಕ ದ್ರವ್ಯದ ಚಟವಿದ್ದವನಿಗೆ ಮಾದಕ ವಸ್ತು ಸಿಗಬೇಕೆಂಬ ಆಶೆ ಖಂಡಿತ ಬರಬಹುದು. ಜೀವನ ಪೂರ್ತಿಯ ವಿಶ್ವಾಸವನ್ನು ಒಬ್ಬ ವ್ಯಕ್ತಿ ಬಿಡಬಹುದು, ಆದರೆ ಕೆಲವೇ ತಿಂಗಳ ಅಥವಾ ಕೆಲವೇ ವರ್ಷಗಳ ಮಾದಕ ವಸ್ತುಗಳ ಚಟದ ಕಾರಣ, ಮಾದಕ ಸೇವನೆಯಲ್ಲಿ ಸ್ವಲ್ಪ ಕೊರತೆ ಉಂಟಾದರೆ ಅಸ್ವಸ್ಥನಾಗುತ್ತಾನೆ. ಸಿಗರೇಟು ಸೇದುವವರಲ್ಲಿ ಕೆಲವರು ತಮ್ಮ ಕುಟುಂಬವನ್ನೂ ತಮ್ಮ ಸಹೋದರ ಸಹೋದರಿಯರನ್ನೂ ತಮ್ಮ ತಂದೆ – ತಾಯಿಯನ್ನೂ ಪತ್ನಿ ಮಕ್ಕಳನ್ನೂ ಬಿಟ್ಟು ಜಮಾಅತಿನಲ್ಲಿ ಪ್ರವೇಶಿಸಿದ್ದಾರೆ. ಅವರು ತ್ಯಾಗಗಳನ್ನು ಮಾಡಿ ಅಹ್ಮದಿಯಾದರು. ಆದರೆ ಸಿಗರೇಟು ಉಪೇಕ್ಷಿಸಲು ಹೇಳಿದರೆ ನೂರಾರು ನೆಪಗಳನ್ನು ಹುಡುಕುತ್ತಾರೆ. ಕೆಲವರ ಹೊಟ್ಟೆ ಉಬ್ಬರಿಸುತ್ತದೆ, ಕೆಲವರಿಗೆ ಮಾದಕ ಸೇವನೆ ಮಾಡದಿದ್ದರೆ ನಿದ್ದೆ ಬರುವುದಿಲ್ಲ, ಯೋಚಿಸುವ ಮತ್ತು ಚಿಂತಿಸುವ ಸಾಮರ್ಥ್ಯ ಕೊನೆಗೊಂಡಿದೆ ಎಂದು ಕೆಲವರು ಭಾವಿಸುತ್ತಾರೆ. ಅದಕ್ಕಾಗಿ ಅವರು ಅಸ್ವಸ್ಥರಾಗುತ್ತಾರೆ. ಇದು

ಅಹ್ಮದಿಯತಿನಲ್ಲಿ ಪ್ರವೇಶಿಸಿದವರ ಮಾತ್ರ ಸ್ಥಿತಿಯಲ್ಲ; ಬದಲಾಗಿ ಪ್ರತಿಯೊಬ್ಬ ವ್ಯಕ್ತಿಯೂ ಹೀಗೆ ಆಗಬಹುದು. ಕೆಲವರು ಬಹಳ ಒಳ್ಳೆಯ ಕೆಲಸಗಳನ್ನೂ ತ್ಯಾಗಗಳನ್ನೂ ಮಾಡುತ್ತಿರುತ್ತಾರೆ; ಆದರೆ ಸಣ್ಣದಾದ ಅಭ್ಯಾಸ ಬಿಡಲಾಗುವುದಿಲ್ಲ.

**ಐದನೇ ಕಾರಣ:**

ಕರ್ಮ ಸುಧಾರಣೆಯಲ್ಲಿ ತಡೆ ಉಂಟುಮಾಡುವ ಐದನೇ ಕಾರಣ ಪತ್ನಿ ಮಕ್ಕಳಾಗಿದ್ದಾರೆ. ಕೆಲವು ಬಾರಿ ಪತ್ನಿ ಮಕ್ಕಳ ಕಷ್ಟತೆಗಳು ವ್ಯಕ್ತಿಯನ್ನು ವಿಪತ್ತಿನಲ್ಲಿ ಸಿಲುಕಿಸಿ ಬಿಡುತ್ತದೆ. ಉದಾಹರಣೆಗೆ, ಇತರರ ಸಂಪತ್ತು ಅಪಹರಿಸಬಾರದು ಎಂಬುದು ಇಸ್ಲಾಮಿನ ಅಧ್ಯಾಪನೆಯಾಗಿದೆ. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಬಳಿ ಯಾವುದೇ ಪುರಾವೆ ಮತ್ತು ಸಾಕ್ಷಿಯಿಲ್ಲದೆ ನಿರ್ದಿಷ್ಟ ಹಣವಿರಿಸುವುದಾದರೆ, ಯಾರ ಬಳಿ ಅಮಾನತ್ ಇರಿಸಲಾಗಿದೆಯೋ ಅವನ ಉದ್ದೇಶದಲ್ಲಿ ಕೆಲವು ಬಾರಿ ತನ್ನ ಪತ್ನಿ ಮಕ್ಕಳ ಆವಶ್ಯಕತೆಗಳ ಕಾರಣ ಕಳಂಕ ಉಂಟಾಗುತ್ತದೆ. ಅವನು ಹೀಗೆ ಯೋಚಿಸುತ್ತಾನೆ: "ನನ್ನ ಪತ್ನಿ ನನ್ನಿಂದ ಸ್ವಲ್ಪ ಹಣ ಕೇಳಿದ್ದಳು. ಆಗ ನನ್ನ ಬಳಿ ಹಣವಿರದಿದ್ದ ಕಾರಣ ಅವಳ ಬೇಡಿಕೆ ಈಡೇರಿಸಿರಲಿಲ್ಲ. ನನ್ನ ಮಕ್ಕಳು ಯಾವುದೋ ವಸ್ತುವಿಗೆ ಹಣ ಕೇಳಿದ್ದರು, ಆಗ ನನ್ನಿಂದ ಕೊಡಲಾಗಿರಲಿಲ್ಲ. ಈಗ ಸಂದರ್ಭ ಒದಗಿಬಂದಿದೆ. ನಾನು ಈ ಹಣವನ್ನು ಅಪಹರಿಸಿ ನನ್ನ ಪತ್ನಿ ಮಕ್ಕಳ ಬೇಡಿಕೆಗಳನ್ನು ಈಡೇರಿಸಬಹುದು" ಅಥವಾ "ಮಕ್ಕಳ ರೋಗದ ಕಾರಣ ಚಿಕಿತ್ಸೆಗಾಗಿ ಹಣದ ಆವಶ್ಯಕತೆ ಇದೆ. ಈ ಅಮಾನತಿನಿಂದ ಫಲ ಪಡೆದು, ಈ ಹಣವನ್ನು ಖರ್ಚು ಮಾಡಿ ನಾನು ಅವರ ಚಿಕಿತ್ಸೆ ಮಾಡಿಸುತ್ತೇನೆ. ಹಣ ವಾಪಾಸ್ಸು ಕೊಡಬೇಕೋ ಬೇಡವೋ ಎಂದು ಆಮೇಲೆ ನೋಡುವ." ಅದೇ ರೀತಿ ಪತ್ನಿ ಮಕ್ಕಳಿಗೆ ಸಂಬಂಧಿಸಿದ ಬೇರೆ ಯಾವುದಾದರೂ ಉದ್ದೇಶಕ್ಕಾಗಿ ವ್ಯಕ್ತಿ ಇತರರ ಹಣವನ್ನು ದೋಚುತ್ತಾನೆ. ಇದು ಕೇವಲ ಹಣಕಾಸಿನ ವಿಷಯವಲ್ಲ. ಈಗಿನ ಸ್ವತಂತ್ರ ಮತ್ತು ಪ್ರಗತಿಪರ ಸಮಾಜದಲ್ಲಿ, ಕೆಲವು ತಂದೆ – ತಾಯಂದಿರು ಹೀಗೆ ಮಾಡುತ್ತಾರೆ. ಬಡದೇಶಗಳಲ್ಲಿಯೂ ಇಂತಹ ಸಂಗತಿಗಳು ಮುಂದೆ ಬರುತ್ತವೆ. ಅಕ್ಕರೆ ಮತ್ತು ಪ್ರೀತಿಯ ಕಾರಣದಿಂದ ಮಕ್ಕಳನ್ನು ಇಸ್ಲಾಮಿನ ಅಧ್ಯಾಪನೆಗಳನ್ನು ಪಾಲಿಸುವಂತೆ ಮಾಡಿಸಲು ಪ್ರಯತ್ನಿಸುವುದಿಲ್ಲ. ನಾನು ಹೇಳುತ್ತಿರುವ ಸಂಗತಿಗಳು ನಮ್ಮ ಅಹ್ಮದೀ ಸಮಾಜದಲ್ಲಿ ಆಗಿಂದಾಗ್ಗೆ ಕಂಡು ಬರುತ್ತಿವೆ ಎಂದು ಬಹಳ ದುಃಖದಿಂದ

ಹೇಳುತ್ತಿದ್ದೇನೆ. ಒಬ್ಬನು ಮತ್ತೊಬ್ಬನ ಅಮಾನತ್ ಉಪಯೋಗಿಸುತ್ತಾನೆ; ಒಬ್ಬನು ಮತ್ತೊಬ್ಬನಿಗೆ ಯಾವುದಾದರೂ ರೀತಿಯ ಹಣಕಾಸಿನ ಮೋಸ ಮಾಡುತ್ತಾನೆ; ಒಬ್ಬನು ಅನಾಥನ ಸಂಪತನ್ನು ಪೂರ್ತಿಯಾಗಿ ಹಿಂತಿರುಗಿಸುವುದಿಲ್ಲ. ಖಝಾದಲ್ಲಿ (ಜಮಾಅತಿನ ನ್ಯಾಯ ತೀರ್ಮಾನದ ವ್ಯವಸ್ಥೆ) ಕೆಲವು ವಿಷಯಗಳು ಅಥವಾ ದೂರುಗಳು ಬರುತ್ತಿವೆ. ಉದಾಹರಣೆಗೆ, ಸಂಪನ್ನ ದೇಶದಲ್ಲಿ ಇರುವ ವ್ಯಕ್ತಿ ತನ್ನ ಮಗಳ ವಿವಾಹ ಪಾಕಿಸ್ತಾನದವನಿಗೆ ಮಾಡಿಸಿ ಕೊಡುತ್ತಾನೆ. ಮೊದಲ ದಿನವೇ ಅಳಿಯನಿಗೆ ಹೀಗೆ ಹೇಳುತ್ತಾನೆ: 'ನಾನು ನನ್ನ ಮಗಳನ್ನು ಬಹಳ ಅಕ್ಕರೆಯಿಂದ ಬೆಳೆಸಿದ್ದೇನೆ. ಅವಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯವಿದೆ. ಅವಳ ಮೇಲೆ ಯಾವುದೇ ರೀತಿಯ ಪ್ರತಿಬಂಧ ಹೇರಬಾರದು'. ಮಗಳ ಬುದ್ಧಿ ತಂದೆಯ ಪ್ರೇರಣೆಯಿಂದ ಆಕಾಶಕ್ಕೇರಿರುತ್ತದೆ. ಗಂಡನಿಗೆ ಯಾವುದೇ ಬೆಲೆ ಕೊಡುವುದಿಲ್ಲ. ಹೆಂಡತಿ ಗಂಡನ ಹಕ್ಕನ್ನು ಈಡೇರಿಸಿ ತನ್ನ ಮನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕೆಂಬುದು ಇಸ್ಲಾಮಿನ ಪಾಠವಾಗಿದೆ. ಇದು ಅವಳ ಕರ್ತವ್ಯಗಳಲ್ಲಿ ಸೇರಿದ್ದಾಗಿದೆ. ಕೆಲವು ಬಾರಿ ಹುಡುಗನು ಪಾಕಿಸ್ತಾನದಿಂದ ಹುಡುಗಿಯನ್ನು ವಿವಾಹ ಮಾಡಿ ಕರೆತರುತ್ತಾನೆ. ಅನಂತರ ಅವಳನ್ನು ದೌರ್ಜನ್ಯದ ಬೀಸುಕಲ್ಲಲ್ಲಿ ಪುಡಿ ಮಾಡುತ್ತಾ ಹೋಗುತ್ತಾನೆ. ಹುಡುಗಿ ಎಲ್ಲವನ್ನು ಸಹಿಸಬೇಕೆಂದೂ ಪುರುಷನಾದವನು ಹೀಗೆಯೇ ಇರುತ್ತಾನೆ ಎಂದೂ ಹುಡುಗನ ತಂದೆ – ತಾಯಂದಿರು ಹೇಳುತ್ತಾರೆ. ಮಕ್ಕಳೊಂದಿಗಿನ ಅಕ್ಕರೆ ತಂದೆ ತಾಯಂದಿರ ಕರ್ಮಪರವಾದ ಅವಸ್ಥೆಯನ್ನು ನಾಶಪಡಿಸುವುದರೊಂದಿಗೆ, ಮನೆಗಳನ್ನೂ ನಾಶ ಪಡಿಸುತ್ತದೆ.

**ಆರನೇ ಕಾರಣ:**

ಮನುಷ್ಯನು ಸ್ಥಿರವಾಗಿ ತನ್ನ ಮೇಲ್ನೋಟ ವಹಿಸುವುದಿಲ್ಲ ಎಂಬುದಾಗಿದೆ ಕರ್ಮ ಸುಧಾರಣೆಯಲ್ಲಿ ತಡೆಯುಂಟಾಗಲು ಆರನೇ ಕಾರಣ. ಕರ್ಮ ಸುಧಾರಣೆ ಆಗಬೇಕಾದರೆ ವ್ಯಕ್ತಿ ತನ್ನ ಕರ್ಮದ ಬಗ್ಗೆ ಯಾವಾಗಲೂ ಶ್ರದ್ಧೆವಹಿಸಬೇಕು.

ಈ ಕೆಲಸದ ಪರಿಣಾಮ ಒಳ್ಳೆಯದೇ, ಕೆಟ್ಟದೇ? ಈ ಕೆಲಸ ಮಾಡಲು ನನಗೆ ಅನುಮತಿ ಇದೆಯೇ, ಇಲ್ಲವೇ? ಪವಿತ್ರ ಖುರ್ಆನಿನ ಏಳುನೂರು ಆಜ್ಞೆಗಳನ್ನು ಪಾಲಿಸಿರಿ ಎಂಬ ಹಝ್ರತ್ ಮಸೀಹ್ ಮೌಊದ್‌ರ(ಅ) ಮಾತನ್ನು ಪಾಲಿಸುತ್ತಿದ್ದೇನೆಯೇ? ನಾನು ಅವುಗಳಿಂದ

ದೂರ ಹೋಗುತ್ತಿದ್ದೇನೆಯೇ? ಎಂದೆಲ್ಲ ಪ್ರತಿಯೊಂದು ಕೆಲಸದ ವೇಳೆ ಯೋಚಿಸಬೇಕು. ಉದಾ: ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕೆಂಬುದು ಒಂದು ಮುಖ್ಯವಾದ ಆಜ್ಞೆಯಾಗಿದೆ. ಒಬ್ಬ ವ್ಯಾಪಾರಿಗೂ ಈ ಆದೇಶ ಅನ್ವಯಿಸುತ್ತದೆ. ಕೆಲಸ ಮಾಡುವ ಕಾರ್ಮಿಕನಿಗೂ ಈ ಆದೇಶವಿದೆ. ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕನಾಗು ಎಂಬ ಆದೇಶ ಪ್ರತಿಯೊಬ್ಬನಿಗೂ ಅನ್ವಯಿಸುತ್ತದೆ. ಪ್ರಾಮಾಣಿಕತೆಯಿಂದ ಇರಬೇಕೆಂಬ ಆದೇಶ ಒಬ್ಬ ವ್ಯಾಪಾರಿಯ ಕಣ್ಣ ಮುಂದೆ ಹಲವು ಬಾರಿ ಬರುತ್ತದೆ. ಆದರೆ ಒಬ್ಬ ಅಪರಿಚಿತನಾದ ಗ್ರಾಹಕನು ಬರುವಾಗ ಅವನಿಗೆ ಕಡಿಮೆ ಗುಣಮಟ್ಟದ ವಸ್ತು ಕೊಡುತ್ತಾನೆ ಅಥವಾ ಅಧಿಕ ಬೆಲೆ ವಸೂಲು ಮಾಡುತ್ತಾನೆ ಅಥವಾ ನಿಶ್ಚಿತ ಬೆಲೆಗೆ ತೂಕ ಕಡಿಮೆ ಮಾಡಿ ಕೊಡುತ್ತಾನೆ. ಒಬ್ಬ ಅಹ್ಮದೀ ವ್ಯಾಪಾರಿಯ ನೆಲೆ ಯಾವಾಗಲೂ ಒಳ್ಳೆಯದಾಗಿರಬೇಕು. ಅವರು ಮಾಡುವ ತೂಕ ಸರಿಯಾಗಿರಬೇಕು. ಯಾವುದಾದರೂ ಕೊರತೆಯಿದ್ದರೆ ಗ್ರಾಹಕನಿಗೆ ತಿಳಿಸಬೇಕು. ಲಾಭ ನ್ಯಾಯಯುತ ಮತ್ತು ಕಡಿಮೆಯಾಗಿರಬೇಕು. ಇದರಿಂದ ವ್ಯಾಪಾರದಲ್ಲಿ ಅನುಗ್ರಹ ಉಂಟಾಗುತ್ತದೆ; ಕೊರತೆ ಉಂಟಾಗುವುದಿಲ್ಲ. ಅದೇ ರೀತಿ ಪ್ರತಿಯೊಂದು ಮೈದಾನದಲ್ಲಿ ಅಹ್ಮದಿ ತನ್ನ ಪ್ರಾಮಾಣಿಕತೆಯ ಸೌಂದರ್ಯವನ್ನು ಪ್ರಕಟಿಸಬೇಕು.

**ಏಳನೇ ಕಾರಣ:**

ಮನುಷ್ಯನ ಸಂಬಂಧಗಳು ಮತ್ತು ವರ್ತನೆಗಳು ಮೇಲುಗೈ ಸಾಧಿಸುತ್ತವೆ ಹಾಗೂ ದೇವ ಭಯದಲ್ಲಿ ಕೊರತೆ ಉಂಟಾಗುತ್ತದೆ ಎಂಬುದಾಗಿದೆ ಕರ್ಮ ಸುಧಾರಣೆಯಲ್ಲಿ ತಡೆಯುಂಟಾಗಲು ಏಳನೇ ಕಾರಣ.

ಕೆಲವು ಬಾರಿ ದುರಾಸೆ, ಗೆಳೆತನದ ಸಂಬಂಧಗಳು, ಬಂಧುತ್ವ, ಜಗಳ, ದ್ವೇಷ, ಅಸೂಯೆ ಇತ್ಯಾದಿಗಳು ಕರ್ಮಗಳ ಒಳ್ಳೆಯ ಭಾಗವನ್ನು ಪ್ರಕಟಿಸಲು ಬಿಡುವುದಿಲ್ಲ. ಉದಾಹರಣೆಗೆ, ಅಮಾನತಿನ ಬಗ್ಗೆ ಅಲ್ಲಾಹನು ಆದೇಶ ನೀಡಿದ್ದಾನೆ ಎಂಬ ದೃಷ್ಟಿಯಿಂದ ಮನುಷ್ಯನು ನೋಡುವುದಿಲ್ಲ. ಬದಲಾಗಿ, ಈ ವಿಶೇಷವಾದ ಸಂದರ್ಭದಲ್ಲಿ ಅಮಾನತಿನ ಕಾರಣದಿಂದ ಅವನ ಸ್ನೇಹಿತರ ಮತ್ತು ಶತ್ರುಗಳ ಮೇಲೆ ಎಂತಹ ಪ್ರಭಾವ ಬೀರುವುದು ಎಂಬ ದೃಷ್ಟಿಯಿಂದ ನೋಡುತ್ತಾನೆ. ಅದೇ ರೀತಿಯಲ್ಲಿ, ಸತ್ಯ ಹೇಳುವುದನ್ನು ಅಲ್ಲಾಹನ ಆದೇಶ ಎಂಬ ದೃಷ್ಟಿಯಿಂದ ನೋಡುವುದಿಲ್ಲ. ಬದಲಾಗಿ,

ಸತ್ಯಸಂಧತೆಯಿಂದ ಅವನ ಸ್ನೇಹಿತರಿಗೆ ಏನಾದರೂ ನಷ್ಟವುಂಟಾಗುವುದೇ ಎಂಬ ದೃಷ್ಟಿಯಿಂದ ನೋಡುತ್ತಾನೆ. ಒಬ್ಬ ವ್ಯಕ್ತಿ ಮತ್ತೊಬ್ಬನ ವಿರುದ್ಧ ಸಾಕ್ಷ್ಯ ನುಡಿಯುತ್ತಾನೆ. ಏಕೆಂದರೆ ಅವನು ಬೇರೊಂದು ಸಂದರ್ಭದಲ್ಲಿ ಈ ವ್ಯಕ್ತಿಗೆ ನಷ್ಟ ಉಂಟುಮಾಡಿರುತ್ತಾನೆ. ಸೇಡು ತೀರಿಸಲು ತನಗೆ ತಕ್ಕುದಾದ ಸಂದರ್ಭ ಒದಗಿ ಬಂದಿದೆ ಎಂದು ಯೋಚಿಸಿ ಅವನ ವಿರುದ್ಧ ಸಾಕ್ಷಿಯಾಗಿ ನಿಲ್ಲುತ್ತಾನೆ. ಒಟ್ಟಿನಲ್ಲಿ ದೇವ ಭಯವಿಲ್ಲದ ಕಾರಣದಿಂದ ಕರ್ಮಗಳಲ್ಲಿ ದೌರ್ಬಲ್ಯ ಉಂಟಾಗುತ್ತದೆ.

**ಎಂಟನೇ ಕಾರಣ:**

ಕುಟುಂಬದ ಸುಧಾರಣೆಯಾಗುವ ತನಕ ಕರ್ಮ ಸುಧಾರಣೆ ಬಹಳ ಕಷ್ಟಕರವಾದುದಾಗಿದೆ ಎಂಬುದು ಕರ್ಮ ಸುಧಾರಣೆಯಲ್ಲಿ ತಡೆ ಉಂಟಾಗಲು ಎಂಟನೇ ಕಾರಣ.

ಉದಾಹರಣೆಗೆ, ಪತ್ನಿ ಮಕ್ಕಳು ಪೂರ್ಣವಾಗಿ ಸಹಕರಿಸದೆ ಪ್ರಾಮಾಣಿಕತೆ ಸಂಪೂರ್ಣವಾಗಲಾರದು ಅಥವಾ ಅದರ ಉನ್ನತ ಮಟ್ಟ ನೆಲೆನಿಲ್ಲದು. ಮನೆಯ ಮಾಲಿಕ ಎಷ್ಟೇ ಹಲಾಲಾದ (ಧರ್ಮಬದ್ಧವಾದ) ಹಣ ಸಂಪಾದಿಸುವವನಾಗಿದ್ದರೂ ಅವನ ಪತ್ನಿ ಯಾವುದಾದರೂ ರೀತಿಯಲ್ಲಿ ನೆರೆಹೊರೆಯವರನ್ನು ಲೂಟಿ ಮಾಡುತ್ತಿದ್ದರೆ, ಯಾವುದಾದರೂ ರೀತಿಯಲ್ಲಿ ಯಾರಿಗಾದರೂ ನಷ್ಟ ಉಂಟುಮಾಡುವುದಾದರೆ, ಸಂಪತ್ತು ಕಸಿಯಲು ಪ್ರಯತ್ನಿಸುವುದಾದರೆ ಅಥವಾ ಅವನ ಮಗನು ಲಂಚದ ಹಣ ಮನೆಗೆ ತರುವುದಾದರೆ, ಮನೆಯ ಜೀವನಾಧಾರ ಧರ್ಮಬದ್ಧವಾಗುವುದಿಲ್ಲ. ವಿಶೇಷವಾಗಿ ಕುಟುಂಬದವರೆಲ್ಲ ಒಟ್ಟಿಗೆ ಇರುವ ಮನೆಗಳಲ್ಲಿ, ಸಂಯುಕ್ತ ಕುಟುಂಬದಲ್ಲಿ ಹೀಗಾಗುತ್ತದೆ. ಇತರ ಕರ್ಮಗಳ ಸ್ಥಿತಿಯೂ ಇದೇ ಆಗಿದೆ. ಮನೆಯವರೆಲ್ಲರೂ ಸೇರಿ ಕರ್ಮಗಳನ್ನು ಉತ್ತಮಗೊಳಿಸಲು ಪ್ರಯತ್ನಿಸುವ ವರೆಗೆ ಒಬ್ಬರು ಮತ್ತೊಬ್ಬರನ್ನು ಯಾವಾಗಲಾದರೂ ಪ್ರಭಾವಿತ ಗೊಳಿಸುವರು. ಪತ್ನಿ ಒಳ್ಳೆಯವಳಾಗಿದ್ದರೂ ಗಂಡನು ಧರ್ಮಬದ್ಧವಾದ ಹಣ ಸಂಪಾದಿಸುವುದಿಲ್ಲವಾದರೆ, ಮನೆಯಲ್ಲಿ ಅದರ ಪ್ರಭಾವವಿರುವುದು. ನಮಾಝಿನ ಕಡೆಗೆ ತಂದೆಗೆ ಶ್ರದ್ಧೆಯಿದ್ದೂ ತನ್ನ ಮಕ್ಕಳಿಗೆ ಹೇಳಿ ಕೊಡುವುದಿಲ್ಲವಾದರೆ ಅಥವಾ ತಂದೆ ಹೇಳುತ್ತಾನೆ ಆದರೆ ತಾಯಿ ಹೇಳುವುದಿಲ್ಲ ಅಥವಾ ತಾಯಿ ಹೇಳಿಕೊಡುತ್ತಾಳೆ ಆದರೆ ತಂದೆ ನಮಾಝ್

ಅನುಷ್ಠಿಸುವುದಿಲ್ಲವಾದರೆ ಮಕ್ಕಳು ಅದನ್ನು ಅನುಕರಿಸುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: قُوا أَنْفُسَكُمْ وَأَهْلِيكُمْ نَارًا

**“ಖೂ ಅನ್‌ಫುಸಕುಮ್ ವ ಅಹ್‌ಲೀಕುಮ್ ನಾರಾ”** ಎಂದರೆ, **“ನೀವು ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ನರಕಾಗ್ನಿಯಿಂದ ರಕ್ಷಿಸಿರಿ.”**(66:7) ತಮ್ಮನ್ನು ಮಾತ್ರ ನರಕದ ಬೆಂಕಿಯಿಂದ ಸುರಕ್ಷಿತಗೊಳಿಸುವುದು ಸಾಕಾಗುವುದಿಲ್ಲ. ಬದಲಾಗಿ, ಇತರರನ್ನೂ ರಕ್ಷಿಸುವುದು ನಿಮ್ಮ ಕರ್ತವ್ಯವಾಗಿದೆ. ಇತರರನ್ನು ರಕ್ಷಿಸುವುದಿಲ್ಲವಾದರೆ ಅದು ಒಂದು ದಿನ ನಿಮ್ಮನ್ನೂ ಮುಳುಗಿಸುವುದು.

ಈ ಎಂಟು ಸಂಗತಿಗಳಲ್ಲದೆ ಕೆಲವು ಕಾರಣಗಳು ಕರ್ಮ ಸುಧಾರಣೆಯಲ್ಲಿ ತಡೆಯುಂಟು ಮಾಡುತ್ತಿರಬಹುದು. ನಾನು ಹೇಳಿದಂತೆ ಇವು ಕೆಲವು ಮುಖ್ಯವಾದ ಸಂಗತಿಗಳಾಗಿವೆ. ಇವುಗಳ ಬಗ್ಗೆ ಗಮನ ಹರಿಸುವುದಾದರೆ, ಸುಮಾರು ಎಲ್ಲ ಸಂಗತಿಗಳು ಈ ಎಂಟು ಸಂಗತಿಗಳಲ್ಲಿ ಬರುವುವು.

*

## (5)

## ಜುಮುಅ ಖುತ್‌ಬದ ಸಾರಾಂಶ (10/01/2014)

### ಕರ್ಮಸುಧಾರಣೆಗೆ ಮೂರು ಸಂಗತಿಗಳ ಆವಶ್ಯಕತೆ

**1. ಇಚ್ಛಾಶಕ್ತಿ. 2. ಅರಿವಿನ ಶಕ್ತಿ. 3. ಕರ್ಮಶಕ್ತಿ.**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳುತ್ತಾರೆ: ಹಝ್ರತ್ ಮುಸ್ಲಿಹ್ ಮೌಊದ್(ರ) ಬಹಳ ಉತ್ತಮ ರೀತಿಯಲ್ಲಿ ಇವುಗಳನ್ನು ಹೀಗೆ ವಿವರಿಸಿದ್ದಾರೆ: ಕರ್ಮ ಸುಧಾರಣೆಗಾಗಿ ಮನುಷ್ಯನಲ್ಲಿ ಮೂರು ಸಂಗತಿಗಳು ಉಂಟಾದರೆ ಮಾತ್ರ ಯಶಸ್ಸು ಗಳಿಸಲಾಗುವುದು. ಆ ಮೂರು ಸಂಗತಿಗಳು ಇವುಗಳಾಗಿವೆ: ಒಂದು, ಇಚ್ಛಾಶಕ್ತಿ. ಎರಡು, ಸರಿಯಾದ ಮತ್ತು ಪರಿಪೂರ್ಣವಾದ ಅರಿವು. ಮೂರು, ಕರ್ಮಶಕ್ತಿ. ಆದರೆ ಮೂಲ ಶಕ್ತಿಗಳು ಎರಡೇ ಆಗಿವೆ, ಇಚ್ಛಾಶಕ್ತಿ ಮತ್ತು ಕರ್ಮಶಕ್ತಿ. ಮಧ್ಯೆ ಇರುವ ಶಕ್ತಿ (ಎಂದರೆ, ಸರಿಯಾದ ಮತ್ತು ಪರಿಪೂರ್ಣವಾದ ಅರಿವು) ಈ ಎರಡು ಮೂಲ ಶಕ್ತಿಗಳ ಮೇಲೆ ಪ್ರಭಾವ ಬೀರುತ್ತದೆ.

ಒಟ್ಟಿನಲ್ಲಿ, ಕರ್ಮ ಸುಧಾರಣೆಯ ಮೇಲೆ ಪ್ರಭಾವ ಬೀರುವ ಎರಡು ಮೂಲ ಸಂಗತಿಗಳು ಇಚ್ಛಾಶಕ್ತಿ ಮತ್ತು ಕರ್ಮಶಕ್ತಿ ಆಗಿವೆ ಎಂದು ಮೊದಲು ಮನವರಿಕೆ ಮಾಡಬೇಕಾಗಿದೆ. ಇದಕ್ಕಾಗಿ ನಾವು ನಮ್ಮ ಇಚ್ಛಾಶಕ್ತಿಯನ್ನು ಸುದೃಢಗೊಳಿಸಬೇಕಾಗಿದೆ. ಕರ್ಮಶಕ್ತಿಯ ಕೊರತೆಯನ್ನು ದೂರ ಮಾಡಬೇಕಿದೆ. ಯಾವುದೇ ಕೆಡುಕನ್ನು ತಡೆಯಲು ನಮಗೆ ಬಲವಾದ ಇಚ್ಛೆ ಇದ್ದರೆ ಮಾತ್ರ ಕೆಡುಕುಗಳು ತಡೆಯಲ್ಪಡುವುವು. ಇಚ್ಛಾಶಕ್ತಿ ಫಲಪ್ರದವಾಗಬೇಕಾದರೆ ಕರ್ಮದ ಬಲಹೀನತೆ ಮತ್ತು ಕೊರತೆಯನ್ನು ದೂರಮಾಡಬೇಕು. ಇಲ್ಲದಿದ್ದರೆ ಸುಧಾರಣೆ ಸಾಧ್ಯವಲ್ಲ. ಈ ದೃಷ್ಟಿಯಿಂದ ನಮ್ಮ ಇಚ್ಛಾಶಕ್ತಿಯನ್ನು ಪರೀಕ್ಷಿಸುವಾಗ ಅದರಲ್ಲಿ ಬಹಳ ಕಡಿಮೆ ಕೊರತೆಗಳು ಮಾತ್ರ ಇರುವುದಾಗಿ ನಾವು ಕಾಣುತ್ತೇವೆ. ಏಕೆಂದರೆ ಇಚ್ಛೆ ಎಂಬ ರೀತಿಯಲ್ಲಿ ಜಮಾಅತಿನ ಎಲ್ಲ ಅಥವಾ ಅಧಿಕ ವ್ಯಕ್ತಿಗಳು ತಮ್ಮೊಳಗೆ ದೇವಭಕ್ತಿ ಮತ್ತು ಪರಿಶುದ್ಧಿ ಉಂಟಾಗಬೇಕೆಂದೂ ಇಸ್ಲಾಮಿನ ಅಧ್ಯಾಪನೆಯ ಪ್ರಚಾರ ನಡೆಯಬೇಕೆಂದೂ ಅಲ್ಲಾಹನ ಪ್ರೀತಿ ಮತ್ತು ಸಾಮೀಪ್ಯ ಗಳಿಸಬೇಕೆಂದೂ ಇಚ್ಛಿಸುವವರಾಗಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ)

ಇದರ ವಿಶದೀಕರಣ ಹೀಗೆ ನೀಡಿದ್ದಾರೆ: ನಮ್ಮ ಇಚ್ಛಾಶಕ್ತಿ ಸುದೃಢ ಮತ್ತು ಶಕ್ತಿಶಾಲಿವಾದುದಾಗಿದೆ ಎಂದು ಇದರಿಂದ ಸಾಬೀತಾಗುತ್ತದೆ. ಆದರೂ ಸರಿಯಾದ ಫಲಿತಾಂಶ ಸಿಗುತ್ತಿಲ್ಲವೆಂದಾದರೆ, ಖಂಡಿತವಾಗಿಯೂ ಎರಡು ಸಂಗತಿಗಳಲ್ಲಿ ಒಂದನ್ನು ಅಂಗೀಕರಿಸಬೇಕಾಗುವುದು. ಕರ್ಮಕ್ಕಾಗಿ ಬೇಕಾದ ಯಥಾರ್ಥ ಇಚ್ಛಾಶಕ್ತಿ ನಮ್ಮಲ್ಲಿ ಇಲ್ಲ, ಆದರೆ ವಿಶ್ವಾಸಾದರ್ಶಕ್ಕಾಗಿ ಬೇಕಾದ ಇಚ್ಛಾಶಕ್ತಿ ನಮ್ಮಲ್ಲಿ ಇದೆ. ಆದ್ದರಿಂದ ನಮ್ಮ ವಿಶ್ವಾಸಾದರ್ಶದ ಸುಧಾರಣೆ ಆಯಿತು, ಆದರೆ ಕರ್ಮಸುಧಾರಣೆಗಾಗಿ ಬೇಕಾದ ಇಚ್ಛಾಶಕ್ತಿ ಇಲ್ಲದಿದ್ದ ಕಾರಣ ಕರ್ಮಸುಧಾರಣೆಯ ಮೈದಾನದಲ್ಲಿ ನಾವು ಯಶಸ್ಸು ಗಳಿಸಲಿಲ್ಲ. ಅದೇ ರೀತಿ ನಮ್ಮ ಆರಾಧನೆಯಲ್ಲಿ ಸಹ ಕೆಲವು ನ್ಯೂನತೆಗಳು ಇವೆ ಎಂದು ಅಂಗೀಕರಿಸಬೇಕಾಗುವುದು. ಆದ್ದರಿಂದ ನಮ್ಮ ಕರ್ಮಶಕ್ತಿ ದುರ್ಬಲವಾಗಿದೆ ಮತ್ತು ಇಚ್ಛಾಶಕ್ತಿಯ ಪ್ರಭಾವವನ್ನು ಸ್ವೀಕರಿಸುತ್ತಿಲ್ಲ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ತನ್ನ ಪಾಠವನ್ನು ಕಂಠಪಾಠ ಮಾಡುತ್ತಾನೆ ಆದರೆ ಅದನ್ನು ಮರೆತು ಬಿಡುತ್ತಾನೆ. ಎಲ್ಲಿಯವರೆಗೆ ಅವನ ಮಿದುಳಿನ ಶಕ್ತಿಯನ್ನು ಸರಿಪಡಿಸುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಎಷ್ಟೇ ಪಾಠ ಕೊಟ್ಟರೂ ಅವನು ಎಷ್ಟೇ ಬಾರಿ ಕಂಠಪಾಠ ಮಾಡಿದರೂ ಅಥವಾ ಕಂಠಪಾಠ ಮಾಡಲು ಪ್ರಯತ್ನಿಸಿದರೂ ಅವನಿಗೆ ನೆನಪಿಡಲಿಕ್ಕಾಗುವುದಿಲ್ಲ. ಆದ್ದರಿಂದ ನಾವು ನಮ್ಮ ಕರ್ಮ ಸುಧಾರಣೆ ಕಡೆಗೆ ಗಮನಹರಿಸಬೇಕಾಗಿದೆ. ಕರ್ಮಸುಧಾರಣೆ ಆರಂಭಿಸುವ ಮಿದುಳಿನ ಆ ಭಾಗವನ್ನು ಒಳಿತು ಮಾಡಬೇಕೆಂಬ ನಮ್ಮ ಇಚ್ಛೆ ಏಕೆ ಪ್ರಭಾವಿತಗೊಳಿಸುತ್ತಿಲ್ಲ ಎಂದು ನೋಡಬೇಕಾಗಿದೆ. ಈ ಮಾರ್ಗದಲ್ಲಿ ತಡೆ ಉಂಟುಮಾಡುವ ಅಡೆಚಣೆಗಳನ್ನು ನಾವು ದೂರ ಮಾಡಬೇಕಾಗಿದೆ. ಅನಂತರ ನಮ್ಮ ಆರಾಧನೆಯ ಮಟ್ಟ ಹೇಗಿದೆ ಎಂದೂ ನಮ್ಮ ಕರ್ಮಪರವಾದ ಪ್ರಯತ್ನದಲ್ಲಿ ಸದುದ್ದೇಶ ಮತ್ತು ನಿಷ್ಠೆ ಎಷ್ಟಿದೆ ಎಂದೂ ನಾವು ನೋಡಬೇಕಾಗಿದೆ. ಒಟ್ಟಿನಲ್ಲಿ ಕರ್ಮ ಸುಧಾರಣೆಯ ಮಾರ್ಗದಲ್ಲಿ ತಡೆ ಉಂಟುಮಾಡುವ ಅಡೆಚಣೆಗಳು ಎರಡಾಗಿವೆ. ಒಂದು, ಇಚ್ಛಾಶಕ್ತಿಯಲ್ಲಿ ಬಲಹೀನತೆ. ಎರಡು, ಕರ್ಮಶಕ್ತಿಯಲ್ಲಿ ಬಲಹೀನತೆ. ಆದರೆ ಹಿಂದೆ ಹೇಳಿದಂತೆ ಕರ್ಮ ಸುಧಾರಣೆಯಲ್ಲಿ ಕೊರತೆ ಉಂಟಾಗಲು ಮತ್ತೊಂದು ಕಾರಣ ಅರಿವಿನ ಕೊರತೆಯಾಗಿದೆ. ಇದು ಎರಡೂ ಕಡೆ ತನ್ನ ಪ್ರಭಾವ ಬೀರುತ್ತದೆ. ಇಚ್ಛೆಯೂ ಅರಿವಿನ ಪ್ರಕಾರ ಮುಂದೆ ಹೋಗುತ್ತದೆ. ಅದೇ ರೀತಿ, ಕರ್ಮವೂ ಅರಿವಿನ ಪ್ರಕಾರ ಮುಂದೆ ಹೋಗುತ್ತದೆ ಎಂದು ನಾವು ದೈನಂದಿನ ಜೀವನದಲ್ಲಿ ಕಾಣುತ್ತೇವೆ. ಉದಾಹರಣೆಗೆ, ಒಬ್ಬ ವ್ಯಕ್ತಿಗೆ ಒಂದು

ಸಾವಿರ ಸೈನಿಕರನ್ನೊಳಗೊಂಡಿರುವ ಒಂದು ಸೈನ್ಯ ತನ್ನ ಮನೆಯ ಮೇಲೆ ಹಲ್ಲೆ ಮಾಡುವುದು ಎಂಬುದರ ಬಗ್ಗೆ ಅರಿವಿಲ್ಲದಿದ್ದರೆ, ಬದಲಾಗಿ ಯಾರೋ ಹಲ್ಲೆ ಮಾಡಲಿದ್ದಾರೆ, ಮತ್ತವರ ಸಂಖ್ಯೆ ಒಂದೋ ಎರಡೋ ಆಗಿರಬಹುದು ಎಂದು ಭಾವಿಸುವುದಾದರೆ, ಅವನು ಆ ಅಂದಾಜಿನ ಪ್ರಕಾರ ತಯಾರು ಮಾಡುವನು. ಆದರೆ ಹಲ್ಲೆ ಮಾಡುವವರು ಒಂದು ಸಾವಿರದ ಸಂಖ್ಯೆಯಲ್ಲಿದ್ದಾರೆ ಎಂದು ಅವನಿಗೆ ಗೊತ್ತಿದ್ದರೆ, ಅವನ ತಯಾರಿಯಲ್ಲಿ ವ್ಯತ್ಯಾಸ ಉಂಟಾಗುವುದು. ಒಟ್ಟಿನಲ್ಲಿ ಅರಿವಿನ ಕೊರತೆಯ ಕಾರಣ ನ್ಯೂನತೆಗಳು ಉಂಟಾಗುತ್ತದೆ. ಸರಿಯಾದ ಅರಿವು ಇಚ್ಛಾಶಕ್ತಿಯನ್ನು ವರ್ಧಿಸುತ್ತದೆ. ಅದೇ ರೀತಿ, ಒಬ್ಬ ವ್ಯಕ್ತಿ ಯಾವುದಾದರೂ ವಸ್ತುವನ್ನು ಎತ್ತಲು ಹೋಗುತ್ತಾನೆ, ಅದು ಹಗುರವಾಗಿದೆ ಎಂದು ಭಾವಿಸುತ್ತಾನೆ. ಆದರೆ ಅದು ಭಾರವಾದುದಾಗಿರುತ್ತದೆ. ಅವನಿಂದ ಎತ್ತಲಾಗುವುದಿಲ್ಲ. ಆದರೆ ಅದರ ಭಾರದ ಅಂದಾಜು ಒಂದು ಸಲ ಅವನಿಗೆ ಉಂಟಾದರೆ, ಅದಕ್ಕನುಸಾರವಾಗಿ ಅಧಿಕ ಶಕ್ತಿಯನ್ನು ವಿನಿಯೋಗಿಸುತ್ತಾನೆ, ಅಧಿಕ ಬಲವನ್ನು ಉಪಯೋಗಿಸುತ್ತಾನೆ, ಎತ್ತುವ ರೀತಿಯನ್ನು ಬದಲಾಯಿಸುತ್ತಾನೆ. ಅನಂತರ ಅವನು ಅದನ್ನು ಎತ್ತುತ್ತಾನೆ. ಯಾವುದೇ ಹೆಚ್ಚಿನ ಶಕ್ತಿ ಅವನೊಳಗೆ ಬಂದಿರುವುದಿಲ್ಲ. ಬದಲಾಗಿ, ಸರಿಯಾದ ಅರಿವಿನ ಕಾರಣದಿಂದ ಅವನು ಸರಿಯಾದ ರೀತಿಯಲ್ಲಿ ಶಕ್ತಿಯನ್ನು ಉಪಯೋಗಿಸಿದನು. ಆದ್ದರಿಂದ ಅದರಲ್ಲಿ ಅವನು ವಿಜಯ ಸಾಧಿಸುತ್ತಾನೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಮತ್ತೊಂದು ಸಂಗತಿಯನ್ನು ಹೇಳಿರುವರು. ಅದು ಹೀಗೆ: ಅಲ್ಲಾಹನು ಪ್ರತಿಯೊಬ್ಬ ಮನುಷ್ಯನೊಳಗೆ ತುಲನಾತ್ಮಕ ಶಕ್ತಿಯನ್ನು ಇಟ್ಟಿದ್ದಾನೆ. ಇದರಿಂದ ಎರಡು ವಸ್ತುಗಳ ನಡುವೆ ತುಲನೆ ಮಾಡಬಹುದಾಗಿದೆ ಮತ್ತು ಇಂತಹ ಕೆಲಸ ಮಾಡಲಿಕ್ಕೆ ಇಷ್ಟು ಶಕ್ತಿ ಬೇಕೆಂದು ತೀರ್ಮಾನ ಮಾಡಬಹುದಾಗಿದೆ. ಎಲ್ಲ ಶಕ್ತಿಗಳು ಮನುಷ್ಯನ ಕೈಯಲ್ಲಿರುವುದಿಲ್ಲ. ಬದಲಾಗಿ, ಮನುಷ್ಯನ ಮಿದುಳಿನಲ್ಲಿ ಸುರಕ್ಷಿತವಾಗಿರುತ್ತದೆ. ಭಾರ ಎತ್ತುವ ಉದಾಹರಣೆಯಂತೆ, ಮನುಷ್ಯನಿಂದ ಮೊದಲ ಬಾರಿ ಒಂದು ಕೆಲಸ ಆಗದಿರುವಾಗ, ಹೆಚ್ಚು ಶಕ್ತಿಯನ್ನು ಕಳುಹಿಸಲು ಅವನು ಮಿದುಳಿಗೆ ಸಂದೇಶ ಕೊಡುತ್ತಾನೆ. ಆ ಶಕ್ತಿ ಬರುವಾಗ ವಸ್ತುವನ್ನು ಎತ್ತಲು ಸುಲಭವಾಗುತ್ತದೆ. ಈ ತುಲನಾತ್ಮಕ ಶಕ್ತಿಯೂ ಅರಿವಿನ ಮೂಲಕ ಉಂಟಾಗುತ್ತದೆ. ಅದು ಆಂತರಿಕ ಅಥವಾ ಬಾಹ್ಯವಾದ ಅರಿವಾಗಿರಬಹುದು. ಆಂತರಿಕ ಅರಿವೆಂದರೆ, ವೀಕ್ಷಣೆ (ಅವಲೋಕನ) ಮತ್ತು ಅನುಭವವಾಗಿದೆ. ಬಾಹ್ಯವಾದ ಅರಿವೆಂದರೆ, ಹೊರಗಿನಿಂದ ಕಿವಿಗೆ ಕೇಳಿ

ಬರುವ ಶಬ್ದವಾಗಿದೆ. ಹೊರಗಿನಿಂದ ಬರುವ ಹಲ್ಲೆಯ ಉದಾಹರಣೆಯಂತೆ, ಹೊರಗಿನಿಂದಾಗುವ ಹಲ್ಲೆಗಳಿಂದ ಜಾಗರೂಕರಾಗಿರಲು, ಹೊರಗಿನಿಂದ ಬರುವ ಶಬ್ದ ಮನುಷ್ಯನನ್ನು ಜಾಗರೂಕಗೊಳಿಸುತ್ತದೆ. ಆದರೆ ಭಾರ ಎತ್ತುವ ಉದಾಹರಣೆಯಲ್ಲಿ ತುಲನಾತ್ಮಕ ಶಕ್ತಿ ಸ್ವತಃ ತೀರ್ಮಾನ ತೆಗೆಯುತ್ತದೆ. ಮೊದಲು ಭಾರ ಎತ್ತಲು ಆಗದಿರಲು ಕಾರಣ, ಅದನ್ನು ಭಾರವಿಲ್ಲದ ವಸ್ತುವೆಂದು ಭಾವಿಸಿದ್ದರಿಂದಾಗಿದೆ. ಹತ್ತು ಕಿಲೋ ತೂಕವಿದ್ದದ್ದನ್ನು ಐದು ಕಿಲೋ ಎಂದು ತಿಳಿದು ಸ್ವಲ್ಪ ಶಕ್ತಿ ವಿನಿಯೋಗಿಸಲಾಯಿತು. ಅದನ್ನು ಎತ್ತಲು ಹತ್ತು ಕಿಲೋಗೆ ಬೇಕಾದ ಶಕ್ತಿ ಉಪಯೋಗಿಸಿದರೆ, ಅದನ್ನು ಎತ್ತಬಹುದಾಗಿದೆ. ಈ ತತ್ವವನ್ನು ಮುಂದಿರಿಸಿ ಮನುಷ್ಯನು ಈ ಕಾರ್ಯ ಚಟುವಟಿಕೆಗಳ ರೂಪರೇಷೆ ಪ್ರಕಾರ ನಡೆಯಲು ಏಳುವಾಗ, ತನ್ನ ಪರಿಶ್ರಮಕ್ಕೆ ಎಷ್ಟು ಶಕ್ತಿಯ ಆವಶ್ಯಕತೆಯಿದೆ ಎಂದು ತುಲನಾತ್ಮಕ ಶಕ್ತಿ ತೀರ್ಮಾನಿಸುತ್ತದೆ. ಕೆಲವು ಸಲ ಸರಿಯಾದ ಅರಿವು ಇಲ್ಲದ ಕಾರಣ ಮನುಷ್ಯನಿಗೆ ಕರ್ಮ ಸುಧಾರಣೆ ಮಾಡಲು ಆಗುವುದಿಲ್ಲ. ಒಟ್ಟಿನಲ್ಲಿ, ತುಲನಾತ್ಮಕ ಶಕ್ತಿ ಮನುಷ್ಯನನ್ನು ಜಾಗೃತಗೊಳಿಸುತ್ತದೆ. ಅದರ ಅರಿವಿನ ಇಲ್ಲದಿರುವಿಕೆ ಮನುಷ್ಯನನ್ನು ಅಜಾಗರೂಕಗೊಳಿಸುತ್ತದೆ.

ಒಟ್ಟಿನಲ್ಲಿ, ಕರ್ಮ ಸುಧಾರಣೆಗಾಗಿ ಮೂರು ಸಂಗತಿಗಳ ದೃಢತೆಯ ಆವಶ್ಯಕತೆ ಇದೆ. ಒಂದು, ಇಚ್ಛಾಶಕ್ತಿಯ ದೃಢತೆ. ಎರಡು, ಅರಿವಿನ ಆಧಿಕ್ಯದ ಆವಶ್ಯಕತೆ. ಮೂರು, ಕರ್ಮಶಕ್ತಿಯ ದೃಢತೆಯ ಆವಶ್ಯಕತೆ. ಅರಿವಿನ ವರ್ಧನೆ ಸತ್ಯದಲ್ಲಿ ಇಚ್ಛಾಶಕ್ತಿಯ ಭಾಗವಾಗಿದೆ. ಏಕೆಂದರೆ ಅರಿವಿನ ವರ್ಧನೆಯೊಂದಿಗೆ ಇಚ್ಛಾಶಕ್ತಿ ವರ್ಧಿಸುತ್ತದೆ ಅಥವಾ ಕೆಲಸ ಮಾಡಲು ತಯಾರಾಗುತ್ತದೆ. ಈ ಎಲ್ಲ ವಿಷಯಗಳ ಸಂಕ್ಷೇಪವೇನೆಂದರೆ, ಕರ್ಮಸುಧಾರಣೆಗಾಗಿ ನಮಗೆ ಮೂರು ಸಂಗತಿಗಳ ಆವಶ್ಯಕತೆ ಇದೆ. ಒಂದು, ದೊಡ್ಡ ದೊಡ್ಡ ಕೆಲಸ ಮಾಡಲು ಯೋಗ್ಯರಾಗಲು ಇಚ್ಛಾಶಕ್ತಿಯ ಆವಶ್ಯಕತೆ. ಎರಡು, ಇಚ್ಛಾಶಕ್ತಿಯೂ ತನ್ನ ಜವಾಬ್ದಾರಿಯನ್ನು ಅರಿತು, ಯಾವುದು ಸರಿ, ಯಾವುದು ತಪ್ಪು ಎಂದು ನೋಡಿ ಸರಿಯಾದದ್ದನ್ನು ಬೆಂಬಲಿಸಿ, ಅದರಂತೆ ನಡೆಯಲು ಪೂರ್ಣವಾಗಿ ಒತ್ತುಕೊಡಲಿಕ್ಕಾಗಿ ಮತ್ತು ಅಶ್ರದ್ಧೆಯ ಕಾರಣ ಮನುಷ್ಯನು ಅವಕಾಶ ಕಳೆದುಕೊಳ್ಳದಿರಲಿಕ್ಕಾಗಿ ಅರಿವಿನ ವರ್ಧನೆಯ ಆವಶ್ಯಕತೆ. ಮೂರು, ನಮ್ಮ ಅವಯವಗಳು (ಕೈಕಾಲುಗಳು ಇತ್ಯಾದಿ) ನಮ್ಮ ಇಚ್ಛೆಯ ಪ್ರಕಾರ ಪ್ರವರ್ತಿಸಲು, (ಸದುದ್ದೇಶಗಳ ಪ್ರಕಾರ, ದುರುದ್ದೇಶಗಳ ಪ್ರಕಾರವಲ್ಲ) ಅವನ ಆದೇಶಗಳನ್ನು ನಿರಾಕರಿಸದಿರಲು ಕರ್ಮ ಶಕ್ತಿಯ ಆವಶ್ಯಕತೆ.

ಈ ಸಂಗತಿಗಳು ಪಾಪಗಳನ್ನು ತೊರೆಯಲು ಮತ್ತು ಕರ್ಮ ಸುಧಾರಣೆ ಮಾಡಲು ಮೂಲಭೂತ ಮಾರ್ಗಗಳಾಗಿವೆ. ತನ್ನ ಶಕ್ತಿ, ಸಾಮರ್ಥ್ಯ ಮತ್ತು ತತ್ವಗಳ ಪ್ರಕಾರ ತನ್ನ ಆದೇಶವನ್ನು ಒಪ್ಪಿಕೊಳ್ಳುವಂತೆ ಮಾಡುವ ಮತ್ತು ಯಾವುದೇ ಸಮಸ್ಯೆಯನ್ನು ತನ್ನ ಮೇಲೆ ಮೇಲುಗೈ ಸಾಧಿಸಲು ಬಿಡದ ಉನ್ನತ ಶಿಸ್ತಿನ ಅಧಿಕಾರಿಯ ಹಾಗೆ ನಮ್ಮ ಇಚ್ಛಾಶಕ್ತಿಯನ್ನು ಮಾಡಬೇಕು.

ಒಟ್ಟಿನಲ್ಲಿ, ನಾವು ಹಝ್ರತ್ ಮಸೀಹ್ ಮೌಊದ್‌ರ[ಅ] ನಿಯೋಗದ ಉದ್ದೇಶವನ್ನು ಈಡೇರಿಸುವವರಾಗಲು ಮತ್ತು ಅಲ್ಲಾಹನು ನಮಗೆ ನೀಡಿದ ಶಕ್ತಿ ಸಾಮರ್ಥ್ಯಗಳು ತುಕ್ಕು ಹಿಡಿದು ನಾಶವಾಗದಿರಲು, ನಾವು ನಮ್ಮ ಕರ್ಮ ಸುಧಾರಣೆಗಾಗಿ ಈ ಸಂಗತಿಗಳ ಕಡೆಗೆ ಗಮನಹರಿಸಬೇಕಾಗಿದೆ, ಈ ಸಂಗತಿಗಳನ್ನು ಉಂಟುಮಾಡಬೇಕಾಗಿದೆ, ತಮ್ಮ ಇಚ್ಛಾಶಕ್ತಿಯನ್ನು ಶಕ್ತಗೊಳಿಸಬೇಕಾಗಿದೆ, ಕರ್ಮಶಕ್ತಿಯನ್ನು ಬಲಪಡಿಸ ಬೇಕಾಗಿದೆ.

*

**(6)**

## ಜುಮುಅ ಖುತ್‌ಬದ ಸಾರಾಂಶ (17/01/2014)

### ಇಚ್ಛಾಶಕ್ತಿಯ ತಾತ್ಪರ್ಯ:

ಹುಝೂರ್ ಹೇಳುತ್ತಾರೆ: ಕರ್ಮಸುಧಾರಣೆಗಾಗಿ ಆವಶ್ಯವಿರುವ ಮೂರು ಸಂಗತಿಗಳಲ್ಲಿ ಮೊದಲ ಸಂಗತಿ ಇಚ್ಛಾಶಕ್ತಿಯಾಗಿದೆ ಎಂದು ನಾವು ನೋಡಿದ್ದೇವೆ. ಈ ಇಚ್ಛಾಶಕ್ತಿ ಎಂದರೇನು? ಇಚ್ಛಾಶಕ್ತಿ ಏನೆಂದು ಕೇಳುತ್ತಿರುವುದು ಕೆಲವರಿಗೆ ಆಶ್ಚರ್ಯಕರವಾಗಿ ತೋರಬಹುದು. ಯಾವುದಾದರೂ ಕೆಲಸ ಮಾಡಲು ಬೇಕಾದ ದೃಢನಿರ್ಧಾರ ಮತ್ತು ಅದನ್ನು ಈಡೇರಿಸಲಿಕ್ಕಾಗಿ ಬೇಕಾದ ಶಕ್ತಿಯಾಗಿದೆ ಇಚ್ಛಾಶಕ್ತಿ ಎಂದು ಅದರ ಪದದಿಂದಲೇ ಅರ್ಥವಾಗುತ್ತಿರುವಾಗ ಇಚ್ಛಾಶಕ್ತಿ ಎಂದರೇನು ಎಂಬ ಪ್ರಶ್ನೆ ಕೇಳುವ ಆವಶ್ಯಕತೆ ಏನೆಂದು ಕೆಲವರು ಕೇಳಬಹುದು. ಹಝ್ರತ್ ಮುಸ್ಲಿಹ್ ಮೌಊದ್[ರ] ಬಹಳ ಸೊಗಸಾಗಿ ಇದರ ಬಗ್ಗೆ ಹೀಗೆ ಹೇಳಿದ್ದಾರೆ: ಇಚ್ಛಾಶಕ್ತಿಯ ತಾತ್ಪರ್ಯ ಕೃತ್ಯಕ್ಕನುಸಾರ ಪ್ರತಿಯೊಂದು ಸ್ಥಳದಲ್ಲಿ ಬದಲಾಗುತ್ತದೆ. ಈ ಮೂಲಭೂತ ಸಂಗತಿಯನ್ನು ನಾವು ನೆನಪಿಡಬೇಕು. ಈ ಸಂಗತಿಯನ್ನು ಮುಂದಿರಿಸುವಾಗ ಮಾತ್ರ ದೀನಿನ ವಿಷಯದಲ್ಲಿ ಇಚ್ಛಾಶಕ್ತಿ ಎಂದರೇನು ಎಂಬುದರ ಬಗ್ಗೆ ಯೋಚಿಸಬಹುದು. ದೀನಿನ ವಿಷಯದಲ್ಲಿ ಇಚ್ಛಾಶಕ್ತಿ ಎಂಬುದು ಈಮಾನಿನ (ವಿಶ್ವಾಸ) ಹೆಸರಾಗಿದೆ. ನಾವು ಈ ದೃಷ್ಟಿಕೋನದಿಂದ ನೋಡುವಾಗ, ಕರ್ಮಶಕ್ತಿ ಈಮಾನಿನ ವರ್ಧನೆಯಿಂದ ವರ್ಧಿಸುತ್ತದೆ ಎಂದು ನಮಗೆ ತಿಳಿದುಬರುತ್ತದೆ. ದೃಢವಿಶ್ವಾಸ ಮತ್ತು ಅಲ್ಲಾಹನೊಂದಿಗೆ ಸಂಬಂಧವಿದ್ದರೆ ಮನುಷ್ಯನ ಕಾರ್ಯಗಳು ತನ್ನಿಂತಾನೆ ಆಗುತ್ತದೆ. ಎಲ್ಲ ಕಷ್ಟತೆಗಳು ಅಲ್ಲಾಹನ ನೆರವು ಮತ್ತು ಸಹಾಯದಿಂದ ಸುಲಭವಾಗುತ್ತಾ ಹೋಗುತ್ತವೆ. ಕರ್ಮಪರವಾದ ಅಡಚಣೆಗಳು ಈಮಾನಿನ ಕಾರಣ ಗಾಳಿಗೆ ತೂರಲ್ಪಡುತ್ತವೆ ಮತ್ತು ಮನುಷ್ಯನು ಅವುಗಳ ಮೇಲೆ ನಿಯಂತ್ರಣ ಹೊಂದುತ್ತಾನೆ. ಇದು ಕೇವಲ ಬಾಯಿಮಾತಲ್ಲ. ಬದಲಾಗಿ, ಪ್ರತ್ಯಕ್ಷದಲ್ಲಿಯೂ ನಾವು ಇದರ ಮಾದರಿಗಳನ್ನು ಕಾಣುತ್ತೇವೆ. ನಾವು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲಘಟ್ಟವನ್ನು ನೋಡುವಾಗ, ಈಮಾನಿನ ಮೊದಲಿನ ಮತ್ತು ನಂತರದ ಕರ್ಮಪರವಾದ ಅವಸ್ಥೆಯ ವ್ಯತ್ಯಾಸದ ಅದ್ಭುತಕರವಾದ ಮಾದರಿಗಳು ಕಾಣಸಿಗುತ್ತವೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೇಲೆ ವಿಶ್ವಾಸ ಹೊಂದಿದ ಜನರು ಯಾರಾಗಿದ್ದರು? ಅವರ ಸ್ಥಿತಿ ಏನಾಗಿತ್ತು. ಚರಿತ್ರೆ ಇದರ ಬಗ್ಗೆ ಏನು ಹೇಳುತ್ತದೆ? ಅವರ ಮೇಲೆ ವಿಶ್ವಾಸ ಹೊಂದಿದವರಲ್ಲಿ ಕಳ್ಳರೂ ದರೋಡೆಕೋರರೂ ದುರಾಚಾರಿಗಳೂ ನೀಚರೂ ಆಗಿದ್ದವರು ಇದ್ದರು. ತಾಯಿಯನ್ನು ನಿಕಾಹ್ ಮಾಡುತ್ತಿದ್ದವರೂ ತಾಯಿಯನ್ನು ವಾರಿಸು ಸ್ವತ್ತಾಗಿ ಹಂಚುತಿದ್ದವರೂ ತಮ್ಮ ಹೆಣ್ಣು ಮಕ್ಕಳನ್ನು ಕೊಲ್ಲುತ್ತಿದ್ದವರೂ ಇದ್ದರು. ಜೂಜಾಟಗಾರರಾಗಿದ್ದವರೂ ಮದ್ಯಪಾನಿಗಳೂ ಇದ್ದರು. ಅವರು ಶರಾಬು ಕುಡಿಯುವುದನ್ನೇ ಗೌರವವೆಂದು ಭಾವಿಸಿದ್ದರು. ಇದಾಗಿತ್ತು ಆ ಕಾಲದಲ್ಲಿ ಅವರ ಸ್ಥಿತಿ. ಅನಂತರ ಹಝ್ರತ್ ಪೈಗಂಬರರ(ಸ) ಮೇಲೆ ವಿಶ್ವಾಸ ಹೊಂದಿದ ನಂತರ ಅವರ ಅವಸ್ಥೆ ಹೇಗೆ ಪೂರ್ತಿಯಾಗಿ ಬದಲಾಯಿತು? ಎಂತಹ ಪರಿವರ್ತನೆ ಅವರಲ್ಲಿ ಉಂಟಾಯಿತು? ಆ ವಿಶ್ವಾಸ ಅವರಲ್ಲಿ ಎಂತಹ ಇಚ್ಛಾಶಕ್ತಿಯನ್ನು ಉಂಟು ಮಾಡಿತು? ಇವುಗಳಿಗೆ ಸಂಬಂಧಿಸಿದ ಸಂಭವಗಳು ನಮಗೆ ಚರಿತ್ರೆಯಿಂದ ಸಿಗುತ್ತದೆ. ಅದನ್ನು ಓದುವಾಗ ಅದ್ಭುತವಾಗುತ್ತದೆ. ಅಷ್ಟು ಬೇಗನೆ ಅವರಲ್ಲಿ ಅಷ್ಟೊಂದು ಮಹಾ ಕ್ರಾಂತಿ ಹೇಗೆ ಉಂಟಾಯಿತು? ದೀನಿನ ಅಧ್ಯಾಪನೆ ಪ್ರಕಾರ ನಡೆಯಲು ತಮ್ಮ ಹೃದಯಗಳನ್ನು ಗಟ್ಟಿ ಮತ್ತು ಶಕ್ತಗೊಳಿಸಬೇಕೆಂದು ಅವರು ವಿಶ್ವಾಸ ಹೊಂದಿದ ಕೂಡಲೆ ತೀರ್ಮಾನಿಸಿದರು. ಅಲ್ಲಾಹನ ಆಜ್ಞೆಗಳ ವಿರುದ್ಧ ತಾವು ಒಂದು ಹೆಜ್ಜೆ ಸಹ ಹಾಕುವುದಿಲ್ಲವೆಂದು ಅವರು ತೀರ್ಮಾನಿಸಿದರು. ಹಝ್ರತ್ ಪೈಗಂಬರರ(ಸ) ಆದೇಶ ತಮಗೆ ಕೊನೆಯ ಮಾತೆಂದು ಅವರು ತೀರ್ಮಾನಿಸಿದರು. ಅವರ ತೀರ್ಮಾನಗಳು ಎಷ್ಟು ದೃಢವೂ ಗಟ್ಟಿಯೂ ಶಕ್ತವೂ ಆಗಿತ್ತೆಂದರೆ, ಅವರ ಕರ್ಮಪರವಾದ ದೌರ್ಬಲ್ಯಗಳು ಈ ತೀರ್ಮಾನಗಳ ಮುಂದೆ ಒಂದು ಕ್ಷಣಕ್ಕೂ ನೆಲೆನಿಲ್ಲಲಿಲ್ಲ. ಅತ್ಯಂತ ಅಪಾಯಕಾರಿ ವಿಪತ್ತುಗಳನ್ನೂ ತಮ್ಮ ಮೇಲೆ ಎರಗಿಸಲೂ ತಯಾರಾಗುವ ಹಾಗೆ ಅವರ ಅವಸ್ಥೆಗಳು ಬದಲಾದವು. ಅವರು ತಯಾರಾದರು ಎಂದು ಮಾತ್ರವಲ್ಲ, ಒಂದು ಶಕ್ತವಾದ ಪ್ರವಾಹದಲ್ಲಿ ಒಂದು ಕಡ್ಡಿ ಕೊಚ್ಚಿ ಹೋಗುವಂತೆ, ಅವರು ತಮ್ಮೊಳಗೆ ಉಂಟುಮಾಡಿದ ಇಚ್ಛಾಶಕ್ತಿ ಅವರ ಕರ್ಮಪರವಾದ ದೌರ್ಬಲ್ಯಗಳನ್ನು ದೂರಕ್ಕೆಸೆಯಿತು.

ಇಂತಹ ಇಚ್ಛಾಶಕ್ತಿ ಮತ್ತು ಈ ಮಟ್ಟದ ವಿಶ್ವಾಸ ಉಂಟಾದರೆ ಜನರ ಕರ್ಮ ಸುಧಾರಣೆಗಾಗಿ ಬೇರೆ ಮಾರ್ಗಗಳನ್ನು ಕೈಗೊಳ್ಳಬೇಕಾದ ಆವಶ್ಯಕತೆ ಇರುವುದಿಲ್ಲ. ಹದಿನಾಲ್ಕು ಶತಮಾನದ ಮುಂಚೆ ವಿಶ್ವಾಸ ಶಕ್ತಿಯ ಕಾರಣದಿಂದ ಕರ್ಮ ಸುಧಾರಣೆಯಲ್ಲಿ ಉಂಟಾದ ಇಂತಹ ವಿಶಾಲವಾದ

ಪರಿವರ್ತನೆಯ ಉದಾಹರಣೆ ಲೋಕದಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ಎಂತಹ ಅದ್ಭುತಕರವಾದ ರೀತಿಯಲ್ಲಿ ಲೋಕದಲ್ಲಿ ಇಂತಹ ಕ್ರಾಂತಿಯುಂಟಾಯಿತು. ಆದರೆ ಇದರೊಂದಿಗೆ ಸಾಮ್ಯತೆ ಇರುವ ಹಲವು ಉದಾಹರಣೆಗಳು ಹಝ್ರತ್ ಪೈಗಂಬರರ[ಸ] ಸತ್ಯಸಂಧ ಗುಲಾಮರಾದ ಹಝ್ರತ್ ಮಸೀಹ್ ಮೌಊದ್‌ರ[ಅ] ಮೇಲೆ ವಿಶ್ವಾಸ ಹೊಂದಿದವರಲ್ಲಿಯೂ ಕಾಣಸಿಗುತ್ತದೆ. ಉದಾ: ತಂಬಾಕು ಸೇವನೆ ನಿಷಿದ್ಧವಲ್ಲವಾದರೂ ಹಝ್ರತ್ ಮಸೀಹ್ ಮೌಊದ್‌ರು[ಅ] ಅದನ್ನು ಕೆಟ್ಟ ಚಟವೆಂದೂ ಇದು ಹಝ್ರತ್ ಪೈಗಂಬರರ[ಸ] ಕಾಲದಲ್ಲಿ ಇರುತ್ತಿದ್ದರೆ ಅವರು ಇದನ್ನು ಬಹುಶಃ ತಡೆಯುತ್ತಿದ್ದರು ಎಂದೂ ಹೇಳಿದ್ದರು. ಹೇಗಿದ್ದರೂ ಇದೊಂದು ಕೆಡುಕಾಗಿದೆ ಮತ್ತು ಇದರಲ್ಲಿ ಅಮಲು ಸಹ ಇದೆ. ಹಝ್ರತ್ ಮಸೀಹ್ ಮೌಊದ್[ಅ] ಒಂದು ಯಾತ್ರಾ ವೇಳೆಯಲ್ಲಿ ಹುಕ್ಕಾದ (ಒಂದು ನಳಿಕೆಯ ಮೂಲಕ ಹೊಗೆಸೊಪ್ಪು ಸೇವಿಸುವುದು) ಕುರಿತು ತಮ್ಮ ಅಪ್ರಿಯತೆಯನ್ನು ವ್ಯಕ್ತಪಡಿಸಿದಾಗ, ಹುಕ್ಕಾ ಸೇವನೆಯ ಚಟ ಹೊಂದಿದ ಸಹಾಬಿಗಳು ತಮ್ಮ ಹುಕ್ಕಾವನ್ನು ಒಡೆದರು. ಅನಂತರ ತಂಬಾಕು ಸೇವನೆಯ ಸಮೀಪ ಕೂಡ ಹೋಗಲಿಲ್ಲ.

ಇಂತಹ ಮಾದರಿಯನ್ನು ನಾವು ಸ್ಥಾಪಿಸಬೇಕಾದ ಆವಶ್ಯಕತೆ ಇದೆ. ಯಾವುದೇ ಕಾನೂನಿಗೆ ಹೆದರಿಯಲ್ಲ ಅಥವಾ ತಮ್ಮ ಸಮಾಜಕ್ಕೆ ಭಯಪಟ್ಟು ಕೆಡುಕುಗಳನ್ನು ಉಪೇಕ್ಷಿಸುವುದಲ್ಲ, ತಂದೆ ತಾಯಿಯ ಭಯದಿಂದ ಕೆಡುಕಿನಿಂದ ಬಿಟ್ಟು ನಿಲ್ಲುವುದಲ್ಲ. ಇಂತಹ ಚಿಂತೆ ಬರಬಾರದು. ಬದಲಾಗಿ, ಅಲ್ಲಾಹನು ಮತ್ತು ಅವನ ಪೈಗಂಬರರು[ಸ] ತಡೆದಿರುವ ಕಾರಣ ಅಥವಾ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್‌ರು[ಅ] ತಡೆದಿರುವ ಕಾರಣ ನಾವು ಕೆಡುಕುಗಳನ್ನು ಉಪೇಕ್ಷಿಸಬೇಕು ಎಂಬ ಯೋಚನೆ ಉಂಟಾಗಬೇಕು. ನಾನು ಕೆಲವು ಯೂನಿವರ್ಸಿಟಿ ವಿದ್ಯಾರ್ಥಿಗಳನ್ನು ನೋಡಿರುವೆನು. ಅವರು ಅಲ್ಕೋಹಾಲ್ ಸೇರಿಸಿದ ಸಿರಪ್ ಅಥವಾ ಔಷಧಿಗಳನ್ನು, ವಿಶೇಷವಾಗಿ ಕೆಮ್ಮಿನ ಔಷಧಿಯನ್ನು ಮಾದಕದ್ರವ್ಯದ ಹಾಗೆ ಉಪಯೋಗಿಸುತ್ತಾರೆ. ಅದರಲ್ಲಿ ಇತರ ಔಷಧಿಗಳೂ ಇರುವ ಕಾರಣ ಹಾನಿಕಾರಕವೂ ಆಗಿರುತ್ತದೆ. ಇಂತಹ ಸಮಾಜದಿಂದ ಸುರಕ್ಷಿತರಾಗಬೇಕು. ತಮ್ಮ ಇಚ್ಛಾಶಕ್ತಿಯಿಂದ ಇಂತಹ ಕೆಡುಕುಗಳಿಂದ ರಕ್ಷಣೆ ಹೊಂದಬೇಕಾದ ಆವಶ್ಯಕತೆ ಇದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ "ಶೀಶ" ಎಂಬ ಹೆಸರಿನ ಒಂದು ಮಾದಕ ವಸ್ತು ವಿಶೇಷವಾಗಿ ಮುಸ್ಲಿಮರ ರೆಸ್ಟೋರೆಂಟ್‌ಗಳಲ್ಲಿ ಸಿಗುತ್ತದೆ. ಇಲ್ಲಿಯ ನಮ್ಮ ಕೆಲವು ಯುವಕ ಯುವತಿಯರು ಇಂತಹ "ಶೀಶ"ವನ್ನು ಉಪಯೋಗಿಸುತ್ತಾರೆ ಎಂದು ನನಗೆ

ತಿಳಿದುಬಂದಿದೆ. ಇದರಲ್ಲಿ ಅಮಲಿಲ್ಲ ಅಥವಾ ಅಪರೂಪಕೊಮ್ಮೆ ಉಪಯೋಗಿಸಿದರೆ ಏನಾಗಲಿಕ್ಕಿಲ್ಲ ಎಂದು ಹೇಳುತ್ತಾರೆ.

ಅಪರೂಪಕೊಮ್ಮೆಯ ಉಪಯೋಗದಿಂದಲೇ ಮನುಷ್ಯನು ದೊಡ್ಡದಾದ ಅಮಲುಗಳಲ್ಲಿ ಒಳಪಡುತ್ತಾನೆ. ಅನಂತರ ಇದರಿಂದ ಹಿಂದೆ ಸರಿಯಲು ಕಷ್ಟವಾಗುತ್ತದೆ ಎಂದು ನೆನಪಿಡಿರಿ.

ಆದ್ದರಿಂದ ಈಗಿನಿಂದಲೇ ತಮ್ಮ ಇಚ್ಛಾಶಕಿಯನ್ನು ಕಾರ್ಯರೂಪಕ್ಕೆ ತರಬೇಕು ಮತ್ತು ಈ ಕೆಡುಕಿನಿಂದ ಬಿಡುಗಡೆ ಹೊಂದಬೇಕು. ಅದಕ್ಕಾಗಿ ತಮ್ಮ ಈಮಾನನ್ನು (ವಿಶ್ವಾಸ) ನೋಡಿರಿ. ಈಮಾನಿನ ತಾಪವೇ ಇಚ್ಛಾಶಕ್ತಿಯನ್ನು ಉಂಟು ಮಾಡುವುದು.

**ಅರಿವಿನ ಶಕ್ತಿ ಎಂಬುದರ ತಾತ್ಪರ್ಯ:**

ಒಬ್ಬ ವ್ಯಕ್ತಿಗೆ ಅರಿವಿನ ಶಕ್ತಿ ಇದ್ದರೆ, ಅರಿವಿನ ಕೊರತೆಯಿಂದ ಉಂಟಾಗುವ ಕರ್ಮಪರವಾದ ಬಲಹೀನತೆಗಳು ದೂರವಾಗುವುವು. ಅದಕ್ಕೆ ಕೊಡಬಹುದಾದ ಸಾಮಾನ್ಯ ಉದಾಹರಣೆ ಏನೆಂದರೆ, ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿ ಕೆಲವು ಅಭ್ಯಾಸಗಳು ಇರುತ್ತವೆ. ಯಾರಿಗಾದರೂ ಮಣ್ಣು ತಿನ್ನುವ ಅಭ್ಯಾಸವಿದ್ದರೆ, ಅದರ ಹಾನಿಯ ಅರಿವು ಉಂಟಾಗುವಾಗ ಶ್ರಮಪಟ್ಟು ಅದನ್ನು ನಿಲ್ಲಿಸುತ್ತಾನೆ. ಇದೇ ರೀತಿಯಲ್ಲಿ ಹಲವು ಅಭ್ಯಾಸಗಳಿವೆ. ಇಂತಹ ಅಭ್ಯಾಸಗಳು ಅರಿವಿನ ಕಾರಣದಿಂದ ಕೊನೆಗೊಳ್ಳುತ್ತವೆ.

ಅದೇ ರೀತಿ, ಒಂದಿಷ್ಟು ಅಲ್ಲಾಹನ ಭಯವಿರುವವನಿಗೆ, ಕರ್ಮಪರವಾದ ಪಾಪ ಮತ್ತು ಅಲ್ಲಾಹನ ಅತೃಪ್ತಿಯ ಸರಿಯಾದ ಅರಿವು ಮೂಡಿಸಿ ಕೊಟ್ಟು, ಪಾಪದ ಕಾರಣ ಅಲ್ಲಾಹನು ಎಷ್ಟು ಬೇಸರಗೊಳ್ಳುತ್ತಾನೆ ಎಂಬ ಸಂಗತಿಯಲ್ಲಿ ಅವನನ್ನು ಗಟ್ಟಿಗೊಳಿಸಿದರೆ ಅವನು ಪಾಪಗಳಿಂದ ಸುರಕ್ಷಿತನಾಗುತ್ತಾನೆ.

**ಕರ್ಮಶಕ್ತಿಯ ತಾತ್ಪರ್ಯ:**

ಕರ್ಮಪರವಾದ ದೌರ್ಬಲ್ಯ ಉಂಟಾಗಲು ಮೂರನೇ ಕಾರಣ ಕರ್ಮಶಕ್ತಿಯ ಕೊರತೆಯಾಗಿದೆ. ಈ ಮೂರು ವಿಧದ ಜನರು ಲೋಕದಲ್ಲಿದ್ದಾರೆ ಮತ್ತು ಈ ರೋಗಗಳೂ ಇವೆ. ಕೆಲವು ಜನರ ವಿಶ್ವಾಸ ಪರಿಪೂರ್ಣವಲ್ಲದ ಕಾರಣ ಕರ್ಮಪರವಾದ ಬಲಹೀನತೆಗಳು ಉಂಟಾಗುತ್ತವೆ. ಕೆಲವು ಜನರ ಅರಿವು ಪರಿಪೂರ್ಣವಲ್ಲದ ಕಾರಣ

ಕರ್ಮಪರವಾದ ದೌರ್ಬಲ್ಯಗಳು ಉಂಟಾಗುತ್ತವೆ. ಕೆಲವು ಜನರು ವಿಶ್ವಾಸ ಮತ್ತು ಅರಿವು ಹೊಂದಿದ್ದಾರೆ. ಆದರೆ ಎರಡೂ ರೀತಿಯ ಚಿಕಿತ್ಸೆ ಸಹ ಸಾಕಾಗದಷ್ಟು ಅವರ ಮೇಲೆ ತುಕ್ಕು ಹಿಡಿದಿರುತ್ತದೆ. ಅವರಿಗೆ ಬಾಹ್ಯವಾದ ಚಿಕಿತ್ಸೆಯ ಆವಶ್ಯಕತೆ ಇರುತ್ತದೆ. ಒಬ್ಬ ವ್ಯಕ್ತಿಯ ಎಲುಬು ಮುರಿದರೆ ಕೆಲವು ಬಾರಿ ಪಟ್ಟಿಹಾಕಿ ಹೊರಗಿನಿಂದ ಆಧಾರ ನೀಡಲಾಗುತ್ತದೆ. ಕೆಲವು ಬಾರಿ ಎಲುಬನ್ನು ಜೋಡಿಸಿ ಗಟ್ಟಿಗೊಳಿಸಲು ಶಸ್ತ್ರಕ್ರಿಯೆ (ಆಪರೇಶನ್) ಮಾಡಿ ಕಂಬಿ ಹಾಕುತ್ತಾರೆ. ಮೆಲ್ಲಮೆಲ್ಲನೆ ಎಲುಬು ಜೋಡಿಸಲ್ಪಡುವಾಗ ಆಧಾರವನ್ನು ತೆಗೆಯಲಾಗುತ್ತದೆ. ಅದೇ ರೀತಿಯಲ್ಲಿ ಕೆಲವು ಜನರಿಗೆ ಸ್ವಲ್ಪ ಕಾಲಕ್ಕೆ ನೆರವಿನ ಆವಶ್ಯಕತೆ ಇರುತ್ತದೆ. ಮೆಲ್ಲಮೆಲ್ಲನೆ ಈ ಆಧಾರ ಅವನನ್ನು ಸಕ್ರಿಯನನ್ನಾಗಿ ಮಾಡುವಷ್ಟು ಶಕ್ತಿ ಉಂಟು ಮಾಡುತ್ತದೆ. ಅವನ ಕರ್ಮಪರವಾದ ದೌರ್ಬಲ್ಯಗಳು ದೂರವಾಗುತ್ತವೆ. ನಾನು ಕಳೆದ ವಾರದ ಖುತ್‌ಬದಲ್ಲಿ ಹೇಳಿದಂತೆ, ನಮ್ಮ ಜಮಾಅತಿನ ವ್ಯವಸ್ಥೆ, ನಮ್ಮ ಹುದ್ದೇದಾರರು, ನಮ್ಮ ಶಾಖಾ ಸಂಘಟನೆಗಳು ಈ ಕರ್ಮಪರವಾದ ಬಲಹೀನತೆಗಳನ್ನು ದೂರ ಮಾಡುವ ಮಾರ್ಗವಾಗಬೇಕು. ಆದರೆ ಹುದ್ದೇದಾರರ ಇಚ್ಛಾಶಕ್ತಿಯಲ್ಲಿ, ಅರಿವಿನಲ್ಲಿ, ಕರ್ಮಶಕ್ತಿಯಲ್ಲಿ ಕೊರತೆಗಳಿದ್ದರೆ, ಅವರು ಇತರರಿಗೆ ಹೇಗೆ ನೆರವಾಗುವರು? ಜಮಾಅತಿನ ಅಭಿವೃದ್ಧಿಗಾಗಿ, ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಕರ್ಮಸುಧಾರಣೆಯ ಉನ್ನತ ಮಟ್ಟವನ್ನು ಮುಟ್ಟುವಂತಾಗಲು, ಜಮಾಅತಿನ ವ್ಯವಸ್ಥೆಯ ಪ್ರತಿಯೊಂದು ವಿಭಾಗ, ಪ್ರತಿಯೊಬ್ಬ ಅಹ್ಮದೀ ಆತ್ಮ ಪರೀಕ್ಷಣೆ ನಡೆಸಿ ತನ್ನ ಸುಧಾರಣೆ ಮಾಡುವ ಆವಶ್ಯಕತೆ ಇದೆ. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

*

# (7)
# ಜುಮುಅ ಖುತ್‌ಬದ ಸಾರಾಂಶ (24/01/2014)

## ಜಮಾಅತಿನ ಮುರಬ್ಬಿ ಮತ್ತು ಉಪದೇಶಕರ ಕರ್ತವ್ಯಗಳು:

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್[ಅಯ್ಯದಹುಲ್ಲಾಹ್] ಹೇಳುತ್ತಾರೆ: ನಮ್ಮ ಮುರಬ್ಬಿಗಳೂ ಧರ್ಮಪಂಡಿತರೂ ಉಪದೇಶ ಮಾಡಲು ಸಂದರ್ಭ ಸಿಕ್ಕುವ ಅಥವಾ ಉಪದೇಶಿಸಲು ಕರ್ತವ್ಯಬದ್ಧರಾದ ಹುದ್ದೇದಾರರೂ (ಅವರಲ್ಲಿ ಶಾಖಾ ಸಂಘಟನೆಯ ಹುದ್ದೇದಾರರೂ ಒಳಪಟ್ಟಿದ್ದಾರೆ) ಜಮಾಅತಿನ ಕರ್ಮಪರವಾದ ಸುಧಾರಣೆಯಲ್ಲಿ ತಮ್ಮ ಪಾತ್ರವನ್ನು ಪರಿಪೂರ್ಣವಾಗಿ ನಿರ್ವಹಿಸಲು ವಿಶೇಷವಾಗಿ ಈ ಸಂಗತಿಗಳನ್ನು ಮುಂದಿರಿಸಿರಿ. ಇವುಗಳ ಬಗ್ಗೆ ಹಲವು ಸಂಗತಿಗಳನ್ನು ನಾನು ಜಮಾಅತಿನ ಮುಂದೆ ಆಗಿಂದಾಗ್ಗೆ ಇರಿಸುತ್ತಿರುತ್ತೇನೆ. ಈಗ **M.T.A** ಯ ಅನುಗ್ರಹದಿಂದ ಎಲ್ಲ ಕಡೆಗಳಲ್ಲಿ **M.T.A** ಮೂಲಕ ಸಂಪರ್ಕವಿರಿಸುವ ವ್ಯಕ್ತಿಗಳು ನನ್ನ ಮಾತುಗಳನ್ನು ಕೇಳುತ್ತಾರೆ. ಅಲ್ಲಾಹನ ಅನುಗ್ರಹದಿಂದ ಅವರ ಮೇಲೆ ಪ್ರಭಾವ ಸಹ ಉಂಟಾಗುತ್ತಿದೆ ಅಥವಾ ಕನಿಷ್ಠ ಪಕ್ಷ ಬಹಳಷ್ಟು ಜನರ ಮೇಲೆ ಪ್ರಭಾವ ಬೀರುತ್ತಿದೆ. ಆದರೆ ಪ್ರತಿಯೊಬ್ಬ ಅಹ್ಮದಿಯ ಮನಸ್ಸಲ್ಲಿ ಅವರ ಕಾರ್ಯಕ್ಷೇತ್ರ ಒಳ್ಳೆಯ ರೀತಿಯಲ್ಲಿ ಸ್ಪಷ್ಟ ಮತ್ತು ದೃಢವಾಗಲು ಈ ಸಂದೇಶವನ್ನು ಮತ್ತು ಇದರ ಆಧಾರದಲ್ಲಿ ಮಾಡಲಾದ ಪ್ರೋಗ್ರಾಮ್‌ಗಳನ್ನು ಪದೇ ಪದೇ ಜಮಾಅತಿನ ಮುಂದೆ ಬರುವಂತೆ ತಮ್ಮ ಕಾರ್ಯಕ್ರಮಗಳನ್ನು ರೂಪಿಸುವುದು ಮುರಬ್ಬಿ, ಅಮೀರ್ ಮತ್ತು ಹುದ್ದೇದಾರರ ಕೆಲಸವಾಗಿದೆ.

ಇದು ಹುದ್ದೇದಾರರು ತಮ್ಮ ಮುಂದೆ ಇರಿಸಬೇಕಾದ ಅತಿಮುಖ್ಯವಾದ ಸಂಗತಿಯಾಗಿದೆ. ಹಿಂದೆ ಪ್ರಸ್ತಾಪಿಸಿದಂತೆ ಸುಧಾರಣೆ ಮಾರ್ಗಗಳ ಮೊತ್ತಮೊದಲ ಭಾಗ ಇಚ್ಛಾಶಕ್ತಿಯ ದೃಢತೆಯಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಆ ಭಾಗ ಈಮಾನಾಗಿದೆ. ಇದನ್ನು ಉಂಟುಮಾಡಲು ಪ್ರವಾದಿಗಳು ಲೋಕಕ್ಕೆ ಬರುತ್ತಾರೆ ಮತ್ತು ಜೀವಂತ ದೃಷ್ಟಾಂತಗಳನ್ನು ತೋರಿಸುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ನಮ್ಮ ಜಮಾಅತಿನ ಬಳಿ ಅಲ್ಲಾಹನ ನವನವೀನ ದೃಷ್ಟಾಂತಗಳು ಎಷ್ಟು ಅಧಿಕವಿದೆ ಎಂದರೆ, ಇದಕ್ಕೆ ಸಮಾನ ಅಥವಾ ಅದಕ್ಕೆ

ಸಮೀಪದಷ್ಟು ಸಹ ಯಾರ ಬಳಿಯೂ ಇಲ್ಲ. ಮನುಷ್ಯನ ಹೃದಯವನ್ನು ಎಲ್ಲ ರೀತಿಯ ಮಾಲಿನ್ಯಗಳಿಂದ ಶುದ್ಧೀಕರಿಸುವ ಮತ್ತು ಅಲ್ಲಾಹನ ಬಗ್ಗೆಗಿನ ಜ್ಞಾನದಿಂದ ತುಂಬುವಂತೆ ಮಾಡುವ ಅಲ್ಲಾಹನ ತಾಜಾ ವಚನಗಳು, ಅವನ ಜೀವಂತ ದೃಷ್ಟಾಂತಗಳು ಮತ್ತು ಅವನ ಅಸ್ತಿತ್ವವನ್ನು ತೋರಿಸುವ ಚಿಹ್ನೆಗಳು ಇಸ್ಲಾಮಿನ ಹೊರತು ಬೇರೆ ಯಾವ ಧರ್ಮದಲ್ಲಿಯೂ ಇಲ್ಲ. ಆದರೆ ಇಂತಹ ವಿಶ್ವಾಸ, ತಾಜಾ ಮತ್ತು ಜೀವಂತ ದೃಷ್ಟಾಂತಗಳಿದ್ದೂ ನಮ್ಮ ಜಮಾಅತಿನ ಕರ್ಮಗಳಲ್ಲಿ ದೌರ್ಬಲ್ಯಗಳು ಏಕಿವೆ? ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್[ರ] ತಮ್ಮ ಅನಿಸಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ಇದಕ್ಕೆ ಕಾರಣವೇನೆಂದರೆ ಜಮಾಅತಿನ ಧರ್ಮಪಂಡಿತರು, ಮುರಬ್ಬಿಗಳು ಮತ್ತು ಉಪದೇಶಕರು ಇದನ್ನು ಹರಡುವ ಬಗ್ಗೆ ವಿಶೇಷವಾದ ಶ್ರದ್ಧೆವಹಿಸಿಲ್ಲ". ಅವರ ಮಾತುಗಳು ಎಪತ್ತೈದು ವರ್ಷಗಳ ಮುಂಚೆ ಸರಿಯಾಗಿದ್ದ ಹಾಗೆ ಈಗಲೂ ಸರಿಯಾಗಿದೆ. ಅದರ ಬಗ್ಗೆ ಚಿಂತಿಸಬೇಕಾದ ಆವಶ್ಯಕತೆ ಇದೆ. ನಾವು ಹಝ್ರತ್ ಮಸೀಹ್ ಮೌಊದ್‌ರ[ಅ] ಕಾಲಘಟ್ಟದಿಂದ ದೂರ ಸರಿಯುತ್ತಿದ್ದಂತೆಯೇ ನಾವು ಇದರ ಬಗ್ಗೆ ಸಮಗ್ರವಾದ ಯೋಜನೆಯೊಂದಿಗೆ ಇದರ ಕಡೆಗೆ ಶ್ರದ್ಧೆ ವಹಿಸಬೇಕಾದ ಆವಶ್ಯಕತೆಯಿದೆ. ಅವರ ಈ ಮಾತು ಇಂದು ಸಹ ಗಮನಾರ್ಹವಾದುದಾಗಿದೆ. ನಾವು ಈಸಾ ಮಸೀಹರ ಮರಣದ ಬಗ್ಗೆ ಕರಾರುವಕ್ಕಾಗಿ ಭಾಷಣ ಮಾಡುತ್ತೇವೆ ಅಥವಾ ಆಕ್ಷೇಪಕರ ಆಕ್ಷೇಪಗಳಿಗೆ ಅವರು ಗೌರವಿಸುವ ಪೂರ್ವಜರ ಹೇಳಿಕೆಗಳನ್ನು ತೆಗೆದು ಉಲ್ಲೇಖಿಸುತ್ತಾ ಆಕ್ಷೇಪಕರ ಮುಂದಿರಿಸಿ ಅವರ ಬಾಯಿ ಮುಚ್ಚುತ್ತೇವೆ. ಆದರೆ ನಾವು ಜಮಾಅತಿನ ವ್ಯಕ್ತಿಗಳ ಮುಂದೆ ಜಮಾಅತಿನ ಅಧ್ಯಾಪನೆಗಳನ್ನು ತೋರಿಸಲು ಇಷ್ಟೊಂದು ಪ್ರಯತ್ನ ಮಾಡುವುದಿಲ್ಲ ಅಥವಾ ಕಡಿಮೆ ಪಕ್ಷ ಮುಬಲ್ಲಿಗರ ಕಡೆಯಿಂದ ಆಗುತ್ತಿಲ್ಲ. ಇದೇ ಕಾರಣದಿಂದ ನಮ್ಮ ಜಮಾಅತಿನಲ್ಲಿ ಹಝ್ರತ್ ಈಸಾ ಮಸೀಹರ[ಅ] ಮರಣದ ಬಗ್ಗೆ ಪುರಾವೆಗಳು ಗೊತ್ತಿರುವ ಅಥವಾ ಮೌಲವಿಗಳ ಆಕ್ಷೇಪಗಳಿಗೆ ಬಾಯಿ ಮುಚ್ಚುವಂತಹ ಉತ್ತರ ಕೊಡುವ ಜನರಿದ್ದಾರೆ.

ಈ ವಿಧದ ಅಸ್ತ್ರಗಳಿಂದ ನಾವು ಸಜ್ಜಿತರಾಗಿದ್ದೇವೆ. ಆದರೆ ಹಝ್ರತ್ ಮಸೀಹ್ ಮೌಊದ್‌ರು[ಅ] ನಮ್ಮ ಮುಂದೆ ಅಲ್ಲಾಹನ ಬಗ್ಗೆ ಯಾವ ರೀತಿಯಲ್ಲಿ ವಿವರಿಸಿದ್ದಾರೆ? ಅಲ್ಲಾಹನ ಬಗ್ಗೆಗಿನ ಜ್ಞಾನ ಮತ್ತು ದೇವ ಪ್ರೇಮ ಗಳಿಸಲಿಕ್ಕಾಗಿ ಅವರು ಯಾವ ಮಾರ್ಗಗಳನ್ನು ಸೂಚಿಸಿದ್ದಾರೆ? ಅವನ ಸಾಮೀಪ್ಯ ಗಳಿಸಲು ಅವರು ಎಂತಹ ಮಾತುಗಳಿಂದ ತಾಕೀತು

ಮಾಡಿದ್ದಾರೆ? ಅಲ್ಲಾಹನ ತಾಜಾ ವಚನಗಳು ಮತ್ತು ಅವನ ದೃಷ್ಟಾಂತಗಳು ಅವರ ಮೇಲೆ ಎಂತಹ ವೈಭವದಿಂದ ಪ್ರಕಟವಾದವು? ಎಂಬೀ ವಿಷಯಗಳ ಬಗ್ಗೆ ಅರಿವು ಇರುವವರು ಬಹಳ ಕಡಿಮೆ ಸಿಗುತ್ತಾರೆ. ಆದ್ದರಿಂದ ಕೆಲವು ಸಲ ಏನಾಗುತ್ತದೆ ಎಂದರೆ, ಒಬ್ಬ ವ್ಯಕ್ತಿ ಈಸಾ ಮಸೀಹರ(ಅ) ಮರಣವನ್ನು ಒಪ್ಪಿಕೊಂಡಿರುತ್ತಾನೆ, ಅವುಗಳ ಪುರಾವೆಗಳನ್ನೂ ತಿಳಿದಿರುತ್ತಾನೆ, ಪಿತ್ರಾರ್ಜಿತವಾಗಿ ಅಹ್ಮದಿಯತ್ ಸಹ ಲಭಿಸಿರುತ್ತದೆ. ಆದರೆ ಈ ಎಲ್ಲ ಸಂಗತಿಗಳ ಅರಿವು ಇದ್ದೂ ಮತ್ತೊಂದೆಡೆ ಜಮಾಅತಿನ ಅಧ್ಯಾಪನೆಯ ಅರಿವು ಇಲ್ಲದ ಕಾರಣ ವಿಶ್ವಾಸಪರವಾದ ಬಲಹೀನತೆಗಳು ಉಂಟಾಗುತ್ತವೆ. ವಿಶ್ವಾಸ ಅಸ್ಥಿರವಾಗುತ್ತದೆ. ಕರ್ಮಪರವಾದ ದೌರ್ಬಲ್ಯಗಳೂ ಉಂಟಾಗುತ್ತವೆ.

ಒಟ್ಟಿನಲ್ಲಿ, ಒಬ್ಬ ವ್ಯಕ್ತಿ ಹಝ್ರತ್ ಈಸಾ ಮಸೀಹರ(ಅ) ಮರಣದ ವಿಷಯದಲ್ಲಿ ಗಟ್ಟಿಯಾಗಿರುತ್ತಾನೆ, ಆದರೆ ಈ ವಿಷಯಗಳನ್ನು ಅರಿಯುವುದರಿಂದ ಕರ್ಮ ಸುಧಾರಣೆಯಾಗಲಿಕ್ಕಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ಜಮಾಅತಿನಲ್ಲಿ ಕೆಲವು ಸ್ಥಳಗಳಲ್ಲಿ ದೌರ್ಬಲ್ಯಗಳು ಕಂಡು ಬರುತ್ತವೆ. ಜಮಾಅತಿನ ಮುಂದೆ ತಮ್ಮ ಮಾದರಿಗಳನ್ನು ತೋರಿಸಬೇಕಾದ ಮತ್ತು ಕರ್ಮಸುಧಾರಣೆ ಮಾಡಿಸುವ ಕೆಲಸವಿರುವ ನಮ್ಮ ಜಮಾಅತಿನ ಮುಬಲ್ಲಿಗರು, ಮುರಬ್ಬಿಗಳು ಮತ್ತು ಹುದ್ದೇದಾರರು ಈ ಸಂಗತಿಯ ಕಡೆಗೆ ಗಮನಹರಿಸಬೇಕಾದ ರೀತಿಯಲ್ಲಿ ಗಮನಹರಿಸದಿದ್ದರೆ, ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯನ್ನು ಹಝ್ರತ್ ಮಸೀಹ್ ಮೌಊದ್‌ರ(ಅ) ನಿಯೋಗದ ಉದ್ದೇಶದೊಂದಿಗೆ ಜೋಡಿಸಲು ಪ್ರಯತ್ನಿಸಬೇಕಾದ ರೀತಿಯಲ್ಲಿ ಪ್ರಯತ್ನಿಸದಿದ್ದರೆ, ಇಚ್ಛಾಶಕ್ತಿಯ ದೌರ್ಬಲ್ಯದ ಕಾರಣ ಕರ್ಮಸುಧಾರಣೆ ಮಾಡಲಾಗದ ಜಮಾಅತಿನ ಒಂದು ಗುಂಪು ಜನರು ಜಮಾಅತಿನೊಳಗೆ ಹೇರಳವಾಗಿ ಇರುವರು. ನಮ್ಮಲ್ಲಿ ಎಷ್ಟು ಜನರಿಗೆ ಅಲ್ಲಾಹನ ಆರಾಧನೆ ಮಾಡುವ ಆಸಕ್ತಿ ಇದೆ? ರಮಝಾನಿನ ಒಂದು ತಿಂಗಳು ಅಥವಾ ಒಂದು ಸಲ ಇಅ್‌ತಿಕಾಫ್ ಮಾಡಿದ ನಂತರ ವರ್ಷವಿಡೀ ಅದನ್ನು ಪ್ರಕಟಿಸುತ್ತಾ ಇರುವುದಲ್ಲ, ಬದಲಾಗಿ ಸ್ಥಿರಚಿತ್ತರಾಗಿ ಈ ಅಭಿರುಚಿ ಮತ್ತು ಉತ್ಸಾಹವನ್ನು ತಮ್ಮೊಳಗೆ ಉಂಟುಮಾಡಿ ಅಲ್ಲಾಹನ ಸ್ಥಿರವಾದ ಸಾಮೀಪ್ಯ ಹೊಂದಿರುವ ಎಷ್ಟು ಜನರು ನಮ್ಮಲ್ಲಿದ್ದಾರೆ? ಅಲ್ಲಾಹನು ತನ್ನ ಪ್ರೀತಿಯನ್ನು ಪ್ರಕಟಿಸಿದ ಕಾರಣ ಪ್ರಾರ್ಥನೆಯ ಅಂಗೀಕಾರದ ಚಿಹ್ನೆಯನ್ನು ತೋರಿಸಬಲ್ಲ ಮತ್ತು ಅಲ್ಲಾಹನೊಂದಿಗೆ ಸಂಭಾಷಣೆ ನಡೆಸುವ ಎಷ್ಟು ಜನರು ನಮ್ಮಲ್ಲಿ ಇದ್ದಾರೆ? ಹಝ್ರತ್ ಮಸೀಹ್ ಮೌಊದ್‌ರಲ್ಲಿ(ಅ)

ವಿಶ್ವಾಸಹೊಂದಿ, ಈ ಮಟ್ಟವನ್ನು ಪಡೆಯುವುದು ಅಥವಾ ಪಡೆಯಲಿಕ್ಕೆ ಪ್ರಯತ್ನಿಸುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ.

ನಮ್ಮ ಮುಬಲ್ಲಿಗರೂ ಮುರಬ್ಬಿಗಳೂ ಹುದ್ದೇದಾರರೂ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಇದ್ದುಕೊಂಡು, ಜಮಾಅತಿನ ವ್ಯಕ್ತಿಗಳ ಮುಂದೆ ಅಲ್ಲಾಹನ ಪ್ರೀತಿ ಗಳಿಸಲು ಪ್ರಯತ್ನಿಸಬೇಕೆಂದು ಪದೇ ಪದೇ ಹೇಳುವುದಿಲ್ಲ, ಪ್ರಸ್ತಾಪಿಸಬೇಕಾದ ರೀತಿಯಲ್ಲಿ ಪ್ರಸ್ತಾಪಿಸುವುದಿಲ್ಲ ಅಥವಾ ಅವರ ಸ್ವಂತ ಮಾದರಿ ಜನರ ಗಮನ ಸೆಳೆಯುವಂತಹದ್ದಾಗಿರುವುದಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಸಹಾಬಿವರ್ಯರ ಬಗ್ಗೆ ಪದೇ ಪದೇ ಪ್ರಸ್ತಾಪಿಸಿ, ಅವರೊಂದಿಗೆ ಆದ ಅಲ್ಲಾಹನ ಸಹಾಯ ಮತ್ತು ದೃಷ್ಟಾಂತಗಳ ಸಂಭವಗಳು ಅಧಿಕ ಅಧಿಕವಾಗಿ ಪುನರಾವರ್ತಿಸಲಾಗುತ್ತಿಲ್ಲ. ಅಲ್ಲಾಹನು ತನ್ನ ಗುಣವಿಶೇಷತೆಗಳನ್ನು ಯಾವುದೇ ಪ್ರತ್ಯೇಕ ಸಮಯ ಮತ್ತು ಪ್ರತ್ಯೇಕ ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸಲಿಲ್ಲ. ಬದಲಾಗಿ, ಇಂದು ಸಹ ಅಲ್ಲಾಹನು ತನ್ನ ಗುಣವಿಶೇಷಗಳನ್ನು ಪ್ರಕಟಿಸುತ್ತಾನೆ ಎಂಬ ದೃಢವಿಶ್ವಾಸವನ್ನು ಉಂಟು ಮಾಡಲಾಗುತಿಲ್ಲ. ಈ ಸಂಗತಿಗಳನ್ನು ಆಗಿಂದಾಗ್ಗೆ ಪ್ರಸ್ತಾಪಿಸುವುದಾದರೆ, ಈ ಸಂಬಂಧ ಸ್ಥಾಪಿಸುವ ಮಾರ್ಗ ಹೇಳಿ ಕೊಡುವುದಾದರೆ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಮಾಡಿದ ವಾಗ್ದಾನಗಳ ಬಗ್ಗೆ ಹೇಳಿ ಕೊಡುವುದಾದರೆ, ಪ್ರಾರ್ಥನೆ ಸ್ವೀಕಾರದ ತತ್ವವೂ ತಿಳಿಯುವುದು, ದೃಷ್ಟಾಂತಗಳೂ ಪ್ರಕಟವಾಗುವುವು.

ಈ ಕಾಲದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧ ಗುಲಾಮರಾದ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಸೇರಿ ಅಲ್ಲಾಹನ ಸಾಮೀಪ್ಯ ಗಳಿಸಬಹುದು. ದೃಷ್ಟಾಂತಗಳು ಕೇವಲ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಅಥವಾ ಅವರ ಕಾಲಘಟ್ಟಕ್ಕೆ ಸೀಮಿತವಾಗಿರಲಿಲ್ಲ. ಬದಲಾಗಿ, ಅಲ್ಲಾಹನು ತನ್ನ ಸಕಲ ಶಕ್ತಿ ಸಾಮರ್ಥ್ಯದೊಂದಿಗೆ ತನ್ನ ಮುಖವನ್ನು ತೋರಿಸುತ್ತಾನೆ ಎಂಬ ಸಂಗತಿಯನ್ನು ಸರ್ವಸಾಧಾರಣವಾಗಿ ಹೇಳುತ್ತಿರಬೇಕಾದ ಆವಶ್ಯಕತೆ ಇದೆ. ಒಳಿತುಗಳನ್ನು ಮಾಡುವ ಆವೇಶ, ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ಆಕಾಂಕ್ಷೆ ನಮ್ಮ ಜಮಾಅತಿನಲ್ಲಿ ಸರ್ವಸಾಧಾರಣವಾದರೆ, ಪಾಪಗಳನ್ನು ಬಹಳಷ್ಟು ಮಟ್ಟಿಗೆ ನಿರ್ಮೂಲನ ಮಾಡುವ ದೊಡ್ಡದಾದೊಂದು ವಿಭಾಗ ಉಂಟಾಗುವುದು. ಪಾಪಗಳನ್ನು ಪೂರ್ಣ ರೀತಿಯಲ್ಲಿ ನಿರ್ನಾಮ ಮಾಡುವುದು ಕಷ್ಟಕರವಾದ ಕೆಲಸವಾಗಿದೆ. ಹಾಗೆ ಮಾಡಬಹುದು ಎಂದು

ವಾದಿಸಲಿಕ್ಕೆ ಆಗದು. ಆದರೆ ಸಾಕಷ್ಟು ಮಟ್ಟಿಗೆ ಪಾಪಗಳ ಮೇಲೆ ವಿಜಯ ಸಾಧಿಸಬಹುದು ಅಥವಾ ಜಮಾಅತಿನ ಬಹುಪಾಲು ಜನರು ಪಾಪಗಳ ಮೇಲೆ ವಿಜಯ ಸಾಧಿಸಿದವರಿಂದ ಕೂಡಿದ್ದವರಾಗುವರು.

ಅದಕ್ಕಾಗಿ ನಮ್ಮ ಮುರಬ್ಬಿಗಳೂ ಅಮೀರ್‌ಗಳೂ ಹುದ್ದೇದಾರರೂ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಸುಧಾರಣೆ ಮಾಡಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ಪರಿಪೂರ್ಣವಾಗಿ ಅನುಸರಿಸುವವರು ಅಲ್ಲಾಹನ ಸಾಮೀಪ್ಯ ಗಳಿಸುವವರಾಗುವರು ಮತ್ತು ಅಲ್ಲಾಹನು ಇಂತಹ ಜನರ ಪ್ರಾರ್ಥನೆಗಳನ್ನು ಕೇಳುತ್ತಾನೆ ಎಂದು ಹಝ್ರತ್ ಮಸೀಹ್ ಮೌಊದ್‌ರು(ಅ) ಹೇಳಿದ್ದಾರೆ ಎಂದು ಹೇಳಿ ಸುಧಾರಣೆ ಮಾಡಬೇಕು. ಜಮಾಅತಿನಲ್ಲಿ ಇಂತಹ ಜನರಿದ್ದಾರೆ ಎಂಬುದು ಅಲ್ಲಾಹನ ಅನುಗ್ರಹವಾಗಿದೆ. ನನಗೆ ಅವರು ಪತ್ರವನ್ನೂ ಬರೆಯುತ್ತಿರುತ್ತಾರೆ. ಕೆಲವು ಸಂಭವಗಳು ವಿವಿಧ ವೇಳೆಗಳಲ್ಲಿ ಪ್ರಸ್ತಾಪಿಸಲಾಗುತ್ತದೆ. ನಾನೂ ಹೇಳುತ್ತಿರುತ್ತೇನೆ. ಇಂತಹ ಸಂಭವಗಳನ್ನು ಅನುಕರಿಸಲಿಕ್ಕಾಗಿ ಹೇಳಲಾಗುತ್ತದೆ. ಅಲ್ಲಾಹನ ಸಾಮೀಪ್ಯ ಗಳಿಸಲು ಅವುಗಳನ್ನು ಕೇಳಿ ಅನುಕರಿಸಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಉತ್ತರಗಳನ್ನು ಕೊಡುವ ಮತ್ತು ಪ್ರಾರ್ಥನೆಗಳನ್ನು ಕೇಳುವ ದೇವನನ್ನು ಲೋಕದಲ್ಲಿರುವ ಯಾವುದೇ ಸಮುದಾಯ ನಂಬುತ್ತಿಲ್ಲ. 'ನಾನು ಯೇಸುವನ್ನು ದೇವನಾಗಿ ನಂಬಿದ್ದೇನೆ, ಅವರು ನನ್ನ ಪ್ರಾರ್ಥನೆಗಳನ್ನು ಕೇಳಿ ಉತ್ತರ ಕೊಡುತ್ತಾನೆ' ಎಂದು ಯಾವನಾದರೂ ಕ್ರೈಸ್ತನು ಹೇಳಬಹುದೇ? ಖಂಡಿತವಿಲ್ಲ. ಮಾತನಾಡುವ ಏಕೈಕ ದೇವ ಪವಿತ್ರ ಖುರ್‌ಆನ್ ಮುಂದಿರಿಸಿದ ಇಸ್ಲಾಮಿನ ದೇವನು ಮಾತ್ರ. **ಉದ್‌ಊನೀ ಅಸ್‌ತಜಿಬ್‌ಲಕುಂ** (40:61) (ನನ್ನೊಡನೆ ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ನೀಡುವೆನು) ಎಂದು ಅವನು ಹೇಳಿದ್ದಾನೆ.

ಒಟ್ಟಿನಲ್ಲಿ, ಈ ಸಂಗತಿಗಳನ್ನು ಪದೇ ಪದೇ ಜಮಾಅತಿನ ಮುಂದೆ ಇರಿಸಿದರೆ, ಜಮಾಅತಿನ ದೊಡ್ಡದಾದೊಂದು ವಿಭಾಗದಲ್ಲಿ ಶಕ್ತಿ ಉಂಟಾಗುವುದು, ಸಾವಿರಾರು ಪಾಪಗಳ ಮೇಲೆ ವಿಜಯ ಹೊಂದುವಷ್ಟು ದೃಢವಾದ ಇಚ್ಛಾಶಕ್ತಿ ಉಂಟಾಗುವುದು. ಅವುಗಳಿಂದ ಸದಾ ಸುರಕ್ಷಿತರಾಗುವುದು ಮತ್ತು ಅಸ್ಥಿರವಲ್ಲದ ಒಂದು ಸಂಬಂಧ ಅಲ್ಲಾಹನೊಂದಿಗೆ ಉಂಟಾಗುವುದು. ಹಝ್ರತ್ ಮಸೀಹ್ ಮೌಊದ್‌ರ(ಅ) ಆಗಮನದ ಉದ್ದೇಶ, ಮನುಷ್ಯನನ್ನು ಪಾಪಗಳಿಂದ ಸುರಕ್ಷಿತಗೊಳಿಸುವುದು, ಅಲ್ಲಾಹನ ಸಂತೃಪ್ತಿ ಎಲ್ಲಕ್ಕಿಂತ ಮೇಲೆ ಆಗುವಂತಹ ಸಂಬಂಧ

ಅಲ್ಲಾಹನೊಂದಿಗೆ ಸ್ಥಾಪಿಸುವುದು, ಆರಾಧನೆಯಿಂದ ಬಿಡುಗಡೆ ಹೊಂದಲು ನೆಪಗಳನ್ನು ಹುಡುಕುವುದರ ಅಥವಾ ಕರ್ತವ್ಯ ನಿರ್ವಹಣೆ ಎಂಬ ಮಟ್ಟಿಗೆ ಬೇಗ ಬೇಗನೇ ಮತ್ತು ತಲೆಯಿಂದ ಭಾರ ಇಳಿಸಿ ಹಾಕುವ ರೀತಿಯ ಆರಾಧನೆ ಮಾಡುವ ಬದಲಾಗಿ, ಆರಾಧನೆಯಲ್ಲಿ ಆಸಕ್ತಿ ಮತ್ತು ಅಭಿರುಚಿ ಹುಟ್ಟಿಸುವುದು ಆಗಿತ್ತು.

ಪ್ರತಿಯೊಬ್ಬರು ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಕೆಲಸಗಳನ್ನು ಶುರು ಮಾಡಿದರೆ, ಸುವ್ಯಕ್ತವಾದ ಪರಿವರ್ತನೆಯನ್ನು ಕಾಣಬಹುದಾಗಿದೆ. ಅರಿವಿನ ಹೆಸರಲ್ಲಿ ಮಕ್ಕಳಿಗೆ ಶಾಲೆಗಳಲ್ಲಿ ವಿವಿಧ ಕೆಡುಕುಗಳ ಬಗ್ಗೆ ಹೇಳಿಕೊಡಲಾಗುವ ಈ ಕಾಲದಲ್ಲಿ ನಮ್ಮ ಜಮಾಅತಿನ ವ್ಯವಸ್ಥೆ ಸಾಕಷ್ಟು ಮುಂದೆ ಬಂದು ಮಕ್ಕಳಿಗೆ ಮತ್ತು ಯುವಕರಿಗೆ ನಿಜಸ್ಥಿತಿಯ ತಿಳಿವು ಮೂಡಿಸಬೇಕು. ಅರಿವಿನ ಹೆಸರಲ್ಲಿ ಮಕ್ಕಳಿಗೆ ಶಾಲೆಗಳಲ್ಲಿ ಕೊಡಲಾಗುವ ಇಂತಹ ಶಿಕ್ಷಣದ ಹಾನಿಗಳ ಬಗ್ಗೆ ಸ್ವತಃ ಅರಿತಿರಬೇಕಾದ ಆವಶ್ಯಕತೆ ಇದೆ. ತಮ್ಮನ್ನೂ ತಮ್ಮ ಮಕ್ಕಳನ್ನೂ ಸುರಕ್ಷಿತಗೊಳಿಸಲು ತಂದೆ ತಾಯಂದಿರು ಇವುಗಳನ್ನು ತಿಳಿದಿರಬೇಕು. ಕೆಡುಕು ಮತ್ತು ಒಳಿತಿನ ವ್ಯತ್ಯಾಸದ ಅರಿವು ಮೂಡಲಿಕ್ಕಾಗಿ ಎಂಬ ಕಾರಣ ಹೇಳಿ ಸಣ್ಣ ವಯಸ್ಸಲ್ಲಿ  ಕೆಲವು ಅನಾವಶ್ಯಕ ಸಂಗತಿಗಳನ್ನು ಮಕ್ಕಳಿಗೆ ಇಲ್ಲಿ ಕಲಿಸಲಾಗುತ್ತದೆ. ಸತ್ಯದಲ್ಲಿ ಇದರಿಂದ ಕೆಡುಕು ಮತ್ತು ಒಳಿತಿನ ವ್ಯತ್ಯಾಸ ತಿಳಿಯುವ ಬದಲಿಗೆ ಹೆಚ್ಚಿನವರ ಮನಸ್ಸು ಕೆಟ್ಟ ಯೋಚನೆಯುಳ್ಳದ್ದಾಗುತ್ತದೆ. ಏಕೆಂದರೆ, ಅವರು ತಂದೆ – ತಾಯಂದಿರ ಅಥವಾ ಸುತ್ತುಮುತ್ತಲಿನ ಕೆಡುಕಿನ ಮಾದರಿಗಳನ್ನು ಜಾಸ್ತಿ ಮತ್ತು ಒಳಿತಿನ ಮಾದರಿಗಳನ್ನು ಕಡಿಮೆ ಕಾಣುತ್ತಾರೆ.

ಆದ್ದರಿಂದ ಮುರಬ್ಬಿಗಳು, ಹುದ್ದೇದಾರರು, ಶಾಖಾ ಸಂಘಟನೆಯ ಹುದ್ದೇದಾರರು,  ತಂದೆ – ತಾಯಂದಿರು ಎಲ್ಲರೂ ಸೇರಿ ತಪ್ಪಾದ ಅರಿವಿನ ಜಾಗದಲ್ಲಿ ಸರಿಯಾದ ಅರಿವು ಮೂಡಿಸುವ ಏರ್ಪಾಡು ಮಾಡಬೇಕು. ಶಾಲೆಗಳ ರೀತಿಯನ್ನು ನಮಗೆ ತಡೆಯಲಾಗದು. ಅಲ್ಲಿ ನಾವು ಮಧ್ಯೆ ಪ್ರವೇಶಿಸಲಾಗದು. ಆದರೆ ಮಕ್ಕಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು, ಕೆಡುಕು ಮತ್ತು ನೀಚಕೃತ್ಯಗಳಿಂದ ದೂರವಿರಲು ಕಲಿಸಿ, ತಮ್ಮ ಕರ್ಮಪರವಾದ ಮಾದರಿಗಳನ್ನು ತೋರಿಸಿ, ಸುತ್ತುಮುತ್ತಲಿನ ಪ್ರಭಾವದಿಂದ ಸುರಕ್ಷಿತಗೊಳಿಸಬಹುದು. ಅಲ್ಲಾಹನು ನಮಗೆ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸೌಭಾಗ್ಯ ನೀಡಲಿ. ಆಮೀನ್.

## (8)

## ಜುಮುಅ ಖುತ್‌ಬದ ಸಾರಾಂಶ (31/01/2014)

### ಕರ್ಮಸುಧಾರಣೆಗಾಗಿ ನಾಲ್ಕು ಆಶ್ರಯಗಳ ಆವಶ್ಯಕತೆ.

**1. ಈಮಾನ್ (ವಿಶ್ವಾಸ). 2. ಕರ್ಮ. 3. ಮೇಲ್ನೋಟ.**
**4. ಜಬರ್ (ಒತ್ತಾಯ).**

ಹುಝೂರ್ ಹೇಳಿದರು: ಕಳೆದ ಖುತ್‌ಬದಲ್ಲಿ ಇಚ್ಛಾಶಕ್ತಿ ಉಂಟು ಮಾಡುವ ಬಗ್ಗೆ ಮತ್ತು ಅರಿವಿನ ಕೊರತೆಯನ್ನು ದೂರ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ ಕರ್ಮಪರವಾದ ಬಲಹೀನತೆಗಳನ್ನು ದೂರ ಮಾಡುವ ಮಾರ್ಗಗಳೇನು ಅಥವಾ ಕರ್ಮಪರವಾದ ಶಕ್ತಿಯನ್ನು ವರ್ಧಿಸುವುದು ಹೇಗೆ ಎಂಬ ಮೂರನೇ ಸಂಗತಿಯ ಬಗ್ಗೆ ಹೇಳಲಾಗಿರಲಿಲ್ಲ. ಹಿಂದಿನ ಖುತ್‌ಬಗಳಲ್ಲಿ ಹೇಳಿದ ಹಾಗೆ ಇದಕ್ಕಾಗಿ ಹೊರಗಿನ ಚಿಕಿತ್ಸೆಯ ಅಥವಾ ಇತರರ ಸಹಾಯದ ಆವಶ್ಯಕತೆ ಇದೆ. ಕರ್ಮ ಸುಧಾರಣೆಗಾಗಿ ಎರಡು ವಿವಿಧ ಆಶ್ರಯಗಳ ಆವಶ್ಯಕತೆ ಇದೆ. ಒಂದು ಮೇಲ್ನೋಟ, ಎರಡು ಒತ್ತಾಯ. ಮೇಲ್ನೋಟವೆಂದರೆ, ಯಾವುದೇ ಕೆಟ್ಟ ಕೃತ್ಯ ಮಾಡದಂತೆ ಮೇಲ್ನೋಟ ವಹಿಸುವುದು, ನಿರಂತರ ಗಮನವಿರಿಸುವುದು. ಈ ರೀತಿ ಮೇಲ್ನೋಟ ಲೌಕಿಕ ಕಾರ್ಯಗಳಲ್ಲಿಯೂ ವಹಿಸಲಾಗುತ್ತದೆ. ಮನೆಯ ತಂದೆ – ತಾಯಂದಿರು ತಮ್ಮ ಮಕ್ಕಳ ಮೇಲ್ನೋಟ ವಹಿಸುತ್ತಾರೆ. ಶಾಲೆಗಳಲ್ಲಿ ಅಧ್ಯಾಪಕರು ಕಲಿಸುವುದರೊಂದಿಗೆ ಮೇಲ್ನೋಟದ ಪಾತ್ರ ಸಹ ವಹಿಸುತ್ತಿರುತ್ತಾರೆ. ಕೆಲವು ಸಲ ಸರ್ಕಾರದ ಕಾರ್ಯದರ್ಶಿಗಳು ಮೇಲ್ನೋಟ ವಹಿಸುತ್ತಾರೆ. ರಸ್ತೆಯಲ್ಲಿ ವಾಹನಗಳಿಗಾಗಿ ಸ್ಥಾಯಿಯಾದ ಕೆಮರಾ ಅಳವಡಿಸಿ ಕೆಮರಾ ಇದೆ ಎಂಬ ಸೂಚನೆ ಫಲಕ ಸಹ ಇಡುತ್ತಾರೆ. ಇವುಗಳೆಲ್ಲ ಮೇಲ್ನೋಟದ ಕೆಲಸವಾಗಿದೆ.

ಈ ಎಲ್ಲ ಮೇಲ್ನೋಟದ ಉದ್ದೇಶ ಅನಾಹುತ ಉಂಟಾಗಲು ಕಾರಣವಾಗುವ ಕೆಲಸಗಳನ್ನು ತಡೆಯುವುದಾಗಿದೆ. ಪ್ರತಿಯೊಂದು ಸಮಾಜದ ಕಾನೂನಿನಲ್ಲಿ ಮೇಲ್ನೋಟವೆಂಬುದು ಸುಧಾರಣೆಯ ಒಂದು ಮಾರ್ಗ ವಾಗಿದೆ. ಈ ಮೇಲ್ನೋಟ ಕಾರ್ಯಸುಧಾರಣೆಗೆ ಆವಶ್ಯಕವಾದುದಾಗಿದೆ. ಸಮಾಜ ಮೇಲ್ನೋಟ ವಹಿಸುತ್ತದೆ ಎಂಬ ಕಾರಣದಿಂದ ಮನುಷ್ಯನು

ಹಲವು ದುಷ್ಕೃತ್ಯಗಳಿಂದ ದೂರವಿರುತ್ತಾನೆ. ತಂದೆ ತಾಯಂದಿರು ತಮ್ಮ ಕ್ಷೇತ್ರದಲ್ಲಿ ಮೇಲ್ನೋಟ ವಹಿಸುತ್ತಿರುತ್ತಾರೆ. ಅದೇ ರೀತಿಯಲ್ಲಿ ತಮ್ಮ ಕ್ಷೇತ್ರದಲ್ಲಿ ಮೇಲ್ನೋಟ ವಹಿಸುವುದು ಮುರಬ್ಬಿಗಳ ಕೆಲಸವಾಗಿದೆ. ಇತರ ಜಮಾಅತಿನ ವ್ಯವಸ್ಥೆಗಳು ತಮ್ಮ ತಮ್ಮ ಕಾರ್ಯವಲಯದಲ್ಲಿ ಮೇಲ್ನೋಟ ವಹಿಸಬೇಕು. **"ಪ್ರತಿಯೊಬ್ಬ ಮೇಲ್ನೋಟಗಾರನಿಂದ ಅವನ ಮೇಲ್ನೋಟದಲ್ಲಿರುವವರ ಬಗ್ಗೆ ಕೇಳಲಾಗುವುದು"** ಎಂಬ ಇಸ್ಲಾಮಿನ ಶಿಕ್ಷಣ ಸಹ ಮುಂದಿರಿಸುವಾಗ ಮೇಲ್ನೋಟಗಾರನ ಮತ್ತು ಅವನ ಮೇಲ್ನೋಟದಲ್ಲಿರುವವರ ಸಹ ಸುಧಾರಣೆ ಆಗುವುದು. ಒಟ್ಟಿನಲ್ಲಿ ಕರ್ಮಸುಧಾರಣೆಯಲ್ಲಿ ಮೇಲ್ನೋಟ ವಹಿಸುವುದು ಎಂಬುದು ಸಹ ಪ್ರಭಾವಶಾಲಿಯಾದ ಮಾರ್ಗವಾಗಿದೆ.

ಸುಧಾರಣೆಗೆ ಆವಶ್ಯಕವಾಗಿರುವ ಎರಡನೇ ಸಂಗತಿ **"ಒತ್ತಾಯ"** ಆಗಿದೆ. ಧರ್ಮ ವಿಷಯದಲ್ಲಿ ಬಲಪ್ರಯೋಗವಿಲ್ಲವೆಂದು ಒಂದು ಕಡೆ ಹೇಳುತ್ತಿರುವಾಗ, ಮತ್ತೊಂದೆಡೆ ಕರ್ಮಸುಧಾರಣೆಗಾಗಿ ಸೂಚಿಸಲಾದ ಚಿಕಿತ್ಸೆಯಲ್ಲಿ ಒತ್ತಾಯವಿರಲು ಹೇಗೆ ಸಾಧ್ಯವೆಂದು ಯಾರಿಗಾದರೂ ಅನಿಸಬಹುದು. ಇಲ್ಲಿ ಸೂಚಿಸಲಾದ ಬಲಪ್ರಯೋಗ ಎಂಬುದು ಧರ್ಮವನ್ನು ಅಂಗೀಕರಿಸುವುದು ಅಥವಾ ಧರ್ಮವನ್ನು ತ್ಯಜಿಸುವ ವಿಷಯದಲ್ಲಲ್ಲ. ಯಾವುದೇ ಧರ್ಮವನ್ನು ಕೈಗೊಳ್ಳಲು ಮತ್ತು ಉಪೇಕ್ಷಿಸಲು ಪ್ರತಿಯೊಬ್ಬನಿಗೂ ಸ್ವಾತಂತ್ರ್ಯವಿದೆ. ಆದರೆ ಯಾರಾದರೂ ದೀನಿನೊಂದಿಗೆ ಸಂಬಂಧವಿರಿಸಿಯೂ ಅದರ ನಿಯಮಗಳನ್ನು ಅನುಸರಿಸದೇ ಇರುವುದಾದರೆ, ಅವುಗಳನ್ನು ಮುರಿಯುವುದಾದರೆ, ತನ್ನನ್ನು ತಾನೇ ಜಮಾಅತಿನ ವ್ಯವಸ್ಥೆಯ ಭಾಗವೆಂದು ಹೇಳಿ ವ್ಯವಸ್ಥೆಯ ಕಾನೂನುಗಳನ್ನು ಉಲ್ಲಂಘಿಸುವುದಾದರೆ, ಅವನ ಮೇಲೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಇಲ್ಲಿ ಬಲಪ್ರಯೋಗವೆಂದರೆ ಇದೇ ಆಗಿದೆ. ಜಮಾಅತಿನ ವ್ಯವಸ್ಥೆಯ ಭಾಗವಾಗಿ ಇರಬೇಕಾದರೆ ಅದರ ಅಧ್ಯಾಪನೆಗಳನ್ನು ಪಾಲಿಸಬೇಕಾಗಿದೆ. ಇವೆಲ್ಲದರ ಉದ್ದೇಶ ಕರ್ಮಪರವಾದ ಬಲಹೀನತೆಗಳನ್ನು ದೂರಮಾಡಲು ಸುಧಾರಣೆ ಮಾಡುವುದಾಗಿದೆ. ಜಮಾಅತಿನಲ್ಲಿ ಸಹ ಜಮಾಅತಿನ ವ್ಯವಸ್ಥೆ ಶಿಕ್ಷೆ ಕೊಡುವುದರ ಮೂಲ ಉದ್ದೇಶ ಸುಧಾರಣೆಯಾಗಿರುತ್ತದೆ. ಅದರ ಉದ್ದೇಶ ಯಾರನ್ನಾದರೂ ಅಪಮಾನಿಸುವುದು ಅಥವಾ ವಿನಾ ಕಾರಣ ತೊಂದರೆಗೆ ಸಿಲುಕಿಸುವುದು ಆಗಿರುವುದಿಲ್ಲ. ಬಲಪ್ರಯೋಗ ಸರ್ಕಾರದ ಕಾನೂನಿನಲ್ಲಿಯೂ ಜಾರಿಯಲ್ಲಿದೆ. ಶಿಕ್ಷೆಯೂ ನೀಡಲಾಗುತ್ತದೆ. ಜೈಲಿಗೂ ಹಾಕಲಾಗುತ್ತದೆ. ದಂಡವೂ ಹಾಕಲಾಗುತ್ತದೆ. ಕೆಲವು ಸಲ ಹೊಡೆಯಲಾಗುತ್ತದೆ. ಇದರ

ಉದ್ದೇಶ ಸಮಾಜದಲ್ಲಿ ಶಾಂತಿ ನೆಲೆನಿಲ್ಲಲಿ ಮತ್ತು ಇತರರಿಗೆ ಹಾನಿ ಉಂಟು ಮಾಡುವವರು ಹಾನಿ ಉಂಟು ಮಾಡುವ ಕೃತ್ಯಗಳಿಂದ ದೂರವಿರಲಿ ಎಂದಾಗಿದೆ. ಕೆಲವು ಸಲ ತನಗೆ ತಾನೇ ಹಾನಿ ಉಂಟುಮಾಡುವ ಕೆಲಸ ಮಾಡಿದರೂ ಶಿಕ್ಷೆ ಸಿಗುತ್ತದೆ. ಆದರೆ ಈ ಶಿಕ್ಷೆಗಳಲ್ಲಿ ಸುಧಾರಣೆಯ ವಿವಿಧ ಮಾರ್ಗಗಳನ್ನು ಕೈಗೊಳ್ಳಲಾಗುತ್ತದೆ. ಒಬ್ಬ ವ್ಯಕ್ತಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದ್ದರೆ, ಅದಕ್ಕೆ ಕಾರಣ ಅವನು ಒಬ್ಬನ ಜೀವವನ್ನು ತೆಗೆದಿರುತ್ತಾನೆ ಎಂಬುದಾಗಿದೆ. ಕೊಲೆಗಾರರರಿಗೆ ಪೂರ್ಣ ಸ್ವಾತಂತ್ರ್ಯ ಕೊಡುವುದಾದರೆ ಸಮಾಜದಲ್ಲಿ ಶಾಂತಿಭಂಗ ಉಂಟಾಗುವುದು. ಕೊಲೆಗೆ ಮರಣದಂಡನೆ ವಿಧಿಸುವಾಗ ಇಂತಹ ಹಲವು ಜನರ ಸುಧಾರಣೆ ಆಗುತ್ತದೆ ಅಥವಾ ಕೊಲೆಯ ಕಡೆಗೆ ಒಲವಿರುವ, ಆವೇಶಭರಿತರಾದ ಅನೇಕರ ಸುಧಾರಣೆಯಾಗುತ್ತದೆ. ಆದ್ದರಿಂದ ಬಲಪ್ರಯೋಗ ಎಂಬುದು  ಲೋಕದಲ್ಲಿಯೂ ಜಾರಿಯಿರುವ ಸುಧಾರಣೆಯ ಒಂದು ಮಾರ್ಗವಾಗಿದೆ. ಲೌಕಿಕರ ಬಲಪ್ರಯೋಗ ಅಥವಾ ಲೌಕಿಕ ಶಿಕ್ಷೆಗಳ ಬಲಪ್ರಯೋಗಕ್ಕೆ ವಿಶ್ವಾಸದೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ. ಆದರೆ ಧರ್ಮದೊಂದಿಗೆ ಸಂಬಂಧವಿರುವ ವ್ಯಕ್ತಿಯ ಮೇಲೆ ಬಲಪ್ರಯೋಗ ಮಾಡಲಾಗುವಾಗ, ಧಾರ್ಮಿಕ ವ್ಯವಸ್ಥೆಯ ಅಡಿಯಲ್ಲಿ ಅವನಿಗೆ ಶಿಕ್ಷೆ ಕೊಡಲಾಗುವಾಗ, (ಅದು ಯಾವುದೇ ರೀತಿಯ ಶಿಕ್ಷೆಯಾದರೂ ಸರಿ, ಕೆಲವು ಬಾರಿ ಚಂದಾ ಕೊಡುವುದರ ಮೇಲೆ ಪ್ರತಿಬಂಧ ಹೇರಲಾಗುತ್ತದೆ) ನಿಸ್ಸಂಶಯವಾಗಿಯೂ ಒತ್ತಾಯದಿಂದ ಈ ಕೆಲಸಗಳಿಂದ ತಡೆಯಲಾಗಿರುತ್ತದೆ. ಆದರೆ ಶಿಕ್ಷೆಯಿಂದ ಪಾರಾಗಲು, ಕಾಲದ ಖಲೀಫರ ಅತೃಪ್ತಿಯಿಂದ ಪಾರಾಗಲು ಅಥವಾ ಅಲ್ಲಾಹನ ಕೋಪದಿಂದ ರಕ್ಷೆ ಹೊಂದಲು, ಗಮನಹರಿಸಿ ಕೊಡಲಾದ ಸತ್ಕರ್ಮಗಳನ್ನು ಯಾರಾದರೂ ಮಾಡುವುದಾದರೆ, ಮೆಲ್ಲಮೆಲ್ಲನೆ ಅವರ ಹೃದಯದಲ್ಲಿ ವಿಶ್ವಾಸ ಉಂಟಾಗಿ ಅದು ವರ್ಧಿಸಲು ಶುರುವಾಗುತ್ತದೆ. ಇಂತಹ ಜನರು ಕೆಡುಕುಗಳನ್ನು ಉಪೇಕ್ಷಿಸಿ ಸಂತೋಷದಿಂದ ಸತ್ಕರ್ಮಗಳನ್ನು ಮಾಡುವವರಾಗುವರು. ಸತ್ಕರ್ಮಗಳನ್ನು ಮಾಡುವ ಅಭ್ಯಾಸ ಉಂಟಾಗಲು ವಿವಿಧ ಮಾರ್ಗಗಳನ್ನು ಅವಲಂಬಿಸಬೇಕಾಗುತ್ತದೆ. ಈ ಮಾರ್ಗಗಳನ್ನು ಕೈಗೊಳ್ಳದೆ ಕರ್ಮ ಸುಧಾರಣೆಯಲ್ಲಿ ಮೇಲುಗೈ ಸಾಧಿಸಲಾಗದು. ಆದ್ದರಿಂದ ಈ ಮಾರ್ಗಗಳ ಉಪಯೋಗ ಅತಿ ಆವಶ್ಯಕವಾದುದಾಗಿದೆ.

ಈ ನಾಲ್ಕು ಸಂಗತಿಗಳಿಲ್ಲದೆ ಸುಧಾರಣೆ ಕಷ್ಟಸಾಧ್ಯ. ವಿಶ್ವಾಸದ ಶಕ್ತಿ ತಮ್ಮೊಳಗೆ ಇಲ್ಲದ ಒಂದು ವಿಭಾಗ ಲೋಕದಲ್ಲಿದೆ ಎಂದು ನಾವು ಕೂಲಂಕಷವಾಗಿ ಪರೀಕ್ಷಣೆ ನಡೆಸಿದರೆ ತಿಳಿದುಬರುತ್ತದೆ. ಎಂದರೆ

ಕರ್ಮಸುಧಾರಣೆಗಾಗಿ ಒಬ್ಬ ವ್ಯಕ್ತಿಯಲ್ಲಿ ಇರಬೇಕಾದ ವಿಶ್ವಾಸ ಶಕ್ತಿಯ ಮಟ್ಟವನ್ನು ಹೊಂದಿರುವುದಿಲ್ಲ. ಇಂತಹ ಜನರ ಹೃದಯಗಳಲ್ಲಿ ವಿಶ್ವಾಸ ಶಕ್ತಿಯನ್ನು ತುಂಬಿದರೆ ಅವರ ಕರ್ಮಗಳು ಸರಿಯಾಗುತ್ತದೆ. ಅದೇ ರೀತಿಯಲ್ಲಿ, ಅರಿವಿನ ಕೊರತೆಯಿಂದ ಪಾಪಗಳಿಗೆ ಬಲಿಯಾಗುವ ಒಂದು ವಿಭಾಗ ಸಹ ಇದೆ. ಆದ್ದರಿಂದ ಅವರಿಗೆ ಸರಿಯಾದ ಅರಿವಿನ ಆವಶ್ಯಕತೆಯಿರುತ್ತದೆ. ಸತ್ಕರ್ಮಗಳನ್ನು ಮಾಡಲು ಇತರರ ನೆರವು ಬೇಕಾದ ಒಂದು ವಿಭಾಗ ಸಹ ಇದೆ. ಹೀಗೆ ಮೂರು ವಿಧದ ಜನರಿದ್ದಾರೆ. ಇವರ ಆವಶ್ಯಕತೆ ಎರಡು ರೀತಿಯಲ್ಲಿ ಪೂರ್ತಿಗೊಳಿಸಬಹುದು. ಒಂದು ಮೇಲ್ನೋಟ ವಹಿಸುವುದರ ಮೂಲಕವಾಗಿದೆ. ನಾನೀಗ ವಿಶದವಾಗಿ ಹೇಳಿದಂತೆ ಮೇಲ್ನೋಟ ವಹಿಸುವುದಾದರೆ ಕೆಡುಕುಗಳು ದೂರವಾಗುವುವು ಮತ್ತು ಒಳಿತಿನ ಕಡೆಗೆ ಶ್ರದ್ಧೆಯುಂಟಾಗುವುದು. ಆದರೆ ಪರಿಪೂರ್ಣವಾಗಿ ಅಧಃಪತನಗೊಂಡು ಮೇಲ್ನೋಟದಿಂದಲೂ ಕೆಡುಕುನಿಂದ ದೂರಸರಿಯದ ವಿಭಾಗಕ್ಕೆ ಶಿಕ್ಷೆ ಕೊಡುವ ತನಕ ಸುಧಾರಣೆ ಉಂಟಾಗದು.

ಜಮಾಅತಿನ ಸುಧಾರಣೆಗಾಗಿ ಈ ನಾಲ್ಕು ಮಾರ್ಗಗಳನ್ನು ಅವಲಂಬಿಸಬೇಕಾಗಿದೆ. ಪ್ರತಿಯೊಬ್ಬ ರೋಗಿಯ ಚಿಕಿತ್ಸೆ ಅವನ ರೋಗ ಲಕ್ಷಣ ಪ್ರಕಾರ ಮಾಡಬೇಕಾಗಿದೆ. ಪ್ರಥಮ ಚಿಕಿತ್ಸೆ ಎಂಬ ರೀತಿಯಲ್ಲಿ ವಿಶ್ವಾಸದಲ್ಲಿ ದೃಢತೆ ಉಂಟು ಮಾಡಲು ತರಬೇತಿ ಮಾಡಬೇಕು. ಇದಕ್ಕಾಗಿ ಹಝ್ರತ್ ಮಸೀಹ್ ಮೌಊದ್‌ರ[ಅ] ದೃಷ್ಟಾಂತಗಳು, ಅವರಿಗೆ ಲಭಿಸಿದ ದಿವ್ಯವಾಣಿಗಳು, ಅವರಿಗೆ ಅಲ್ಲಾಹನೊಂದಿಗಿದ್ದ ಸಂಬಂಧ, ಅವರ ಮೂಲಕ ಅವರ ಮೇಲೆ ವಿಶ್ವಾಸ ಹೊಂದಿದವರಲ್ಲಿ ಉಂಟಾದ ಪರಿವರ್ತನೆಗಳ ಬಗ್ಗೆ ಪ್ರಸ್ತಾಪಿಸಬೇಕು. ಈ ಪ್ರಸ್ತಾಪ ನಿರಂತರ ಮತ್ತು ಪದೇ ಪದೇ ಆಗಿರಬೇಕು. ಅಲ್ಲಾಹನ ಪ್ರೀತಿ ಮನುಷ್ಯನಿಗೆ ಹೇಗೆ ಲಭಿಸುವುದು? ಅವನ ಪ್ರೀತಿ ಒಬ್ಬ ವ್ಯಕ್ತಿಯೊಂದಿಗಿದ್ದರೆ, ಅಲ್ಲಾಹನು ಅವನೊಂದಿಗೆ ಯಾವ ರೀತಿಯಲ್ಲಿ ವಿಶೇಷವಾಗಿ ವರ್ತಿಸುತ್ತಾನೆ? ಹಝ್ರತ್ ಮಸೀಹ್ ಮೌಊದ್‌ರು[ಅ] ಇದರ ಬಗ್ಗೆ ಏನು ಹೇಳಿದ್ದಾರೆ? ಎಂದೆಲ್ಲ ಹೇಳಿಕೊಡಬೇಕು. ವಿವಿಧ ಸಮುದಾಯಗಳಿಂದ ಅಹ್ಮದಿಯಾಗುವವರು, ಹಝ್ರತ್ ಮಸೀಹ್ ಮೌಊದ್‌ರ[ಅ] ಗ್ರಂಥಗಳನ್ನು ಓದಿ ಅವರಿಗೆ ಉಂಟಾದ ಪರಿವರ್ತನೆ ಮತ್ತು ವಿಶ್ವಾಸ ವರ್ಧನೆಯ ಬಗ್ಗೆ ತಮ್ಮ ಅನುಭವಗಳನ್ನು ಬರೆಯುತ್ತಾರೆ. ಖಂಡಿತವಾಗಿಯೂ ಗ್ರಂಥಗಳನ್ನು ಓದಿ ಅವರ ವಿಶ್ವಾಸಪರವಾದ ತಪ್ಪು ಕಲ್ಪನೆ ದೂರವಾಯಿತು ಮತ್ತು ವಿಶ್ವಾಸಪರವಾದ ಅವರ ಅರಿವಿನಲ್ಲಿ ವರ್ಧನೆ ಉಂಟಾಗಿ ಅವರಿಗೆ ವಿಶ್ವಾಸದ ಹೊಸ ಮಾರ್ಗಗಳು ಕಂಡುಬಂದವು. ಆದರೆ

ಅವರಲ್ಲಿ ವಿಶ್ವಾಸದ ದೃಢತೆ ಉಂಟಾದದ್ದು, ಹಝ್ರತ್ ಮಸೀಹ್ ಮೌಊದ್‌ರ(ಅ) ದೃಷ್ಟಾಂತಗಳನ್ನು ನೋಡಿದ್ದರಿಂದ, ಅವರ ದಿವ್ಯವಾಣಿಯ ನಿಜಾಂಶವನ್ನು ತಿಳಿದಿದ್ದರಿಂದ ಮತ್ತು ಅವರ ದೈವಿಕ ಸಂಬಂಧದಿಂದ್ದಾಗಿತ್ತು. ಅನಂತರ ಅಲ್ಲಾಹನು ಅವರಿಗೆ ಕೆಲವು ದೃಷ್ಟಾಂತಗಳನ್ನು ತೋರಿಸಿ ತನ್ನ ಸಾಮೀಪ್ಯದ ದೃಶ್ಯಗಳನ್ನು ತೋರಿಸಿದನು.

ಹಝ್ರತ್ ಮಸೀಹ್ ಮೌಊದ್‌ರ(ಅ) ದೃಷ್ಟಾಂತಗಳು, ದಿವ್ಯವಾಣಿಗಳು ಮತ್ತು ನಮ್ಮ ಹೃದಯಗಳಲ್ಲಿ ಸಹ ವಿಶ್ವಾಸದ ಕಿರಣಗಳನ್ನು ಬೆಳಗಿಸುವ ಅಲ್ಲಾಹನೊಂದಿಗಿನ ಸಂಬಂಧದ ಪ್ರಾಮುಖ್ಯತೆ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್‌ರು(ರ) ತಮ್ಮದಾದ ಶೈಲಿಯಲ್ಲಿ ಹೀಗೆ ಹೇಳುತ್ತಾರೆ: ಹಝ್ರತ್ ಈಸಾ(ಅ) ಆಕಾಶದಲ್ಲಿ ಖಂಡಿತವಾಗಿಯೂ ಕುಳಿತುಕೊಳ್ಳಲಿ. ಅವರು ಆಕಾಶದಲ್ಲಿ ಜೀವಂತವಿರುವುದು, ನಮ್ಮ ಹೃದಯಲ್ಲಿ ಅಲ್ಲಾಹನು ಮೃತನಾಗಿರುವಷ್ಟು ಹಾನಿಕಾರಕವಲ್ಲ. ನೀವು ಹಝ್ರತ್ ಈಸಾರ(ಅ) ಮರಣದ ವಿಷಯಕ್ಕೆ ಒತ್ತುಕೊಡುತ್ತಾ ಜನರ ಹೃದಯದಲ್ಲಿ ಅಲ್ಲಾಹನನ್ನು ಕೊಲ್ಲುತ್ತಿದ್ದರೆ ಮತ್ತು ಅವನನ್ನು ಜೀವಂತಗೊಳಿಸಲು ಪ್ರಯತ್ನಿಸದಿದ್ದರೆ ಏನು ಪ್ರಯೋಜನ? ಅಲ್ಲಾಹನು **ಹಯ್ಯ್** ಮತ್ತು **ಖಯ್ಯೂಮ್** ಆಗಿರುವನು. (ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ ಎಲ್ಲವನ್ನು ನೆಲೆನಿಲ್ಲಿಸುವವನೂ.) ಅವನು ಎಂದೂ ಮೃತನಾಗುವುದಿಲ್ಲ. ಆದರೆ ಕೆಲವು ಮನುಷ್ಯರ ದೃಷ್ಟಿಯಿಂದ ಅವನು ಮೃತನೂ ಆಗುತ್ತಾನೆ. ಸತ್ಯದಲ್ಲಿ ಅಲ್ಲಾಹನು ಮೃತನಾಗುವುದಿಲ್ಲ ಆದರೆ ಮನುಷ್ಯನು ಅವನನ್ನು ಮರೆಯುವಾಗ, ಅವನ ದೃಷ್ಟಿಯಲ್ಲಿ ಅವನು ಮೃತನಾಗುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮ್ಮ ವಿದ್ವಾಂಸರು ಹಝ್ರತ್ ಈಸಾರನ್ನು(ಅ) ಕೊಲ್ಲಲು ಪ್ರಯತ್ನಿಸುತ್ತಾರೆ. ಆದರೆ ಅದರೊಂದಿಗೆ ಅಲ್ಲಾಹನನ್ನು ಜೀವಂತಗೊಳಿಸಲು ಪ್ರಯತ್ನಿಸುವುದಿಲ್ಲ. ಅಲ್ಲಾಹನ ಬಗ್ಗೆಗಿನ ಅರಿವು ಮತ್ತು ಜ್ಞಾನ ಉಂಟಾಗುವಂತಹ ಚೈತನ್ಯವನ್ನು ಉಂಟು ಮಾಡುವುದಿಲ್ಲ. ನಮ್ಮ ಯಥಾರ್ಥ ಪ್ರಯತ್ನ ಅಲ್ಲಾಹನನ್ನು ಜೀವಂತಗೊಳಿಸಲು ಮತ್ತು ಅವನೊಂದಿಗೆ ಸಂಬಂಧ ವರ್ಧಿಸಲಿಕ್ಕಾಗಿ ಆಗಿರಬೇಕು. ನಮಗೆ ಅಲ್ಲಾಹನೊಂದಿಗೆ ಜೀವಂತ ಸಂಬಂಧವಿದ್ದರೆ, ಹಝ್ರತ್ ಈಸಾ(ಅ) ಜೀವಂತವಿದ್ದಾರೆ ಎಂದು ಯೋಚಿಸುವವರು ಎಷ್ಟು ಬೊಬ್ಬೆ ಹೊಡೆದರೂ ನಮ್ಮ ವಿಶ್ವಾಸಗಳಲ್ಲಿ ಎಂದಿಗೂ ಕೇಡು ಉಂಟಾಗದು. ಏಕೆಂದರೆ ಅಲ್ಲಾಹನು ಪ್ರತಿ ಹೆಜ್ಜೆಯಲ್ಲೂ ನಮಗೆ ನೆರವಾಗಿ ಇರುವನು. ವಿಶ್ವಾಸಾದರ್ಶಕ್ಕೆ ಸಂಬಂಧಪಟ್ಟ ವಿಷಯಗಳಾದ ಖತಮುನ್ನುಬುವ್ವತ್,

ಹಝ್ರತ್ ಈಸಾ ಮಸೀಹರ(ಅ) ಮರಣ ಮುಂತಾದವುಗಳ ಕುರಿತು ಖಂಡಿತವಾಗಿಯೂ ಅರಿವು ಇರಬೇಕು ಮತ್ತು ಇವುಗಳ ಬಗ್ಗೆ ಪುರಾವೆಗಳೊಂದಿಗೆ ನೆಲೆನಿಲ್ಲಲೂ ಬೇಕು. ಆದರೆ ಕರ್ಮಸುಧಾರಣೆಗೆ ಅಲ್ಲಾಹನೊಂದಿಗೆ ಸಂಬಂಧ ಬೆಳೆಸಬೇಕಾಗಿದೆ. ಅದಕ್ಕಾಗಿ ಹಝ್ರತ್ ಮಸೀಹ್ ಮೌಊದ್‌ರು(ಅ) ನಮಗೆ ತೋರಿಸಿದ ಮಾರ್ಗಗಳನ್ನು ಅವಲಂಬಿಸಬೇಕು. ನಾವು ನಮ್ಮ ಮಾತು ಮತ್ತು ಕೃತಿಯ ವೈರುಧ್ಯವನ್ನು ಕೊನೆಗೊಳಿಸಬೇಕು. ನಾವು ಇತರರಿಗೆ ಹೇಳುವ ಸಂಗತಿಯ ಪ್ರಕಾರ ನಾವು ಎಷ್ಟರ ಮಟ್ಟಿಗೆ ನಡೆಯುತ್ತೇವೆ ಎಂದು ನಾವು ನಮ್ಮ ಪರೀಕ್ಷಣೆ ನಡೆಸಬೇಕು.

ನನಗೆ ಖಾದಿಯಾನಿನಿಂದ ಒಬ್ಬ ಆಲಿಮ್ ಹೀಗೆ ಪತ್ರ ಬರೆದಿದ್ದರು: "ವಿರೋಧಿಗಳಿಗೆ ಉತ್ತರ ಕೊಡಲು ಭಾರತದಲ್ಲಿ ಹಿಂದೆ ನಡೆಯುತ್ತಿದ್ದ ಹಾಗಿನ ಸಾರ್ವಜನಿಕ ಸಭೆಗಳು ಈಗ ನಡೆಯುತ್ತಿಲ್ಲ. ನಾವು ಇಂತಹ ಸಮ್ಮೇಳನಗಳಲ್ಲಿ ವಿರೋಧಿಗಳು ವಿವಶರಾಗುವ ರೀತಿಯಲ್ಲಿ ಒಂದರ ನಂತರ ಮತ್ತೊಂದು ಹಲ್ಲೆಗಳನ್ನು ನಡೆಸುತ್ತಿದ್ದೆವು." ಸರಿ, ಹೀಗೆ ಮಾಡುತ್ತಿದ್ದೀರಿ ಎಂಬುದು ಒಳ್ಳೆಯ ಸಂಗತಿ, ವಿರೋಧಿಗಳಿಗೆ ಉತ್ತರ ಕೊಡಬೇಕು. ಅವರ ಮಾತುಗಳಿಗೆ ಪುರಾವೆಗಳೊಂದಿಗೆ ಉತ್ತರ ಕೊಡಬೇಕು. ಆದರೆ ನಮ್ಮ ಮುಅಲ್ಲಿಮರು, ಮುಬಲ್ಲಿಗರು, ಮುರಬ್ಬಿಗಳು ಹಝ್ರತ್ ಮಸೀಹ್ ಮೌಊದ್‌ರ(ಅ) ಆಗಮನದ ಉದ್ದೇಶವನ್ನು ಮನವರಿಕೆ ಮಾಡಿ ಪ್ರತಿಯೊಬ್ಬರ ಅಸ್ತಿತ್ವವೇ ಒಂದು ದೃಷ್ಟಾಂತವಾಗುವ ರೀತಿಯಲ್ಲಿ ತಮ್ಮ ಆಧ್ಯಾತ್ಮಿಕ ಸ್ಥಿತಿಯಲ್ಲೂ ಅಭಿವೃದ್ಧಿ ಹೊಂದಬೇಕಿತ್ತು, ಇದಕ್ಕಾಗಿ ಪ್ರಯತ್ನಿಸಬೇಕು. ಇದೇ ಮಾದರಿಗಳನ್ನು ನೋಡಿ ಜನರು ಜಮಾಅತಿನಲ್ಲಿ ಪ್ರವೇಶಿಸುವಂತಾಗಬೇಕು. ಆದರೆ ನಾವು ಈ ಮಟ್ಟವನ್ನು ತಲುಪಿಲ್ಲ ಎಂದು ನನಗೆ ಬಹಳ ದುಃಖದಿಂದ ಹೇಳಬೇಕಾಗುತ್ತಿದೆ. ಆದ್ದರಿಂದಲೇ ಭಾರತದಲ್ಲಿ ಬಹಳಷ್ಟು ಮುಅಲ್ಲಿಮರನ್ನು ವಜಾ ಮಾಡಬೇಕಾಗಿ ಬಂತು. ಕೆಲವರ ಮೇಲೆ ಲೌಕಿಕತೆ ಮೇಲುಗೈ ಸಾಧಿಸಿತ್ತು. ಈ ಪತ್ರ ಬರೆದ ವ್ಯಕ್ತಿಯೂ ಅದೇ ರೀತಿಯಲ್ಲಿ ನಾವೂ ನಮ್ಮ ಜವಾಬ್ದಾರಿಗಳೇನೆಂದು ನೋಡಬೇಕಾಗಿದೆ. ಹೃದಯಗಳಲ್ಲಿ ವಿಶ್ವಾಸ ತುಂಬಲು ಎಷ್ಟು ಪ್ರಯತ್ನಿಸಿದ್ದಾರೆ ಎಂದು ಮುಅಲ್ಲಿಮರೂ ಮುಬಲ್ಲಿಗರೂ ನೋಡಬೇಕು. ಶುಷ್ಕ ಪುರಾವೆಗಳೊಂದಿಗೆ ಜನರ ಹೃದಯಗಳನ್ನು ಪ್ರಭಾವಿತಗೊಳಿಸಲು ಮತ್ತು ಅಹ್ಮದಿಯೇತರ ಮೌಲವಿಗಳನ್ನು ಓಡಿಸುವುದರಲ್ಲಿಯೇ ಸಂತೃಪ್ತರೂ ಸಂತುಷ್ಟರೂ ಆಗಬಾರದು. ಬದಲಾಗಿ, ನಮ್ಮ ಬಳಿಯಲ್ಲಿರುವ ಅಲ್ಲಾಹನ ಜೀವಂತ ಕುರುಹುಗಳ ಮತ್ತು ದೃಷ್ಟಾಂತಗಳಿಂದ ದೇವನ ಅಸ್ತಿತ್ವವನ್ನು ಲೋಕ ಜನರಿಗೆ

ತೋರಿಸಿರಿ. ಹಝ್ರತ್ ಮಸೀಹ್ ಮೌಊದ್‌ರ(ಅ) ಜೊತೆಗಿರುವ ಅಲ್ಲಾಹನ ಕೃತಿರೂಪದ ಸಾಕ್ಷ್ಯಗಳಿಂದ ಹೃದಯಗಳನ್ನು ಜಯಿಸಿರಿ.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಉದಾಹರಣೆಯನ್ನು ಹೀಗೆ ಕೊಡುತ್ತಾರೆ: ಸೂರ್ಯೋದಯದ ಸಮಯದಲ್ಲಿ ಒಬ್ಬನು ಸೂರ್ಯನು ಉದಿಸಿದಕ್ಕೆ ಪುರಾವೆ ಏನಿದೆ ಎಂದು ಕೇಳಿದರೆ, ಮತ್ತೊಬ್ಬನು ಸೂರ್ಯೋದಯಕ್ಕೆ ಪುರಾವೆಗಳನ್ನು ನೀಡುತ್ತಾ, ಇಷ್ಟು ಸಮಯಕ್ಕೆ ಸೂರ್ಯೋದಯವಾಗುತ್ತದೆ, ಇಷ್ಟು ಸಮಯಕ್ಕೆ ಸೂರ್ಯಾಸ್ತಮಾನವಾಗುತ್ತದೆ, ವಿಜ್ಞಾನ ಹೀಗೆ ಹೇಳುತ್ತದೆ ಎಂದು ಪುರಾವೆ ಕೊಡುವುದಾದರೆ, ಪುರಾವೆ ಕೊಡುತ್ತಿರುವವನೂ ಮೂರ್ಖನಾಗಿರುತ್ತಾನೆ. ಇದಕ್ಕೆ ಸಾಮಾನ್ಯ ಚಿಕಿತ್ಸೆ ಏನೆಂದರೆ, ಸೂರ್ಯೋದಯಕ್ಕೆ ಪುರಾವೆ ಕೇಳುವವನ ದಾಡಿಯ ಕೆಳಗೆ ಕೈಯಿಟ್ಟು ಅವನ ಮುಖವನ್ನು ಎತ್ತಿಕೊಂಡು, ಸೂರ್ಯನನ್ನು ತೋರಿಸಿ; ನೋಡು, ಅದಾಗಿದೆ ಸೂರ್ಯ, ಇದಕ್ಕೆ ಪುರಾವೆಗಳ ಆವಶ್ಯಕತೆಯಿಲ್ಲ, ನಿನ್ನ ಮೂರ್ಖತನದ ಸವಾಲಿಗೆ ಸೂರ್ಯನ ಇರುವಿಕೆಯೇ ಉತ್ತರವೆಂದು ಹೇಳಬೇಕು.

ಆದ್ದರಿಂದ ತಬ್‌ಲೀಗ್ ಮಾಡುವವರು ಸೂರ್ಯೋದಯಕ್ಕೆ ಪುರಾವೆ ಕೊಡುವವರಂತಹ ಮೂರ್ಖರಾಗುವ ಬದಲಿಗೆ, ಹಝ್ರತ್ ಮಸೀಹ್ ಮೌಊದ್‌ರ(ಅ) ಮೂಲಕ ಪ್ರಕಟವಾಗುತ್ತಿರುವ ದೃಷ್ಟಾಂತಗಳಿಂದ, ನಮ್ಮೊಂದಿಗೆ ಯಾವಾಗಲೂ ಇರುವ ಕರ್ಮಪರವಾದ ಸಾಕ್ಷ್ಯಗಳಿಂದ ಅವರ ಮೇಲೆ ಸತ್ಯವನ್ನು ಸಾಬೀತುಗೊಳಿಸಿರಿ. ಅದಕ್ಕಾಗಿ ತಮ್ಮ ಜೀವಿತವನ್ನು ಅಲ್ಲಾಹನ ಸಂತೃಪ್ತಿಕ್ಕನುಗುಣವಾಗಿ ಮಾಡಿರಿ. ಜಮಾಅತಿನ ಜನರ ಕರ್ಮಶಕ್ತಿಯನ್ನು ದೃಢಗೊಳಿಸಿರಿ. ಜಮಾಅತಿನ ಹಿರಿಯರ ಮತ್ತು ಮಕ್ಕಳ ಮುಂದೆ ಇವುಗಳನ್ನು ಇರಿಸಿರಿ. ಪದೇ ಪದೇ ಹೇಳುತ್ತಿರಿ. ಹಝ್ರತ್ ಮಸೀಹ್ ಮೌಊದ್‌ರ(ಅ) ಮೂಲಕ ಅಲ್ಲಾಹನ ವೈಭವ ಹೇಗೆ ಪ್ರಕಟಗೊಂಡಿತು? ಅಲ್ಲಾಹನ ಸಾಮೀಪ್ಯ ಗಳಿಸಲು ಮಾರ್ಗಗಳೇನು? ಅಲ್ಲಾಹನ ಸಂಪ್ರೀತಿ ಹೇಗೆ ಗಳಿಸುವುದು? ಎಂದೆಲ್ಲ ಅವರಿಗೆ ತಿಳಿಸಿಕೊಡಬೇಕು. ಅನಂತರ ನೋಡಿರಿ, ಲೌಕಿಕ ಕಾರ್ಯಗಳನ್ನು ನಕಲು ಮಾಡುವ ಕಡೆಗೆ ಒಲವಿದ್ದ ಯುವಕರು ಅಲ್ಲಾಹನ ಮುಂದೆ ಬಾಗುವವರಾಗುವರು. ಆಗ ಕೇವಲ ಕೆಲವು ಮುಬಲ್ಲಿಗರು ಅಥವಾ ವಿದ್ವಾಂಸರು ಅಹ್ಮದಿಯೇತರ ಮೌಲವಿಗಳನ್ನು ಸದೆಬಡಿಯುವವರು ಆಗಲಾರರು, ಬದಲಾಗಿ ನಮ್ಮ ಸ್ತ್ರೀ – ಪುರುಷರು, ಯುವಕರು ಮತ್ತು ಮಕ್ಕಳು ಸ್ಥಾಪಿಸುವ ಮಾದರಿಗಳು ಲೋಕವನ್ನು ತನ್ನ ಕಡೆಗೆ ಸೆಳೆಯುವುವು.

ಆದ್ದರಿಂದ ತಮ್ಮ ಕರ್ಮಪರವಾದ ಅವಸ್ಥೆಯನ್ನು ಸರಿಪಡಿಸುವುದರ ಕಡೆಗೆ ಗಮನ ಹರಿಸುವುದಾಗಿದೆ ಮೊದಲ ಆವಶ್ಯಕತೆ.

ತಮ್ಮನ್ನು ತಾವೇ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಜೋಡಿಸಿ ಖಿಲಾಫತನ್ನು ಪರಿಪೂರ್ಣವಾಗಿ ಅನುಸರಿಸುವುದು ಎಲ್ಲಕಿಂತ ಮೊದಲ ಆವಶ್ಯಕತೆಯಾಗಿದೆ. ಜಮಾಅತಿನ ದೃಢತೆ ಮತ್ತು ಆಧ್ಯಾತ್ಮಿಕತೆಯ ಅಭಿವೃದ್ಧಿಗೆ ಕಾರಣವಾಗುವುದು ಇದೇ ಆಗಿದೆ. ಕಾಲದ ಖಲೀಫರ ಪ್ರತಿಯೊಂದು ತೀರ್ಮಾನವನ್ನು ಸಂತೋಷದಿಂದ ಅಂಗೀಕರಿಸುವ, ಯಾವುದೇ ರೀತಿಯ ಅಡಚಣೆ ಹೃದಯದಲ್ಲಿ ಉಂಟಾಗದ ಮತ್ತು ಯಾವುದೇ ಮಾತನ್ನು ಕೇಳಿ ಸಂಕೋಚನ ಉಂಟಾಗದಂತಹ ರೀತಿಯಲ್ಲಿ, ಖಿಲಾಫತಿನ ಬಗ್ಗೆ ತಿಳಿವು, ಅದರ ಸರಿಯಾದ ಜ್ಞಾನ ಮತ್ತು ಅರಿವು ಜಮಾಅತಿನಲ್ಲಿ ಉಂಟಾಗಬೇಕು.

ಖಿಲಾಫತಿನ ಬಗ್ಗೆ ಸರಿಯಾದ ಕಲ್ಪನೆ ಮತ್ತು ತಿಳಿವು ಮುರಬ್ಬಿಗಳ ಕೆಲಸಗಳಲ್ಲಿ ಮುಖ್ಯವಾಗಿದೆ. ಅದೇ ರೀತಿ ಹುದ್ದೇದಾರರೂ ಇದರ ಕಡೆಗೆ ಗಮನ ಹರಿಸಬೇಕು. ಕಾಲದ ಖಲೀಫರು ಇಂತಹ ತಪ್ಪಾದ ಕೆಲಸ ಮಾಡಿದ್ದಾರೆ, ತಪ್ಪಾದ ತೀರ್ಮಾನ ಮಾಡಿದ್ದಾರೆ, ಹೀಗೆ ತೀರ್ಮಾನ ಮಾಡಬೇಕಿತ್ತು, ಎಂದೆಲ್ಲ ಹೇಳುವವವರ ಕೆಲವು ಉದಾಹರಣೆಗಳು ಈಗ ಮುಂದೆ ಬರುತ್ತಿವೆ. ಕೆಲವರು ಖಝಾದ ತೀರ್ಮಾನದ ಬಗ್ಗೆ ಆಕ್ಷೇಪಿಸುತ್ತಾ ಇರುತ್ತಾರೆ. ಇಂತಹ ವ್ಯಕ್ತಿಗೆ ಇಂತಹ ಕೆಲಸ ಏಕೆ ಕೊಡಲಾಗಿದೆ. ಅಲ್ಲಿ ಇಂತಹ ವ್ಯಕ್ತಿ ಇರಬೇಕಿತ್ತು, ಕಾಲದ ಖಲೀಫರಿಗೆ ಇಂತಿಂತಹ ವ್ಯಕ್ತಿಗಳ ಬಗ್ಗೆ ಚೆನ್ನಾಗಿ ತಿಳಿದಿದೆ, ಇಂತಹ ವ್ಯಕ್ತಿಗಳ ಬಗ್ಗೆ ಅವರು ಕಣ್ಣು ಮುಚ್ಚಿದ್ದಾರೆ. ಈ ರೀತಿಯ ಮಾತುಗಳನ್ನಾಡುವವರು ಕೆಲವೇ ಇರುತ್ತಾರೆ. ಆದರೆ ಅವರು ವಾತಾವರಣವನ್ನು ಕೆಡಿಸುತ್ತಾರೆ. ಎಲ್ಲ ನೆಲೆಯ ಹಾಗೂ ಪ್ರತಿ ಜಮಾಅತ್ ವ್ಯವಸ್ಥೆಯ ಹುದ್ದೇದಾರರು ಮತ್ತು ಮುರಬ್ಬಿಗಳು ತಮ್ಮ ಕರ್ತವ್ಯಗಳನ್ನು ಮನವರಿಕೆ ಮಾಡಿದರೆ ಕೆಲವು ಹೃದಯಗಳಲ್ಲಿ ಉಂಟಾಗುತ್ತಿರುವ ಸಂಶಯಗಳೂ ಸಂದೇಹಗಳೂ ಎಂದಿಗೂ ಉಂಟಾಗಲಿಕ್ಕಿಲ್ಲ. ಎಲ್ಲ ಅನುಗ್ರಹಗಳು ವ್ಯವಸ್ಥೆಯೊಂದಿಗಿದೆ, ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಶಾಪ ಇಳಿಸಲು ಇಚ್ಛಿಸುವಾಗ ಅದರ ವ್ಯವಸ್ಥೆಯನ್ನು ಎತ್ತಿಬಿಡುತ್ತಾನೆ ಎಂಬ ಸಂಗತಿಯನ್ನು ಹೇಳುವ ಕೆಲಸ ವಿಶೇಷವಾಗಿ ಮುರಬ್ಬಿಗಳದ್ದಾಗಿದೆ. ಈ ಸಂಗತಿಗಳು ಪ್ರತಿಯೊಬ್ಬರ ಅರಿವಿಗೆ ಬರುವಾಗ ಎಡವಿ ಬೀಳುವ ಸಾಧ್ಯತೆ ಇರುವ ಕೆಲವು ಜನರು ಎಡವಿ ಬೀಳುವುದರಿಂದ ಪಾರಾಗುವರು. ಅತಿಬುದ್ಧಿವಂತರೆಂದು ತಮ್ಮನ್ನು ತಾವೇ ಗಣಿಸುವ

ಕೆಲವರಾದರೂ ಯಾವಾಗಲೂ ಇರುತ್ತಾರೆ. ಖಲೀಫ ದೇವನೇನಲ್ಲ, ಸಾಮಾನ್ಯ ಜನರು ತಪ್ಪು ಮಾಡುವಂತೆ ಅವರೂ ತಪ್ಪು ಮಾಡುವ ಸಾಧ್ಯತೆಯಿದೆ ಎಂದೆಲ್ಲ ಅವರು ಎಲ್ಲೆಡೆ ಕುಳಿತು ಮಾತಾಡುತ್ತಿರುತ್ತಾರೆ. ಅವರು ಹೇಳುವುದು ಸರಿಯಾಗಿರಬಹುದು, ಆದರೆ ಹಝ್ರತ್ ಮುಸ್ಲಿಹ್ ಮೌಊದ್[ರ] ಇದಕ್ಕೆ ಉತ್ತಮವಾದೊಂದು ಉತ್ತರ ಕೊಟ್ಟಿದಾರೆ. ಈ ಉತ್ತರ ಎಲ್ಲ ಕಾಲ ಮತ್ತು ಸಮಯಕ್ಕಿರುವುದಾಗಿದೆ. ಅವರು ಹೀಗೆ ಹೇಳುತ್ತಾರೆ: ಖಿಲಾಫತ್ ಸತ್ಯದಲ್ಲಿ ನೆಲೆನಿಂತಿರುವಂಥದ್ದಾಗಿದ್ದರೆ, (ಖಿಲಾಫತ್ ಅಲ್ಲಾಹನ ಕಡೆಯಿಂದ ಲಭ್ಯವಾದ ಉಡುಗೊರೆಯಾಗಿದೆ ಎಂಬ ವಿಶ್ವಾಸ ನಿಮಗಿದ್ದರೆ) ಖಂಡಿತವಾಗಿಯೂ ಖಲೀಫರು ತೀರ್ಮಾನಿಸುವ ಕಾರ್ಯಗಳನ್ನು ನಾವು ಖಂಡಿತ ಸ್ಥಾಪಿಸುವೆವು ಎಂದು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಹೇಳುತ್ತಾನೆ: **"ವಲಯುಮಕ್ಕಿನನ್ನ ಲಹುಮ್ ದೀನುಹುಮುಲ್ಲಧಿರ್‌ತಝಾ ಲಹುಮ್"** ಎಂದರೆ ಖಲೀಫರು ಲೋಕದಲ್ಲಿ ಸ್ಥಾಪಿಸಲು ಇಚ್ಛಿಸುವ ದೀನ್ ಮತ್ತು ತತ್ವವನ್ನು ನಾವು ಖಂಡಿತವಾಗಿಯೂ ಲೋಕದಲ್ಲಿ ಸ್ಥಾಪಿಸುವೆವು.

ಈ ಸಂಗತಿಗಳು ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ದೃಢಗೊಳ್ಳಬೇಕು. ಇವುಗಳು ಪ್ರತಿಯೊಬ್ಬರ ಹೃದಯದಲ್ಲಿ ಉಂಟಾಗುವಂತೆ ಪ್ರಯತ್ನಿಸುವುದು ಮುರಬ್ಬಿಗಳ ಮತ್ತು ಮುಬಲ್ಲಿಗರ ಕೆಲಸವಾಗಿದೆ. ಈ ಜವಾಬ್ದಾರಿಯನ್ನು ತಿಳಿಯಿರಿ. ಹಝ್ರತ್ ಮಸೀಹ್ ಮೌಊದ್‌ರ[ಅ] ಅನುಗ್ರಹಗಳು ಮತ್ತು ಅವರ ವರದಾನಗಳನ್ನು ಜನರಿಗೆ ತೋರಿಸಬೇಕು ಎಂಬ ವಿಷಯಕ್ಕೆ ಒತ್ತುಕೊಡಿರಿ. ಅಲ್ಲಾಹನ ಜೀವಂತ ದೃಷ್ಟಾಂತಗಳ ಪ್ರಸ್ತಾಪ ಆಗುತ್ತಿರಬೇಕು. ಅಲ್ಲಾಹನ ಸಾಮೀಪ್ಯ ಸಿಗುವ ಮಾರ್ಗಗಳೇನು? ಕಾಲದ ಖಲೀಫರನ್ನು ಎಲ್ಲ ಅವಸ್ಥೆಯಲ್ಲೂ ಅನುಸರಿಸಬೇಕಾದ ಮತ್ತು ಜಮಾಅತಿನ ವ್ಯವಸ್ಥೆಯ ಅನುಸರಣೆಯ ಪ್ರಾಮುಖ್ಯತೆ ಏನು? ಎಂದು ಜನರಿಗೆ ತಿಳಿಸಬೇಕು.

ಹೀಗಾದರೆ, ಹೃದಯಗಳ ಸಂಶಯಗಳು ದೂರವಾಗುವುವು. ಈ ರೀತಿಯಿಂದ ಪಿತೂರಿಗಳು ಸ್ವತಃ ನಾಶವಾಗುವುವು. ಈ ರೀತಿಯಿಂದ ಸ್ವಂತ ತಪ್ಪು ಕಲ್ಪನೆ ದೂರ ಮಾಡುವವರ ಮತ್ತು ಜನರ ತಪ್ಪು ಕಲ್ಪನೆ ದೂರ ಮಾಡುವವರ ಸಂಖ್ಯೆ ವರ್ಧಿಸುವುದು. ಆಗ ಜಮಾಅತಿನಲ್ಲಿ ಎಲ್ಲ ರೀತಿಯ ಕರ್ಮಸುಧಾರಣೆಯ ಪ್ರತಿಯೊಂದು ಮಗ್ಗಲುಗಳನ್ನು ಕಾಣಬಹುದು. ಹಝ್ರತ್ ಮಸೀಹ್ ಮೌಊದ್‌ರ[ಅ] ನಿಯೋಗದ ಅತಿಮುಖ್ಯವಾದ ಉದ್ದೇಶ ಇದೇ ಆಗಿದೆ. ಖತಮುನ್ನುಬುವ್ವತ್ ಮತ್ತು ಹಝ್ರತ್ ಈಸಾರ[ಅ] ಮರಣಕ್ಕೆ ಸಂಬಂಧಿಸಿದ ಸಂಗತಿಗಳು ನಾವು ಅರಿತಿರಬೇಕು. ವಿರೋಧಿಗಳಿಗೆ

ಉತ್ತರ ಕೊಡಲು ಇದು ಆವಶ್ಯ. ಆದರೆ ಸತ್ಕರ್ಮ ಮತ್ತು ಜ್ಞಾನವನ್ನು ಜಮಾಅತಿನಲ್ಲಿ ಜಾರಿಗೊಳಿಸಲು ಒಂದು ಪ್ರಯತ್ನದ ಆವಶ್ಯಕತೆ ಇದೆ. ನಮ್ಮ ಆಧ್ಯಾತ್ಮಿಕ ಪರಿಶುದ್ಧಿ ಮತ್ತು ನಮ್ಮ ಕರ್ಮ ಸುಧಾರಣೆಯಿಂದ ಉಂಟಾಗುವ ಪರಿವರ್ತನೆ, ತಬ್‌ಲೀಗ್ ಮೂಲಕ ಉಂಟಾಗುವ ಪರಿವರ್ತನೆಗಿಂತ ಅಧಿಕವಾಗಿರುವುದು. ಇನ್‌ಶಾ ಅಲ್ಲಾಹ್.

**ಮುಬಲ್ಲಿಗ್ ಮತ್ತು ಮುರಬ್ಬಿಗಳು ಹೃದಯಗಳ ಸುಧಾರಣೆ ಮಾಡಲಿ:**

ಹಝ್ರತ್ ಮುಸ್ಲಿಹ್ ಮೌಊದರ(ರ) ಕೆಳಗಿನ ನಿರ್ದೇಶನ ಬಹಳ ಮುಖ್ಯವಾದುದಾಗಿದೆ: ಅವರು ಹೇಳುತ್ತಾರೆ: "ಅವರು (ಎಂದರೆ ಮುಬಲ್ಲಿಗ್ ಮತ್ತು ಮುರಬ್ಬಿಗಳು) ಹೃದಯಗಳ ಸುಧಾರಣೆ ಮಾಡಿದರೆ, ಜನರ ಹೃದಯಗಳಲ್ಲಿ ದೇವಜ್ಞಾನ ಮತ್ತು ಅಲ್ಲಾಹನ ಪ್ರೀತಿ ಉಂಟು ಮಾಡಿಸಿದರೆ, ಕೋಟಿಗಟ್ಟಲೆ ಜನರು ಅಹ್ಮದಿಯತಿನಲ್ಲಿ ಪ್ರವೇಶಿಸಲು ತೊಡಗುವರು. ಅಲ್ಲಾಹನು ಸ್ವತಃ ಹೇಳುತ್ತಾನೆ:

إِذَا جَاءَ نَصْرُ اللهِ وَالْفَتْحُ وَرَأَيْتَ النَّاسَ يَدْخُلُونَ فِي دِينِ اللهِ أَفْوَاجًا فَسَبِّحْ بِحَمْدِ رَبِّكَ وَاسْتَغْفِرْهُ إِنَّهُ كَانَ تَوَّابًا

ಈ ವಚನದ ತಾತ್ಪರ್ಯವೇನೆಂದರೆ, ನೀವು ತಬ್‌ಲೀಗ್ ಮೂಲಕ ತಮ್ಮ ಧರ್ಮವನ್ನು ಪ್ರಚಾರ ಮಾಡುವಿರಾದರೆ, ಜನರು ಒಂದೊಂದಾಗಿ, ಮೆಲ್ಲಮೆಲ್ಲನೆ ನಿಮ್ಮ ಕಡೆಗೆ ಬರುವರು. ಆದರೆ ನೀವು ಇಸ್ತಿಗ್‌ಫಾರ್ ಮತ್ತು ತಸ್‌ಬೀಹ್ ಮಾಡುತ್ತಾ (ಕ್ಷಮೆ ಯಾಚನೆ ಮತ್ತು ಅಲ್ಲಾಹನ ಪಾವಿತ್ರ್ಯವನ್ನು ಕೊಂಡಾಡುತ್ತಾ) ತಮ್ಮೊಳಗಿನ ಪಾಪಗಳನ್ನು ದೂರ ಮಾಡುವಿರಾದರೆ, ಜನರು ಗುಂಪು ಗುಂಪಾಗಿ ನಿಮ್ಮೊಂದಿಗೆ ಬಂದು ಸೇರುವರು.

ಅಹ್ಮದಿಯೇತರರನ್ನು ಸದೆಬಡೆಯುತ್ತಿದ್ದೆವು ಎಂದು ನನಗೆ ಪತ್ರ ಬರೆದ ಆಲಿಮ್ (ತಿಳಿಯಬೇಕಾದ ಸಂಗತಿ ಏನೆಂದರೆ) ಕರ್ಮ ಸುಧಾರಣೆಯಿಂದ ಲಭಿಸುವ ಉದ್ದೇಶ ಸದೆಬಡಿಯುವುದರಿಂದ ಪೂರ್ತಿ ಆಗುವುದಿಲ್ಲ. ಆದ್ದರಿಂದ ಕರ್ಮಸುಧಾರಣೆಯ ಕಡೆಗೆ ಶ್ರದ್ಧೆವಹಿಸಿಕೊಂಡು ಖಲೀಫರ ಪ್ರತಿನಿಧಿ ಮತ್ತು ಸಹಾಯಕರಾಗಲು ಪ್ರಯತ್ನಿಸಿರಿ. ವರ್ಷಗಟ್ಟಲೆ ಶುಷ್ಕ ಸಂವಾದಗಳಲ್ಲಿ ನಮಗೆ ಸಿಕ್ಕಿಬೀಳಲಾಗದು. ನಾವು ಜಮಾಅತನ್ನು ಪ್ರಗತಿಯ ಕಡೆಗೆ ಕೊಂಡೊಯ್ಯಬೇಕಾಗಿದೆ. ಇನ್‌ಶಾ ಅಲ್ಲಾಹ್. ಅದಕ್ಕಾಗಿ ಬೇರೆ ರೀತಿಯ ಕೆಲವು ಮಾರ್ಗಗಳನ್ನು ಕೈಗೊಳ್ಳಬೇಕಾಗುವುದು. ಅದು ನಾನು ಹೇಳಿದಂತೆ ಕರ್ಮ ಸುಧಾರಣೆಯ ಮಾರ್ಗವಾಗಿದೆ. ಆದ್ದರಿಂದ

ನಾವು ನಮ್ಮ ಕರ್ಮಗಳನ್ನು ಉತ್ತಮಗೊಳಿಸಬೇಕು; ನಾವು ನಮ್ಮ ಪ್ರಾಮಾಣಿಕತೆ ಮತ್ತು ನಿಷ್ಠೆಯ ಮಟ್ಟವನ್ನು ಉನ್ನತಗೊಳಿಸಬೇಕಾಗಿದೆ.

**ಪ್ರಧಾನ ಆಯುಧ ದುಆ ಆಗಿದೆ:**

ಮುರಬ್ಬಿಗಳು ಈ ಕಡೆಗೆ ಜನರ ಗಮನ ಹರಿಸುವುದರೊಂದಿಗೆ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತನ್ನ ಆತ್ಮಪರೀಕ್ಷಣೆ ನಡೆಸಿ ಸುಧಾರಣೆ ಮಾಡಬೇಕಾದ ಆವಶ್ಯಕತೆಯಿದೆ. ಅದರೊಂದಿಗೆ ಅತಿ ದೊಡ್ಡ ಆಯುಧವಾದ ಪ್ರಾರ್ಥನೆಯನ್ನು ಯಾವಾಗಲೂ ತಮ್ಮ ಮುಂದಿರಿಸಬೇಕಾಗಿದೆ. ಅದರ ಸರಿಯಾದ ಉಪಯೋಗ ಮತ್ತು ಸರಿಯಾದ ಪ್ರಯೋಜನ ಪಡೆಯಲು **ಈಮಾನಿನಲ್ಲಿ ಅಭಿವೃದ್ಧಿ ಹೊಂದಿರಿ** ಎಂಬ ಅಲ್ಲಾಹನ ಆದೇಶ ಮುಂದಿರಿಸಿರಿ ಹಾಗೂ ಸತ್ಕರ್ಮ ಮಾಡಲಿಕ್ಕಾಗಿ ನಾನು ನೀಡಿದ ಕಾರ್ಯ ಚಟುವಟಿಕೆಗಳ ರೂಪರೇಷೆ ಪ್ರಕಾರ ನಡೆಯಿರಿ. ಒಟ್ಟಿನಲ್ಲಿ, ಈ ಸತ್ಕರ್ಮ ಮತ್ತು ಪ್ರಾರ್ಥನೆ ಒಟ್ಟೊಟ್ಟಿಗೆ ಮುಂದೆ ಹೋಗುವುದಾದರೆ, ಯಥಾರ್ಥ ಸುಧಾರಣೆ ಯಾಗುವುದು. ಅಲ್ಲಾಹನು ನಮಗೆಲ್ಲರಿಗೂ ಅದನ್ನು ಪಡೆಯುವ ಸೌಭಾಗ್ಯ ನೀಡಲಿ.

*

(9)

## ಜುಮುಅ ಖುತ್‌ಬದ ಸಾರಾಂಶ (07/02/2014)

### ಕರ್ಮಸುಧಾರಣೆಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳು:

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಕರ್ಮ ಸುಧಾರಣೆಗೆ ಸಂಬಂಧಿಸಿದ ತನ್ನ ಖುತ್‌ಬದಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರ(ರ) ಒಂದು ವರದಿ ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳನ್ನು ಮುಂದಿರಿಸಿದರು. ಹುಝೂರ್ ಹೇಳಿದರು:

ಕಾಲದ ಖಲೀಫ ಯಾವುದಾದರೂ ವಿಷಯದ ಕಡೆಗೆ ಗಮನ ಹರಿಸಿದರೆ, ಅದು ಸುಧಾರಣೆಗೆ ಸಂಬಂಧಿಸಿದ್ದಾಗಿದ್ದರೆ ಜಮಾಅತಿನ ಒಂದು ದೊಡ್ಡ ವಿಭಾಗ ಸುಧಾರಣೆ ಕಡೆಗೆ ಶ್ರದ್ಧೆ ವಹಿಸುತ್ತದೆ ಎಂಬುದು ಸಹ ಅಹ್ಮದಿಯಾ ಜಮಾಅತಿನ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಔದಾರ್ಯವಾಗಿದೆ. ಅದರ ಅಂದಾಜು ನನಗೆ ಸಿಗುವ ಪತ್ರದಿಂದ ಆಗುತ್ತದೆ. ಅದೇ ರೀತಿಯಲ್ಲಿ ಅಲ್ಲಾಹನು ಖಿಲಾಫತ್‌ಗೆ ನೀಡಿರುವ ಕೆಲವು ಸಹಾಯಕರು ಸಹ ಕೆಲವು ಉಲ್ಲೇಖಗಳನ್ನು ತಮ್ಮ ನೆನಪಿನ ಆಧಾರದಲ್ಲಿ ಹುಡುಕಿ ಕೊಡುತ್ತಾರೆ. ನಾನು ಇಂದು ನಿಮ್ಮ ಮುಂದಿರಿಸುವ ಉಲ್ಲೇಖದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಚಿಂತೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಸಹ ನಮ್ಮ ಒಬ್ಬ ಮುರಬ್ಬಿ ಸಾಹಿಬರು ನನಗೆ ಕಳುಹಿಸಿದ್ದಾರೆ. ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ವರದಿ ಮಾಡುತ್ತಾರೆ:

ಮೌಲವಿ ಸಯ್ಯದ್ ಮುಹಮ್ಮದ್ ಸರ್‌ವರ್ ಶಾಹ್ ಸಾಹಿಬ್(ರ) ನನ್ನೊಂದಿಗೆ ಹೀಗೆ ಹೇಳಿದರು: ಒಂದು ಸಲ ಯಾವುದೋ ಕೆಲಸಕ್ಕೆ ಸಂಬಂಧಿಸಿ ಮೀರ್ ನಾಸಿರ್ ನವಾಬ್ ಸಾಹಿಬ್‌ರಿಗೆ ಮೌಲವಿ ಮುಹಮ್ಮದ್ ಅಲಿ ಸಾಹಿಬ್‌ರೊಂದಿಗೆ ತಕರಾರು ಉಂಟಾಯಿತು. ಮೀರ್ ಸಾಹಿಬ್ ಕೋಪಗೊಂಡು ಒಳಗೆ ಹೋಗಿ ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಭಿನ್ನಾಭಿಪ್ರಾಯವಾದ ಬಗ್ಗೆ ಮತ್ತು ಕೋಪಗೊಂಡ ಬಗ್ಗೆ ದೂರುಕೊಟ್ಟರು. ದೂರುಕೊಟ್ಟ ಬಗ್ಗೆ ಮೌಲವಿ ಮುಹಮ್ಮದ್ ಅಲಿ ಸಾಹಿಬರಿಗೆ ಅರಿವಾದಾಗ, ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಬಳಿಗೆ ಬಂದು ಹೀಗೆ ಹೇಳಿದರು: ನಾವು ಹುಝೂರಿಗಾಗಿ, ಹುಝೂರಿನೊಂದಿಗೆ ಇದ್ದುಕೊಂಡು

ದೀನಿನ ಸೇವೆಯ ಸಂದರ್ಭ ಸಿಗಲಿಕ್ಕಾಗಿ ಬಂದಿರುವೆವು. ಆದರೆ ಹುಝೂರಿಗೆ ನಮ್ಮ ದೂರುಗಳು ಹೀಗೆ ತಲುಪಿದ್ದರೆ, ಹುಝೂರ್ ಸಹ ಮನುಷ್ಯನಾದ ಕಾರಣ, ಯಾವುದಾದರೂ ಸಮಯದಲ್ಲಿ ಹುಝೂರಿನ ಮನಸ್ಸಲ್ಲಿ ನಮ್ಮ ಬಗ್ಗೆ ತಪ್ಪು ಕಲ್ಪನೆ ಉಂಟಾಗುವ ಸಾಧ್ಯತೆ ಇದೆ, ಅಂತಹ ಅವಸ್ಥೆಯಲ್ಲಿ, ನಮಗೆ ಖಾದಿಯಾನಿಗೆ ಬಂದುದರಿಂದ ಪ್ರಯೋಜನ ಉಂಟಾಗುವ ಬದಲಾಗಿ ನಷ್ಟವುಂಟಾಗುವುದು. ಇದನ್ನು ಕೇಳಿ ಹಝ್ರತ್ ಮಸೀಹ್ ಮೌಊದ್‌ರು[ಅ] ಹೇಳಿದರು: ಮೀರ್ ಸಾಹಿಬ್ ನನ್ನ ಬಳಿ ಬಂದು ಏನೋ ಹೇಳಿದ್ದರು ಎಂಬುದು ನಿಜ. ಆದರೆ ಆಗ ನಾನು ಅವರು ಏನನ್ನು ಹೇಳಿದರು, ಏನನ್ನು ಹೇಳಿಲ್ಲ ಎಂದು ಗೊತ್ತಾಗದಷ್ಟು ನನ್ನ ಯೋಚನೆಯಲ್ಲಿ ಮುಳುಗಿದ್ದೆ. ಕೆಲವು ದಿನಗಳಿಂದ ಒಂದು ಯೋಚನೆ ನನ್ನ ಮನಸ್ಸಲ್ಲಿ ಬಹಳ ಶಕ್ತವಾಗಿ ಉಂಟಾಗುತ್ತಿದೆ. ಅದು ಇತರ ಸಂಗತಿಗಳಿಂದ ನನ್ನನ್ನು ಸಂಪೂರ್ಣವಾಗಿ ಬೇರ್ಪಡಿಸಿದೆ. (ಇದು ಶ್ರದ್ಧೆಯಿಂದ ಕೇಳಬೇಕಾದ ಸಂಗತಿಯಾಗಿದೆ) ಕುಳಿತಿರುವಾಗಲೂ ಏಳುತ್ತಿರುವಾಗಲೂ ಅದೇ ಚಿಂತೆ ನನ್ನ ಮುಂದೆ ಇರುತ್ತದೆ. ನಾನು ಹೊರಗೆ ಜನರೊಂದಿಗೆ ಕುಳಿತ್ತಿರುತ್ತೇನೆ ಮತ್ತು ಒಬ್ಬ ವ್ಯಕ್ತಿ ನನ್ನೊಂದಿಗೆ ಏನಾದರೂ ಹೇಳುತ್ತಿರುತ್ತಾನೆ, ಆಗಲೂ ನನ್ನ ಮನಸ್ಸಲ್ಲಿ ಇದೇ ಚಿಂತೆ ಸುತ್ತಾಡುತ್ತಿರುತ್ತದೆ. ನಾನು ಅವನ ಮಾತುಗಳನ್ನು ಕೇಳುತ್ತಿದ್ದೇನೆ ಎಂದು ಆ ವ್ಯಕ್ತಿ ಭಾವಿಸುತ್ತಿರಬಹುದು, ಆದರೆ ನಾನು ನನ್ನ ಚಿಂತೆಯಲ್ಲಿ ಮಗ್ನನಾಗಿರುತ್ತೇನೆ. ನಾನು ಮನೆಗೆ ಹೋಗುವಾಗ, ಅಲ್ಲಿಯೂ ಈ ಚಿಂತೆ ನನ್ನೊಂದಿಗೆ ಇರುತ್ತದೆ. ಒಟ್ಟಿನಲ್ಲಿ ಕೆಲವು ದಿನಗಳಿಂದ ಈ ಚಿಂತೆ ನನ್ನ ಮನಸ್ಸಲ್ಲಿ ಎಷ್ಟು ಶಕ್ತವಾಗಿ ಬೇರೂರಿದೆ ಎಂದರೆ, ಬೇರೆ ಚಿಂತೆಗಳಿಗೆ ಎಡೆಯಿಲ್ಲ. ಆ ಚಿಂತೆ ಏನು? ಅದು ಹೀಗೆ: ನನ್ನ ಬರುವಿಕೆಯ ಯಥಾರ್ಥ ಉದ್ದೇಶ ಏನು? ಅದೇನೆಂದರೆ, ನೈಜ ಸತ್ಯವಿಶ್ವಾಸಿಗಳ, ಅಲ್ಲಾಹನಲ್ಲಿ ಯಥಾರ್ಥ ವಿಶ್ವಾಸ ಹೊಂದಿರುವ, ಇಸ್ಲಾಮನ್ನು ತನ್ನ ಜೀವಿತಕ್ರಮವಾಗಿ ಕೈಗೊಂಡಿರುವ, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಅತ್ಯುತ್ತಮ ಮಾದರಿಯನ್ನು ಪಾಲಿಸುವ, ಸುಧಾರಣೆ ಮತ್ತು ಭಯಭಕ್ತಿಯ ಮಾರ್ಗದಲ್ಲಿ ನಡೆಯುವ, ಉನ್ನತ ನೈತಿಕ ಗುಣದ ಮಾದರಿಯನ್ನು ಸ್ಥಾಪಿಸುವ ಜಮಾಅತನ್ನು ತಯಾರು ಮಾಡಬೇಕೆಂದಾಗಿದೆ. ಹೀಗೆ ಇಂತಹ ಜಮಾಅತ್ ಮೂಲಕ ಲೋಕ ಸನ್ಮಾರ್ಗ ಹೊಂದಲಿ ಮತ್ತು ಅಲ್ಲಾಹನ ಇಚ್ಛೆ ಪೂರ್ತಿಯಾಗಲಿ ಎಂದಾಗಿದೆ. ಈ ಉದ್ದೇಶ ಈಡೇರುವುದಿಲ್ಲವಾದರೆ, ಪುರಾವೆಗಳು ಮತ್ತು ಸಾಕ್ಷ್ಯಾಧಾರಗಳ ಮೂಲಕ ನಾವು ಶತ್ರುಗಳ ಮೇಲೆ ಮೇಲುಗೈ ಸಾಧಿಸಿದರೂ ಅವರನ್ನು ಪೂರ್ಣವಾಗಿ ಪರಾಜಿತಗೊಳಿಸಿದರೂ

(ವಿಜಯ ಸಾಧಿಸಿದರೂ) ನಮ್ಮ ಈ ವಿಜಯ ಎಂಬುದು ವಿಜಯವಲ್ಲ. ಏಕೆಂದರೆ ನಮ್ಮ ಆಗಮನದ ಯಥಾರ್ಥ ಉದ್ದೇಶ ಈಡೇರದಿದ್ದರೆ, ನಮ್ಮ ಎಲ್ಲ ಕೆಲಸಗಳು ವ್ಯರ್ಥವೆಂದಾಯಿತು. ಆದರೆ ನಾನು ನೋಡುವುದೇನೆಂದರೆ, ಪುರಾವೆಗಳು ಮತ್ತು ಸಾಕ್ಷ್ಯಾಧಾರಗಳ ಮೂಲಕ ವಿಜಯದ ಕುರುಹುಗಳು ಸುವ್ಯಕ್ತವಾಗಿ ಕಂಡು ಬರುತ್ತಿವೆ. ಶತ್ರುಗಳು ಸಹ ಅವರ ಬಲಹೀನತೆಗಳನ್ನು ಅರಿಯಲು ತೊಡಗಿದ್ದಾರೆ. ಆದರೆ ನಮ್ಮ ನಿಯೋಗದ ಯಥಾರ್ಥ ಉದ್ದೇಶಕ್ಕೆ ಸಂಬಂಧವಾಗಿ, ಈಗಲೂ ಜಮಾಅತಿನಲ್ಲಿ ಬಹಳ ಕೊರತೆಯಿದೆ. ಬಹಳಷ್ಟು ಶ್ರದ್ಧೆವಹಿಸಬೇಕಾದ ಆವಶ್ಯಕತೆ ಇದೆ. ನನ್ನನ್ನು ಬಹಳ ದಿನಗಳಿಂದ ಚಿಂತಿತನನ್ನಾಗಿ ಮಾಡುತ್ತಿರುವ ಯೋಚನೆ ಇದಾಗಿದೆ. ಎಂದೂ ನನ್ನನ್ನು ಬಿಡದ ರೀತಿಯಲ್ಲಿ ಅದು ನನ್ನಲ್ಲಿ ಬೇರೂರಿದೆ.

ಒಟ್ಟಿನಲ್ಲಿ ಅವರನ್ನು ಅಸಮಾಧಾನಗೊಳಿಸುತ್ತಿದ್ದ ನೋವು ಇದಾಗಿತ್ತು. ಒಬ್ಬ ಅಹ್ಮದಿ ಹೇಗಿರಬೇಕೆಂದು ಅವರು ವಿವಿಧ ಸಂದರ್ಭಗಳಲ್ಲಿ ಉಪದೇಶಿಸಿದ್ದರು. ಇತರ ಗ್ರಂಥಗಳಲ್ಲದೆ, ಮಲ್‌ಫೂಝಾತಿನ ಹತ್ತು ಭಾಗಗಳಲ್ಲಿ ಯಾವುದೇ ಭಾಗವನ್ನು ನೀವು ತೆಗೆಯಿರಿ. ಅಲ್ಲಿ ಜಮಾಅತಿನ ಮೇಲಿನ ಪ್ರತೀಕ್ಷೆಗಳು, ಜಮಾಅತಿಗೆ ಉಪದೇಶಗಳು, ಕರ್ಮಪರವಾದ ಪರಿವರ್ತನೆಗೆ ಸಂಬಂಧಿಸಿದ ವಿಷಯಗಳನ್ನು ವಿವಿಧ ರೀತಿಯಲ್ಲಿ, ಪ್ರತಿಯೊಂದು ಸ್ಥಳ ಮತ್ತು ಪ್ರತಿಯೊಂದು ಸಭೆಯಲ್ಲಿ ವಿವರಿಸಿದ್ದಾಗಿ ಕಾಣಬಹುದಾಗಿದೆ. ಅವುಗಳಿಂದ ಕೆಲವನ್ನು ನಾನು ನಿಮ್ಮ ಮುಂದಿರಿಸುತ್ತೇನೆ. ಒಂದು ಕಡೆಯಲ್ಲಿ ಅವರು ಹೇಳುತ್ತಾರೆ:

**“**ಜಮಾಅತಿನ ಐಕ್ಯ ಮತ್ತು ಪ್ರೀತಿಯ ಬಗ್ಗೆ ನಾನು ಹಿಂದೆ ಸಹ ಅನೇಕ ಬಾರಿ ಹೇಳಿರುವೆನು. ನೀವು ಪರಸ್ಪರ ಐಕ್ಯದಿಂದ ಇರಿ ಮತ್ತು ಒಟ್ಟಾಗಿರಿ. ಒಗ್ಗಟ್ಟಿನಿಂದ ಇರದಿದ್ದರೆ ನಿಮ್ಮ ಶಕ್ತಿ ಕ್ಷಯಿಸುವುದು ಎಂದು ಅಲ್ಲಾಹನು ಮುಸ್ಲಿಮರಿಗೆ ಉಪದೇಶಿಸಿದ್ದನು. ನಮಾಝಿನಲ್ಲಿ ಒಬ್ಬರು ಮತ್ತೊಬ್ಬರೊಂದಿಗೆ ತಾಗಿ ನಿಲ್ಲಬೇಕೆಂಬ ಆಜ್ಞೆ ಇರುವುದು ಅನ್ಯೋನ್ಯ ಐಕ್ಯ ಉಂಟಾಗಲಿಕ್ಕಾಗಿದೆ. ಇದರಿಂದ ಮಿಂಚಿನ ಶಕ್ತಿಯ ಹಾಗೆ ಒಬ್ಬರ ಒಳಿತು ಮತ್ತೊಬ್ಬರೊಳಗೆ ಪ್ರವೇಶಿಸುವುದು. ಭಿನ್ನತೆ ಇದ್ದು, ಐಕ್ಯವಿಲ್ಲದಿದ್ದರೆ ನಿರ್ಭಾಗ್ಯವಂತರಾಗುವಿರಿ. **ಅನ್ಯೋನ್ಯ ಪ್ರೀತಿಸಬೇಕೆಂದೂ ಒಬ್ಬನು ಮತ್ತೊಬ್ಬನಿಗೆ ಅವನ ಅನುಪಸ್ಥಿತಿಯಲ್ಲಿ ಪ್ರಾರ್ಥಿಸಬೇಕೆಂದೂ** ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇಳಿದ್ದಾರೆ. (ಒಬ್ಬರು ಮತ್ತೊಬ್ಬರಿಗೆ ಅವರ ಅನುಪಸ್ಥಿತಿಯಲ್ಲಿ ದುಆ ಮಾಡುವವರು ನಮ್ಮಲ್ಲಿ ಎಷ್ಟಿದ್ದಾರೆ ಎಂದು ನೋಡಬೇಕಾದ ಆವಶ್ಯಕತೆ ಇದೆ.) ಒಬ್ಬ ವ್ಯಕ್ತಿ ಮತ್ತೊಬ್ಬನಿಗೆ ಅವನ

ಅನುಪಸ್ಥಿತಿಯಲ್ಲಿ ದುಆ ಮಾಡಿದರೆ, 'ನಿನಗೂ ಹಾಗೆಯೇ ಆಗಲಿ' ಎಂದು ಮಲಕುಗಳು ಪ್ರಾರ್ಥಿಸುವರು. ಎಷ್ಟು ಉತ್ತಮವಾದ ಸಂಗತಿಯಾಗಿದೆ. ಮನುಷ್ಯನ ಪ್ರಾರ್ಥನೆ ಅಂಗೀಕರಿಸಲ್ಪಡದೆ ಇದ್ದರೂ, ಮಲಕುಗಳ ದುಆ ಅಂಗೀಕರಿಸಲ್ಪಡುತ್ತದೆ. ಆದ್ದರಿಂದ ಪರಸ್ಪರ ಭಿನ್ನತೆ ಉಂಟು ಮಾಡದಿರಿ ಎಂದು ನಾನು ನಿಮಗೆ ಉಪದೇಶಿಸುತ್ತೇನೆ."

ಅವರು ಹೇಳುತ್ತಾರೆ: "ನಾನು ಎರಡೇ ವಿಷಯಗಳನ್ನು ತೆಗೆದುಕೊಂಡು ಬಂದಿದ್ದೇನೆ. ಒಂದು, ಅಲ್ಲಾಹನ ಏಕತ್ವ ಸ್ಥಾಪಿಸಿರಿ; ಎರಡು, ಪರಸ್ಪರ ಪ್ರೀತಿ ಮತ್ತು ಸಹಾನುಭೂತಿ ಪ್ರಕಟಿಸಿರಿ. ಅನ್ಯರಿಗೆ ದೃಷ್ಟಾಂತವಾಗುವಂತಹ ಮಾದರಿ ತೋರಿಸಿರಿ. ಸಹಾಬಿವರ್ಯರಲ್ಲಿ ಇದ್ದ ಪುರಾವೆ ಇದೇ ಆಗಿತ್ತು. كُنْتُمْ أَعْدَاءً فَأَلَّفَ بَيْنَ قُلُوبِكُمْ **ಕುನ್‌ತುಮ್ ಅಅ್‌ದಾಅನ್ ಫಅಲ್ಲಫ ಬೈನ ಖುಲೂಬಿಕುಮ್** ಎಂದರೆ 'ನೀವು ಪರಸ್ಪರ ಶತ್ರುಗಳಾದ್ದೀರಿ, ಅವನು ನಿಮ್ಮ ಹೃದಯಗಳನ್ನು ಒಂದುಗೂಡಿಸಿದನು' (3:104) ನೆನಪಿಡಿರಿ, ಸಾಮರಸ್ಯ ಒಂದು ದೃಷ್ಟಾಂತವಾಗಿದೆ. ನಿಮ್ಮಲ್ಲಿ ಯಾರಾದರೂ ತನಗೆ ಇಷ್ಟಪಡುವುದನ್ನು ತನ್ನ ಸಹೋದರನಿಗೆ ಇಷ್ಟಪಡುವುದಿಲ್ಲವಾದರೆ ಅವನು ನನ್ನ ಜಮಾಅತಿಗೆ ಸೇರಿದವನಲ್ಲ. ಅವನು ಅಪಾಯ ಮತ್ತು ವಿಪತ್ತಿನಲ್ಲಿದ್ದಾನೆ. ಅವನ ಅಂತ್ಯ ಒಳ್ಳೆಯದಾಗಲಿಕ್ಕಿಲ್ಲ."

ಅವರು ಹೇಳುತ್ತಾರೆ: "ವಿದ್ವೇಷದ ಕೊನೆಗೊಳ್ಳುವಿಕೆ ಮಹ್‌ದಿಯ ದೃಷ್ಟಾಂತವಾಗಿದೆ. ಈ ದೃಷ್ಟಾಂತ ಈಡೇರದೇ ಇರುವುದೇ? ಅದು ಖಂಡಿತ ಈಡೇರುವುದು. ನೀವೇಕೆ ಸಹನೆ ಕೈಗೊಳ್ಳುವುದಿಲ್ಲ. ಕೆಲವು ರೋಗಗಳಲ್ಲಿ ಕೆಲವು ಸಮಸ್ಯೆಗಳನ್ನು ಬೇರು ಸಹಿತ ಕಿತ್ತೆಸೆಯದಿದ್ದರೆ ರೋಗ ಕೊನೆಗೊಳ್ಳುವುದಿಲ್ಲ ಎಂದು ವೈದ್ಯಕೀಯ ಶಾಸ್ತ್ರ ಹೇಳುತ್ತದೆ. ನನ್ನಿಂದ ಸಾತ್ವಿಕರ ಒಂದು ಜಮಾಅತ್ ಸ್ಥಾಪಿತವಾಗುವುದು. ಪರಸ್ಪರ ಶತ್ರುತ್ವದ ಕಾರಣವೇನು? ಜಿಪುಣತೆ, ಅಹಂಭಾವ, ಸ್ವಾರ್ಥತೆ ಮತ್ತು ದುರಾವೇಶ ಆಗಿವೆ. ತಮ್ಮ ದುರಾವೇಶವನ್ನು ನಿಯಂತ್ರಿಸದ, ಪರಸ್ಪರ ಸ್ನೇಹ ಮತ್ತು ಸಾಹೋದರ್ಯದಿಂದ ಇರಲಿಕ್ಕಾಗದ ಜನರನ್ನು ನಾನು ಜಮಾಅತಿನಿಂದ ಬೇರ್ಪಡಿಸುವೆನು. ಹೀಗಿರುವವರು ಕೆಲವು ದಿನಗಳ ಅತಿಥಿಗಳಾಗಿದ್ದಾರೆ ಎಂದು ಅವರು ನೆನಪಿಡಲಿ. ಉನ್ನತ ಮಾದರಿ ಪ್ರಕಟಿಸುವ ವರೆಗೆ ಯಾರ ಕಾರಣದಿಂದಲೂ ನಾನು ಆಕ್ಷೇಪಿಸಲ್ಪಡುವುದನ್ನು ಇಷ್ಟಪಡುವುದಿಲ್ಲ. ನನ್ನ ಜಮಾಅತಿನಲ್ಲಿ ಇದ್ದು ನನ್ನ ಇಚ್ಛೆ ಪ್ರಕಾರ ಇರದವನು ಒಣ ಕೊಂಬೆಯಂತೆ. ಅದನ್ನು ತೋಟಗಾರ ಕಡಿಯದೆ ಬೇರೆ ಏನು ಮಾಡುವನು? ಒಣ ಕೊಂಬೆ

ಇತರ ಹಸಿರು ಕೊಂಬೆಯೊಂದಿಗೆ ಇದ್ದುಕೊಂಡು ನೀರನ್ನು ಹೀರುತ್ತದೆಯಾದರೂ ಹಸಿರಾಗಲಿಕ್ಕಿಲ್ಲ. ಬದಲಾಗಿ, ಅವುಗಳನ್ನೂ ನಾಶ ಮಾಡುವುದು. ಆದ್ದರಿಂದ ಭಯಪಡಿರಿ, ತನ್ನ ಚಿಕಿತ್ಸೆ ಮಾಡದವನು ನನ್ನೊಂದಿಗೆ ಇರದು.**"**

ಈ ಉಲ್ಲೇಖವನ್ನು ಇದಕ್ಕೆ ಮುಂಚೆ ಸಹ ಅನೇಕ ಬಾರಿ ಕೇಳಿದ್ದೇವೆ, ಓದಿದ್ದೇವೆ, ಆದರೆ ಮೊದಲು ಪ್ರಸ್ತಾಪಿಸಲಾದ ಉಲ್ಲೇಖದೊಂದಿಗೆ (ಕೆಲವು ದಿನಗಳಿಂದ ಕರ್ಮಸುಧಾರಣೆ ಕುರಿತಿನ ಚಿಂತೆಯಲ್ಲದೆ ನನಗೆ ಬೇರೆ ಯಾವುದರ ಬಗ್ಗೆಯೂ ಶ್ರದ್ಧೆ ಉಂಟಾಗುತ್ತಿಲ್ಲ ಎಂಬ ಹಝ್ರತ್ ಮಸೀಹ್ ಮೌಊದರ(ಅ) ನೋವಿನ ಪ್ರಸ್ತಾಪ) ಇದನ್ನು ಸೇರಿಸಿ ನೋಡಿದರೆ ಒಂದು ಪ್ರತ್ಯೇಕವಾದ ಚಿಂತೆ ಉಂಟಾಗುತ್ತದೆ.

ಒಬ್ಬ ವ್ಯಕ್ತಿ ಯಾವಾಗ ಯಥಾರ್ಥ ಸತ್ಯವಿಶ್ವಾಸಿಯಾಗುತ್ತಾನೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **"**ಎಲ್ಲಿ ವರೆಗೆ ಪ್ರತಿಯೊಂದು ಸಂಗತಿಯಲ್ಲೂ ಅಲ್ಲಾಹನಿಗೆ ಆದ್ಯತೆ ಕೊಡಲಾಗುವುದಿಲ್ಲವೋ ಮತ್ತು ಹೃದಯವನ್ನು ಪರೀಕ್ಷಿಸಿ ಅಲ್ಲಾಹನು ತನ್ನದೇ ಆಗಿದ್ದಾನೆ ಎಂದು ಹೇಳಲಾಗುವುದಿಲ್ಲವೋ ಅಲ್ಲಿ ವರೆಗೆ ಯಾರನ್ನೂ ಯಥಾರ್ಥ ಸತ್ಯವಿಶ್ವಾಸಿ ಎಂದು ಹೇಳಲಾಗಲಿಕ್ಕಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀಚನನ್ನು ಸಹ ಮುಸಲ್ಲಿ ಅಥವಾ ಮೂಅ್‌ಮಿನ್ ಎಂದು ಹೇಳಲಾಗುವ ಹಾಗೆ ಇಂತಹ ವ್ಯಕ್ತಿ ಹೆಸರಿಗೆ ಮುಸ್ಲಿಮ್ ಅಥವಾ ಮೂಅ್‌ಮಿನ್ ಆಗಿರುತ್ತಾನೆ. **"ಅಸ್ಲಮ ವಜ್‌ಹಹೂ ಲಿಲ್ಲಾಹಿ"** (ಎಂದರೆ, ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾಗುವುದು) ಎಂಬ ವಚನಕ್ಕೆ ಸರಿಹೊಂದುವ ವ್ಯಕ್ತಿ ಮಾತ್ರ ಯಥಾರ್ಥ ಮುಸ್ಲಿಮನಾಗಿರುತ್ತಾನೆ. ಒಬ್ಬ ಮುಸ್ಲಿಮ್ ಒಬ್ಬ ಯಹೂದಿಯನ್ನು ಮುಸ್ಲಿಮನಾಗಲು ಆಹ್ವಾನಿಸುತ್ತಾನೆ. (ಆಹ್ವಾನಿಸಿದ ವ್ಯಕ್ತಿ ಸ್ವತಃ ದುರಾಚಾರಿಯಾಗಿದ್ದನು) ಯಹೂದಿ ದುರಾಚಾರಿಯಾದ ವ್ಯಕ್ತಿಯೊಂದಿಗೆ ಹೀಗೆ ಹೇಳುತ್ತಾನೆ: ನೀನು ಮೊದಲು ನಿನ್ನ ಬಗ್ಗೆ ನೋಡು. ನೀನು ಮುಸ್ಲಿಮನೆಂದು ಕರೆಯಲ್ಪಡುತ್ತಿದ್ದೀಯಾ ಎಂಬ ಕಾರಣದಿಂದ ಜಂಬ ಕೊಚ್ಚದಿರು. ಅಲ್ಲಾಹನು ಇಸ್ಲಾಮಿನ ತಿರುಳನ್ನು ನಿನ್ನಿಂದ ಇಚ್ಛಿಸುತ್ತಾನೆ, ಕೇವಲ ಹೆಸರು ಮತ್ತು ಪದವನ್ನಲ್ಲ.**"**

ಅವರು ಹೇಳುತ್ತಾರೆ: **"**ನೆನಪಿಡಿರಿ, ಕರ್ಮವಿಲ್ಲದೆ, ಕೇವಲ ವಾಕ್‌ಸಾಮರ್ಥ್ಯ ಮತ್ತು ವಾಕ್‌ಚಾತುರ್ಯ ಕೆಲಸಕ್ಕೆ ಬಾರದು. ಕೇವಲ

ಬಾಯಿ ಮಾತುಗಳಿಗೆ ಅಲ್ಲಾಹನ ಸನ್ನಿಧಿಯಲ್ಲಿ ಯಾವುದೇ ಬೆಲೆಯಿಲ್ಲ. ಅಲ್ಲಾಹನು ಹೇಳುತ್ತಾನೆ: كَبُرَ مَقْتًا عِنْدَ اللهِ أَنْ تَقُولُوا مَا لَا تَفْعَلُونَ **ಕಬುರ ಮಖ್‌ತನ್ ಇಂದಲ್ಲಾಹಿ ಅನ್ ತಖೂಲು ಮಾಲಾ ತಫ್‌ಅಲೂನ್** (61:4) ಎಂದರೆ, 'ನೀವು ಮಾಡದಿರುವುದನ್ನು ಹೇಳುವುದು ಅಲ್ಲಾಹನ ದೃಷ್ಟಿಯಲ್ಲಿ ಅತಿ ಅನಿಷ್ಟಕರವಾಗಿದೆ'. ನೀವು ಇಸ್ಲಾಮಿನ ಸೇವೆ ಮಾಡಲು ಇಚ್ಛಿಸುವುದಾದರೆ, ಮೊದಲು ಸ್ವತಃ ತಖ್ವಾ (ದೇವಭಕ್ತಿ) ಮತ್ತು ಪರಿಶುದ್ಧಿ ಕೈಗೊಳ್ಳಿರಿ. ಅಲ್ಲಾಹನು ಹೇಳುತ್ತಾನೆ:وَصَابِرُوا وَرَابِطُوا **"ಸಾಬಿರೂ ವ ರಾಬಿತೂ"** ಎಂದರೆ ಸ್ಥೈರ್ಯದಲ್ಲಿ ನೀವು ಮೇಲ್ಮೆಯನ್ನು ಸಾಧಿಸಿರಿ; ಸರಹದ್ದುಗಳ ಕಾವಲುಗಾಯಿರಿ. ಇದು ಪವಿತ್ರ ಖುರ್‌ಆನಿನ ಸೂರಃ ಆಲಿ ಇಮ್ರಾನಿನ ವಚನವಾಗಿದೆ."

"ಶತ್ರುಗಳಿಗೆ ಎದುರಾಗಿ, ಅವರು ಗಡಿ ದಾಟದಿರಲು ಸರಹದ್ದುಗಳಲ್ಲಿ ಕುದುರೆಯನ್ನು ಕಟ್ಟುವುದು ಆವಶ್ಯಕವಾಗಿರುವ ಹಾಗೆಯೇ, ಶತ್ರುಗಳು ಸರಹದ್ದು ದಾಟಿಕೊಂಡು ಇಸ್ಲಾಮಿಗೆ ಹಾನಿ ಉಂಟುಮಾಡುವ ಅವಸ್ಥೆ ಉಂಟಾಗದಿರಲು ನೀವು ಸಹ ತಯಾರಾಗಿರಿ. ನೀವು ಇಸ್ಲಾಮಿಗೆ ನೆರವು ಮತ್ತು ಸೇವೆ ಮಾಡಲು ಇಚ್ಛಿಸುವಿರಾದರೆ, ಮೊದಲು ಸ್ವತಃ ಭಯಭಕ್ತಿ ಮತ್ತು ಪರಿಶುದ್ಧಿ ಕೈಗೊಳ್ಳಿರಿ. ಆಗ ನೀವು ಸ್ವತಃ ಅಲ್ಲಾಹನ ಅಭಯದ ಶಕ್ತಿಶಾಲಿ ಕೋಟೆಯೊಳಗೆ ಆಗುವಿರಿ ಮತ್ತು ನಿಮಗೆ ಈ ಸೇವೆಯ ಮಾನ್ಯತೆ ಹಾಗೂ ಅರ್ಹತೆ ಲಭಿಸುವುದು. ಮುಸ್ಲಿಮರ ಬಾಹ್ಯವಾದ ಶಕ್ತಿ ಎಷ್ಟು ದುರ್ಬಲಗೊಂಡಿದೆ ಎಂದು ನೀವು ನೋಡುತ್ತಿದ್ದೀರಿ. ಸಮುದಾಯಗಳು ಅವರನ್ನು ದ್ವೇಷ ಮತ್ತು ನಿಂದನೀಯ ದೃಷ್ಟಿಯಿಂದ ನೋಡುತ್ತಿದೆ. ನಿಮ್ಮ ಆಂತರಿಕ ಶಕ್ತಿ ಸಹ ದುರ್ಬಲಗೊಂಡರೆ, ಎಲ್ಲದರ ಕೊನೆ ಆಯಿತು ಎಂದು ಅರಿಯಿರಿ. ಪರಿಶುದ್ಧ ಶಕ್ತಿ ಪ್ರವೇಶಿಸಲಿಕ್ಕಾಗಿ ನಿಮ್ಮ ಹೃದಯಗಳನ್ನು ಶುದ್ಧಿಗೊಳಿಸಿ ಅವುಗಳನ್ನು ಸರಹದ್ದು ಕಾವಲುಗಾಯುವ ಕುದುರೆಗಳ ಹಾಗೆ ದೃಢ ಮತ್ತು ಸುರಕ್ಷಿತಗೊಳಿಸಿರಿ. ಅಲ್ಲಾಹನ ಅನುಗ್ರಹ ಯಾವಾಗಲೂ ಮುತ್ತಖಿ (ಭಯಭಕ್ತಿಯುಳ್ಳವನು) ಮತ್ತು ಸಾತ್ವಿಕರೊಂದಿಗೆ ಇರುತ್ತದೆ. ಇಸ್ಲಾಮಿಗೆ ಕಳಂಕ ಉಂಟು ಮಾಡುವ ರೀತಿಯ ಸ್ವಭಾವ ಮತ್ತು ನಡತೆಯನ್ನು ಕೈಗೊಳ್ಳದಿರಿ. ದುರಾಚಾರಿಗಳಿಂದ ಮತ್ತು ಇಸ್ಲಾಮಿನ ಪಾಠಗಳ ಪ್ರಕಾರ ನಡೆಯದವರಿಂದ ಇಸ್ಲಾಮಿಗೆ ಕಳಂಕ ಉಂಟಾಗುತ್ತದೆ. ಒಬ್ಬ ಮುಸ್ಲಿಮನು ಶರಾಬು ಕುಡಿದು, ವಾಂತಿ ಮಾಡುತ್ತಾ ಅಲೆಯುತ್ತಿರುತ್ತಾನೆ. ಅವನ ಮುಂಡಾಸು ಕುತ್ತಿಗೆಗೆ ಬಂದಿರುತ್ತದೆ, ಕೊಳಕು ತೋಡಲ್ಲಿ

ಬೀಳುತ್ತಿರುತ್ತಾನೆ, ಪೊಲೀಸಿನ ಪೆಟ್ಟು ತಿನ್ನುತ್ತಾನೆ. ಹಿಂದುಗಳು ಮತ್ತು ಕ್ರೈಸ್ತರು ಇದನ್ನು ನೋಡಿ ನಗುತ್ತಾರೆ. ಅವನ ಈ ಶರೀಅತ್ ವಿರುದ್ಧ ಕೃತ್ಯಗಳು ಕೇವಲ ಅವನನ್ನು ಅಪಹಾಸ್ಯಕ್ಕೆ ಗುರಿಮಾಡುವುದಿಲ್ಲ, ಬದಲಾಗಿ ಅದರ ಪ್ರಭಾವ ಪರೋಕ್ಷವಾಗಿ ಇಸ್ಲಾಮಿಗೆ ತಲುಪುತ್ತದೆ. ನಾನು ಇಂತಹ ವಾರ್ತೆಗಳನ್ನು ಮತ್ತು ಜೈಲಿನ ವರದಿಗಳನ್ನು ಓದುವಾಗ ನನಗೆ ಬಹಳ ದುಃಖ ಉಂಟಾಗುತ್ತದೆ. ಇಷ್ಟೊಂದು ಮುಸ್ಲಿಮರು ದುರಾಚಾರಗಳ ಕಾರಣ ಶಿಕ್ಷಾರ್ಹರಾದರು ಎಂದು ನೋಡುವಾಗ ಹೃದಯ ವ್ಯಾಕುಲಗೊಳ್ಳುತ್ತದೆ. ನೇರವಾದ ಮಾರ್ಗವನ್ನು ಹೊಂದಿರುವ ಈ ಜನರು ತಮ್ಮ ದುಷ್ಕರ್ಮಗಳಿಂದ ಕೇವಲ ತಮಗೆ ಹಾನಿ ಉಂಟುಮಾಡುತ್ತಿಲ್ಲ, ಬದಲಾಗಿ, ಇಸ್ಲಾಮನ್ನು ಅಪಹಾಸ್ಯಕ್ಕೆ ಗುರಿ ಮಾಡುತ್ತಾರೆ.”

“ನಾನು ಹೇಳಿದುವುದರ ತಾತ್ಪರ್ಯ, ಮುಸ್ಲಿಮರು ಮುಸ್ಲಿಮರೆಂದು ಕರೆಯಿಸಿಕೊಂಡು ನಿಷಿದ್ಧ ಕೃತ್ಯಗಳಲ್ಲಿ ಮುಳುಗುತ್ತಾರೆ. ಅದು ಅವರನ್ನು ಮಾತ್ರವಲ್ಲ, ಬದಲಾಗಿ ಇಸ್ಲಾಮನ್ನು ಸಹ ಸಂಶಯಾಸ್ಪದವನ್ನಾಗಿ ಮಾಡುತ್ತದೆ. ಅವಿಶ್ವಾಸಿಗಳಿಗೂ ನಿಮ್ಮ ಮೇಲೆ (ಅದು ಸತ್ಯದಲ್ಲಿ ಇಸ್ಲಾಮಿನ ಮೇಲಾಗಿರುತ್ತದೆ) ಆಕ್ಷೇಪ ಮಾಡುವ ಸಂದರ್ಭ ಉಂಟಾಗದ ರೀತಿಯಲ್ಲಿ ನಿಮ್ಮ ನಡತೆ ಮತ್ತು ಜೀವಿತ ರೀತಿಯನ್ನು ಮಾಡಿರಿ.”

ನಾವೆಲ್ಲರೂ ಪಡೆಯಲು ಶ್ರಮಿಸಬೇಕಾದ ಮತ್ತು ಪಡೆಯಬೇಕಾದ ಮಟ್ಟ ಇದಾಗಿದೆ. ಭಯಭಕ್ತಿಯೊಂದಿಗೆ ನಡೆಯುವುದು, ತಮ್ಮ ಕರ್ಮ ಸುಧಾರಣೆ, ತಮ್ಮ ವಿಶ್ವಾಸದ ಮಟ್ಟವನ್ನು ಉನ್ನತಗೊಳಿಸುವುದು; ಇವುಗಳೆಲ್ಲ ಸಾಮಾನ್ಯ ವಿಷಯಗಳಲ್ಲ. ನಾವು ಕಾಲಘಟ್ಟದ ಇಮಾಮರನ್ನು ಅಂಗೀಕರಿಸಿರುವಾಗ, ಅವರ ಪ್ರತೀಕ್ಷೆಗಳನ್ನು ಈಡೇರಿಸಲು, ನಾವು ಸಂಪೂರ್ಣ ರೀತಿಯಲ್ಲಿ ಪ್ರಯತ್ನಿಸಬೇಕಾಗಿದೆ. ಪ್ರತಿಯೊಂದು ಸಣ್ಣ ಸಣ್ಣ ಒಳಿತುಗಳನ್ನು ಮಾಡಲು ಪ್ರಯತ್ನಿಸಬೇಕಾಗಿದೆ. ಪ್ರತಿಯೊಂದು ಕೆಡುಕುಗಳೊಂದಿಗೆ ಪರಿಪೂರ್ಣ ರೀತಿಯಲ್ಲಿ ದ್ವೇಷ ಉಂಟಾಗಬೇಕು. ಪ್ರೀತಿ, ಪ್ರೇಮ ಮತ್ತು ಸಾಹೋದರ್ಯವನ್ನು ವರ್ಧಿಸಬೇಕಾಗಿದೆ. ಪರಸ್ಪರ ಸಹಾಯಕರಾಗುವ ಆವಶ್ಯಕತೆ ಇದೆ. ಹೀಗೆ ಮಾಡಿದರೆ ಮಾತ್ರ ನಾವು ನಮ್ಮ ಬೈಅತಿನ ಹಕ್ಕನ್ನು ಈಡೇರಿಸುವವರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ದಯಪಾಲಿಸಲಿ. ಆಮೀನ್.

*